ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 18 ಭಾನುವಾರ 2023

ಸಂಪುಟ: 44 | ಸಂಚಿಕೆ: 63 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಜಯದೇವ ಆಸ್ಪತ್ರೆಯಲ್ಲಿ ಯಶಸ್ವಿ ಉಚಿತ ಆಂಜಿಯೋಪ್ಲಾಸ್ಟಿ ಕಾರ್ಯಾಗಾರ



ಮೈಸೂರು, ಜೂ.17–ಮೈಸೂರು ಜಯದೇವ ಆಸ್ಪತ್ರೆಯಲ್ಲಿ 2 ದಿನ ನಡೆದ ಉಚಿತ ಆಂಜಿಯೋಪ್ಲಾಸ್ಟಿ ಕಾರ್ಯಾಗಾರ ಯಶಸ್ವಿಯಾಗಿದ್ದು, ಸುಮಾರು 60 ಹೃದಯ ರೋಗಿಗಳಿಗೆ ಸ್ಟಂಟ್ ಅಳವಡಿಸಿ ಚಿಕಿತ್ಸೆ ನೀಡಲಾಗಿದೆ ಎಂದು ಮೈಸೂರು ಜಯದೇವ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ್ ತಿಳಿಸಿದರು.

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮೆಡ್ಟ್ರಾನಿಕ್ಸ್ ಅಮೆರಿಕಾದ ಡಾ.ಗೋವಿಂದರಾಜು, ಸುಬ್ರಹ್ಮಣಿ ಹಾರ್ಟ್ ಫೌಂಡೇಷನ್ ವಿಷನ್ ಸಸ್ ಅಮೆರಿಕಾ ಸಹಯೋಗದೊಂದಿಗೆ ನಡೆದ ಕಾರ್ಯಾಗಾರ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆದಿದೆ ಎಂದರು.

ಅಮೆರಿಕಾದ ಡಾ.ಗೋವಿಂದರಾಜು, ಸುಬ್ರಹ್ಮಣಿ ಹಾರ್ಟ್ ಫೌಂಡೇಷನ್‌ನ ಡಾ.ಸುಬ್ರಹ್ಮಣಿ ಮಾತನಾಡಿ, ನಾನು ಮೈಸೂರಿನಲ್ಲಿ ಹುಟ್ಟಿ ಬೆಳೆದು ವೈದ್ಯನಾಗಿ ಕಳೆದ 14 ವರ್ಷಗಳಿಂದ ಕನ್ನಡನಾಡಿನ ಜನರ ಸೇವೆ ಮಾಡುತ್ತಿದ್ದೇನೆ. ಈ ಬಾರಿಯು 250 ಸ್ಟಂಟ್‌ಗಳನ್ನು ಉಚಿತವಾಗಿ ನೀಡಿದ್ದೇನೆ. ಯುಎಸ್‌ಎನಲ್ಲಿರುವ ಅಡ್ವಾನ್ಸ್ ಟೆಕ್ನಾಲಜಿಗಿಂತಲೂ ಉತ್ತಮವಾದ ಸೇವೆ ಜಯದೇವ ಆಸ್ಪತ್ರೆಯಲ್ಲಿ ಸಿಗುತ್ತಿದ್ದು ಇಷ್ಟೊಂದು ದೊಡ್ಡ ಹೃದಯ ರೋಗಿಗಳ ಆಸ್ಪತ್ರೆ ಪ್ರಪಂಚದಲ್ಲಿ ಎಲ್ಲಿಯೂ ಇಲ್ಲ. ಇದು ಆಶ್ಚರ್ಯಕರವಾಗಿದೆ. ಡಾ.ಸಿ.ಎನ್.ಮಂಜುನಾಥ್ ತಮ್ಮ ನೇತೃತ್ವದಲ್ಲಿ ತುಂಬಾ ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ವೈದ್ಯರು, ಸಿಬ್ಬಂದಿ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ ಎಂದರು. ಇದೇ ವೇಳೆ ಮೂವರು ಬಡ ರೋಗಿಗಳಿಗೆ ಧನ ಸಹಾಯ ಮಾಡಿದರು.

ಕಾರ್ಯಾಗಾರದಲ್ಲಿ ಡಾ.ಸಂತೋಷ್, ಡಾ.ವೀಣಾನಂಜಪ್ಪ, ಡಾ.ಶ್ರೀಧರ್, ಡಾ. ಜಯಶೀಲನ್, ಡಾ.ನಿಖಿಲ್, ಡಾ.ಭಾರತಿ, ಡಾ.ದಿನೇಶ್, ನರ್ಸಿಂಗ್ ಅಧೀಕ್ಷಕ ಹರೀಶ್ ಕುಮಾರ್, ಪಿಆರ್‌ಒ ವಾಣಿ ಮೋಹನ್, ಶುಶ್ರೂಷಕರಾದ ಗುರುಮೂರ್ತಿ, ಸತೀಶ್, ಬಾಲರಾಜ್, ಪ್ರತಾಪ್, ಮಹಾದೇವಿ, ದೀಪಿಕಾ ಇನ್ನಿತರರು ಭಾಗವಹಿಸಿದ್ದರು.

ಜೋಸ್ ಆಲುಕ್ಕಾಸ್ 2ನೇ ಹಂತದ ಹೆಚ್‌ಯುಐಡಿ ಅಭಿಯಾನಕ್ಕೆ ಪ್ರವೇಶ

ಮೈಸೂರು,ಜೂ.17–ಕೆಲವು ತಿಂಗಳ ಹಿಂದೆ ಕೇಂದ್ರ ಸರ್ಕಾರವು ಆರು ಅಂಕಿಗಳ ಹಾಲ್‌ಮಾರ್ಕಿಂಗ್ ಅನ್ನು ಕಡ್ಡಾಯಗೊಳಿಸಿದ ನಂತರ ದಕ್ಷಿಣ ಭಾರತದ ಪ್ರಮುಖ ಆಭರಣ ಗ್ರೂಪ್‌ಗಳಲ್ಲಿ ಒಂದಾದ ಜೋಸ್ ಆಲುಕ್ಕಾಸ್ ಎರಡನೇ ಹಂತದ ಹೆಚ್‌ಯುಐಡಿ (ಹಾಲ್ ಮಾರ್ಕ್ ಯೂನಿಕ್ ಐಡೆಂಟಿಫಿಕೇಶನ್) ಅಭಿಯಾನಕ್ಕೆ ಪ್ರವೇಶಿಸಿದೆ.

JOS ALUKKAS
A TRADITION OF FINE JEWELLERY

ಅಭಿಯಾನದ ಅಂಗವಾಗಿ ಜೋಸ್ ಆಲುಕ್ಕಾಸ್ HUID ಜಾಗೃತಿ ಕುರಿತು ಟಿವಿ ಜಾಹೀರಾತನ್ನು ಬಿಡುಗಡೆ ಮಾಡಿದ ದೇಶದ ಮೊದಲ ಆಭರಣ ಸಮೂಹವಾಗಿದೆ. ಕೇರಳ ಮೂಲದ ಆಭರಣ ಸಮೂಹವು ಕೂಡ ಹಳೆಯ ಚಿನ್ನದ ಆಭರಣಗಳನ್ನು ಹೊಸ HUID ಹಾಲ್‌ಮಾರ್ಕ್ ಆಭರಣಗಳೊಂದಿಗೆ ವಿನಿಮಯ ಮಾಡಿಕೊಳ್ಳಲು ವಿನಿಮಯ ಉತ್ಸವವನ್ನು ನಡೆಸಿತು.

ನೂರಾರು ಜನರು ತಮ್ಮ ಹಳೆಯ ಆಭರಣಗಳನ್ನು HUID ಮಾರ್ಕ್ ಮಾಡಿ ಹೊಸ ಆಭರಣಗಳಾಗಿ ಬದಲಾಯಿಸಲು ಜೋಸ್ ಆಲುಕ್ಕಾಸ್ ಎಕ್ಸ್‌ಚೇಂಜ್ ಆಫರ್ ಅನ್ನು ಪಡೆದುಕೊಂಡಿದ್ದಾರೆ.

ಭಾರತದಲ್ಲಿ ಪ್ರತಿದಿನ ಲಕ್ಷಗಟ್ಟಲೆ ಜನರು ಚಿನ್ನಾಭರಣಗಳನ್ನು ಖರೀದಿಸುತ್ತಾರೆ. ಆದರೆ ದುರದೃಷ್ಟವಶಾತ್, ಅವರಲ್ಲಿ ಕೇವಲ ಮೂರು ಪ್ರತಿಶತದಷ್ಟು ಜನರು HUID ಬಗ್ಗೆ ಅರಿವನ್ನು ಹೊಂದಿದ್ದಾರೆ. ಜೋಸ್ ಆಲುಕ್ಕಾಸ್ ಎಚ್‌ಯುಐಡಿ ಜಾಗೃತಿ ಕಾರ್ಯಕ್ರಮಗಳಲ್ಲಿ ಭಾರಿ ಹೂಡಿಕೆ ಮಾಡಿದ್ದಾರೆ ಎಂದು ಜೋಸ್ ಆಲುಕ್ಕಾಸ್ ಗ್ರೂಪ್‌ನ ಅಧ್ಯಕ್ಷ ಜೋಸ್ ಆಲುಕ್ಕಾಸ್ ತಿಳಿಸಿದ್ದಾರೆ.

ಈ ಹಿಂದೆ, ಮಾರುಕಟ್ಟೆಯಲ್ಲಿ ನೈತಿಕವಲ್ಲದ ಆಚರಣೆಗಳ ವಿರುದ್ಧ ಹೋರಾಡುವುದರ ಜೊತೆಗೆ ಗುಣಮಟ್ಟ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಕೇಂದ್ರವು ಚಿನ್ನದ ಆಭರಣಗಳಲ್ಲಿ HUID ಅನ್ನು ಕಡ್ಡಾಯಗೊಳಿಸಿದ ನಂತರ ಜೋಸ್ ಆಲುಕ್ಕಾಸ್ HUID ಎಕ್ಸ್‌ಚೇಂಜ್ ಫೆಸ್ಟ್ ಸೇರಿದಂತೆ ಹಲವಾರು ಕಾರ್ಯಕ್ರಮಗಳನ್ನು ಪ್ರಾರಂಭಿಸಿತು.

ಈಗ ನಡೆಯುತ್ತಿರುವ ಫೆಸ್ಟ್‌ನಲ್ಲಿ ಗ್ರಾಹಕರಿಗೆ ತಮ್ಮ ಹಳೆಯ ಚಿನ್ನದ ಆಭರಣಗಳನ್ನು ಹೊಸ HUID ಮಾರ್ಕ್‌ನ ಚಿನ್ನದ ಆಭರಣಗಳೊಂದಿಗೆ ವಿನಿಮಯ ಮಾಡಿಕೊಳ್ಳುವ ಅವಕಾಶವನ್ನು ಜೋಸ್ ಆಲುಕ್ಕಾಸ್ ನೀಡುತ್ತದೆ. ಈ ಫೆಸ್ಟ್ ಕೂಡ ಆಕರ್ಷಕ ಕೊಡುಗೆಗಳನ್ನು ಪ್ರಕಟಿಸಿದೆ ಎಂದು ಜೋಸ್ ಆಲುಕ್ಕಾಸ್ ತಿಳಿಸಿದ್ದಾರೆ.

ಜು.1, 2ರಂದು ಮೈಸೂರು ಸಾಹಿತ್ಯೋತ್ಸವ



ಶುಭಾ ಸಂಜಯ್

ಮೈಸೂರು, ಜೂ. 17– ಮೈಸೂರು ಸಾಹಿತ್ಯೋತ್ಸವ–2023ರ 7ನೇ ಆವೃತ್ತಿಯನ್ನು ಜು.1 ಮತ್ತು 2ರಂದು ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಮೈಸೂರು ಸಾಹಿತ್ಯ ಉತ್ಸವದ ನಿರ್ದೇಶಕಿ ಶುಭಾ ಸಂಜಯ್ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರತಿ ವರ್ಷ, ಮೈಸೂರು ಸಾಹಿತ್ಯ ಹಬ್ಬವು ದೂರದ ಸ್ಥಳಗಳಿಗೆ ತಲುಪುತ್ತಿರುವುದಲ್ಲದೆ, ವ್ಯಾಪಕವಾಗಿ ಪ್ರೇಕ್ಷಕರು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯಾಸಕ್ತರನ್ನು ಆಕರ್ಷಿಸುತ್ತಿದೆ. ಅಲ್ಲದೆ ಅವರ ಸಾಹಿತ್ಯವನ್ನು ಪ್ರದರ್ಶಿಸಲು ಒಂದು ಉತ್ತಮ ವೇದಿಕೆಯಾಗಿದೆ. ಈ ವರ್ಷ ರಾಷ್ಟ್ರಮಟ್ಟದ ಪ್ರಶಸ್ತಿ ವಿಜೇತ ಲೇಖಕರು ಮತ್ತು ಅಂತರರಾಷ್ಟ್ರೀಯ ಖ್ಯಾತಿ ಸಾಹಿತಿಗಳು ಉತ್ಸವದಲ್ಲಿ ಭಾಗವಹಿಸುವರು ಎಂದರು.

ಅಲ್ಲದೆ, ಒಬ್ಬರ ಆಸಕ್ತಿ ಮತ್ತು ಅಭಿರುಚಿ ಅವಲಂಬಿಸಿ, ಅರ್ಥಶಾಸ್ತ್ರ, ಯುವ ಪ್ರೀತಿ, ಸಣ್ಣ ಕಥೆಗಳು, ಮಂಗಳಮುಖಿಯರ ಜಾನಪದ ಕಲಾವಿದರ ಜೀವನ, ಕನ್ನಡ ಸಾಹಿತ್ಯ–ಸಂಸ್ಕೃತಿ, ಆರೋಗ್ಯ, ಪರಿಸರ, ಇಂಗ್ಲಿಷ್‌ಗೆ ಶಾಸ್ತ್ರೀಯ ಅನುವಾದ ಉತ್ಸವದಲ್ಲಿ ಇರುತ್ತದೆ ಎಂದು ಮೈಸೂರು ಸಾಹಿತ್ಯ ಉತ್ಸವದ ನಿರ್ದೇಶಕಿ, ಮೈಸೂರು ಬುಕ್ ಕ್ಲಬ್ಸ್–2015 ಮತ್ತು ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷೆ ಶುಭಾ ಸಂಜಯ್ ತಿಳಿಸಿದ್ದಾರೆ.

ಸಾಫ್ಟ್‌ವೇರ್ ಇಂಜಿನಿಯರ್ ನಾಪತ್ತೆ

ಮೈಸೂರು, ಜೂ.17–ಸಾಫ್ಟ್‌ವೇರ್ ಇಂಜಿನಿಯರ್ ನಾಪತ್ತೆಯಾಗಿರುವ ಬಗ್ಗೆ ಮೈಸೂರಿನ ಕನಕಗಿರಿಯಿಂದ ವರದಿಯಾಗಿದೆ. ಅಲ್ಲಿನ ನಿವಾಸಿ ಡಿ.ಮಹದೇವ ಎಂಬುವರ ಪುತ್ರಿ ಅನುಷಾ(22) ನಾಪತ್ತೆಯಾದ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು, ಜೂ.15ರಂದು ಬೆಳಗ್ಗೆ ಮಹದೇವ ಅವರ ನಾದಿನಿ ರೇಖಾ ಅವರು ಮೈಸೂರು ನಗರ ಬಸ್ ನಿಲ್ದಾಣಕ್ಕೆ ಅನುಷಾ ಅವರನ್ನು ಡ್ರಾಪ್ ಮಾಡಿದ್ದಾರೆ. ಅಂದು ಸಂಜೆ 7 ಗಂಟೆ ಸಮಯದಲ್ಲಿ "ನಾನು ಬೇರೆ ಕಡೆ ಕೆಲಸಕ್ಕೆ ಹೋಗುತ್ತಿದ್ದೇನೆ, ನನ್ನ ಸ್ನೇಹಿತೆ ಜೊತೆ ಇದ್ದೇನೆ, ನನ್ನನು ಹುಡುಕಬೇಡಿ. ನಾನು ಉಪಯೋಗಿಸುವ ಮೊಬೈಲ್ ನಂಬರ್ ಅನ್ನು ಇನ್ನು ಮುಂದೆ ಉಪಯೋಗಿಸುವುದಿಲ್ಲ" ಎಂದು ರೇಖಾ ಅವರಿಗೆ ಅನುಷಾ ಮೆಸೇಜ್ ಮಾಡಿದ್ದು, ಈವರೆಗೂ ಮನೆಗೆ ಹಿಂತಿರುಗಿಲ್ಲ ಎಂದು ಮಹದೇವ ನೀಡಿದ ದೂರನ್ನು ದಾಖಲಿಸಿಕೊಂಡಿರುವ ದೇವರಾಜ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಶಿಷ್ಯವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ.17–2023–24ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಕಾನೂನು ಪದವೀಧರರಿಗೆ ನ್ಯಾಯವಾದಿ ವೃತ್ತಿಯ ಪ್ರಾಯೋಗಿಕ ತರಬೇತಿ ಕಾರ್ಯಕ್ರಮದಡಿ ಶಿಷ್ಯವೇತನಕ್ಕಾಗಿ ಅರ್ಹ ಪರಿಶಿಷ್ಟ ಜಾತಿಯ ಕಾನೂನು ಪದವೀಧರರು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ www.sw.kar.nic.in ನಲ್ಲಿ ಜುಲೈ 15ರವರೆಗೆ ಅರ್ಜಿಗಳನ್ನು ನೋಂದಾಯಿಸಲು ಅವಕಾಶವಿದೆ ಎಂದು ತಿ.ನರಸೀಪುರ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ



ಭಾಗ್ಯಮ್ಮ

ಮೈಸೂರು,ಜೂ.17–ಮೈಸೂರಿನ ಉದಯಗಿರಿ ನಿವಾಸಿ ಮತ್ತು ಲೇಟ್ ಪುಟ್ಟಸ್ವಾಮಿ ಅವರ ಪತ್ನಿ ಶ್ರೀಮತಿ ಭಾಗ್ಯಮ್ಮ (70) ಅವರು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಶುಕ್ರವಾರ ರಾತ್ರಿ ನಿಧನರಾದರು. ಮೃತರು ಮಕ್ಕಳಾದ ರಾಜೇಶ್, ಆಶಾ, ವೀಣಾ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಗಾಂಧಿನಗರದ ಸ್ಮಶಾನದಲ್ಲಿ ನೆರವೇರಿಸಲಾಯಿತು.

ವಿದ್ಯಾರ್ಥಿಗಳಿಂದ ಯೋಗ ದರ್ಶನ, ಯೋಗಥಾನ್ ಪ್ರದರ್ಶನ





ಮೈಸೂರು,ಜೂ.17(ಆರ್‌ಕೆ)– ಮೈಸೂರಿನ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಶನಿವಾರ ನಡೆದ ಯೋಗ ದರ್ಶನ ಮತ್ತು ಯೋಗಥಾನ್ ಕಾರ್ಯಕ್ರಮದಲ್ಲಿ 400ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಯೋಗ ತಾಲೀಮು ಪ್ರದರ್ಶಿಸಿದರು.

ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ವಿದ್ಯಾಲಯ ಹಾಗೂ ಆಸ್ಪತ್ರೆ ವತಿಯಿಂದ ಜೂ.21ರಂದು ನಡೆಯಲಿರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಯೋಗ ದರ್ಶನ ಮತ್ತು ಯೋಗಥಾನ್ ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಶಾಸಕ ಟಿ.ಎಸ್.ಶ್ರೀವತ್ಸ, ಉಪಮೇಯರ್ ಡಾ.ಜಿ.ರೂಪಾ, ಸರ್ಕಾರಿ ಆಯುರ್ವೇದ ಕಾಲೇಜು ಪ್ರಾಂಶುಪಾಲ ಡಾ.ರಾಧಾಕೃಷ್ಣ, ಯೋಗ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಗಜಾನನ ಹೆಗಡೆ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ, ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ಮಹಾವಿದ್ಯಾಲಯದ ಡಾ.ಲಕ್ಷ್ಮೀನಾರಾಯಣ ಶೆಣೈ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ರುದ್ರೇಶ್, ಜೆಎಸ್‌ಎಸ್‌ಎಸ್ ಯೋಗ ಸಂಸ್ಥೆಯ ಶ್ರೀಹರಿ, ಯೋಗಬಂಧುಗಳಾದ ಡಾ. ಎ.ಎಸ್. ಚಂದ್ರಶೇಖರ್, ಶಶಿಕುಮಾರ್ ಹಾಗೂ ನಗರಪಾಲಿಕೆ ಸದಸ್ಯ ಸತೀಶ್ ಪಾಲ್ಗೊಂಡಿದ್ದರು.

ಬೆಳಗ್ಗೆ 6ರಿಂದ 6.45 ಗಂಟೆಯವರೆಗೆ ಯೋಗ ದರ್ಶನದಲ್ಲಿ ವಿವಿಧ ಭಂಗಿಯ ಯೋಗ ಪ್ರದರ್ಶನ ನಡೆಯಿತು. ಬೆಳಗ್ಗೆ 6.45ರಿಂದ 7.30ರವರೆಗೆ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಗಣ್ಯರು ಯೋಗದ ಮಹತ್ವ ಕುರಿತು ಮಾತನಾಡಿದರೆ, ಬೆಳಗ್ಗೆ 7.30 ರಿಂದ 8.15ರವರೆಗೆ ಯೋಗಥಾನ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ನೃತ್ಯದ ಮೂಲಕ ಯೋಗಾಭ್ಯಾಸ ಮಾಡಿ ಯೋಗದ ಪ್ರಾಮುಖ್ಯತೆ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು.

ಈ ವೇಳೆ ಮಾತನಾಡಿದ ಮೇಯರ್ ಶಿವಕುಮಾರ್, ಮಾನವನನ್ನು ಸಂಪನ್ಮೂಲ ಎಂದು ಕರೆಯಲಾಗುತ್ತದೆ. ಅದಕ್ಕೆ ಪೂರಕವಾಗಿ ಮನುಷ್ಯ ಮಾನಸಿಕ ಹಾಗೂ ದೈಹಿಕವಾಗಿ ಸದೃಢವಾಗಿರಬೇಕಾಗುತ್ತದೆ. ಮಾನವ ಸಂಪನ್ಮೂಲ ಎಂದು ಕರೆಯುವುದಾದರೆ ನಾವು ಯೋಗಾಭ್ಯಾಸವನ್ನು ಮಾಡಬೇಕು ಎಂದು ಹೇಳಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಈ ಹಿಂದಿನ ಸನಾತನ ಕಾಲದಿಂದಲೂ ಯೋಗ, ಪ್ರಕೃತಿ ಚಿಕಿತ್ಸೆಗೆ ಮಹತ್ವವಿದೆ. ಪ್ರಸ್ತುತ ಒತ್ತಡದ ಬದುಕಿಗೆ ಯೋಗ ಅನಿವಾರ್ಯವಾಗಿದೆ ಎಂದರು. ಬದುಕಿರುವವರೆಗೂ ದೇಹ, ಮನಸ್ಸಿನ ಆರೋಗ್ಯವನ್ನು ಸಮತೋಲನವಾಗಿರಿಸಿಕೊಂಡು ಯೋಗ, ಧ್ಯಾನವನ್ನು ಮೈಗೂಡಿಸಿಕೊಂಡು ಬಂದಿದ್ದ ಪದ್ಮಭೂಷಣ ಡಾ.ರಾಜಕುಮಾರ್ ನಮಗೆ ಆದರ್ಶರಾಗಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಸಂಘಟಕರಾದ ಡಾ. ಸುಮಾ, ಡಾ.ಹರಿಗಣೇಶ, ಡಾ.ಭಾರತೀಶ ಅವರು ಯೋಗಾಸನ ಭಂಗಿಗಳನ್ನು ಹೇಳಿಕೊಟ್ಟರಲ್ಲದೆ, ಅದರ ಮಹತ್ವದ ಬಗ್ಗೆ ವಿವರಿಸಿದರು. ಯೋಗ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಗ್ರಾಹಕ ಸಮಸ್ಯೆ ವಿರುದ್ಧ ಕಾನೂನಾತ್ಮಕ ಹೋರಾಟಕ್ಕೆ ಎಬಿಜಿಪಿ ಸಜ್ಜು

ಮೈಸೂರು, ಜೂ.17(ಎಸ್‌ಪಿಎನ್)– ಪ್ರಸ್ತುತ ವಿದ್ಯುತ್ ದರ ಏರಿಕೆ ಸೇರಿದಂತೆ ಗ್ರಾಹಕರ ಇತರೆ ಸಮಸ್ಯೆಗಳ ಕುರಿತು ರಾಜ್ಯಾದ್ಯಂತ ಕಾನೂನಾತ್ಮಕ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಬಿಜಿಪಿ ಕರ್ನಾಟಕ ಪ್ರಾಂತ ಕಾರ್ಯದರ್ಶಿ ಗ್ರಾಯತ್ರಿ ನಾಡಿಗ್ ಅಭಿಪ್ರಾಯಪಟ್ಟರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ನವದೆಹಲಿಯಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ (ಎಬಿಜಿಪಿ) ಕುರಿತು ಸೆ.8ರಂದು ಸ್ವರ್ಣ ಜಯಂತಿ ಆಚರಿಸಲಾಗುವುದು. ಇದಕ್ಕೆ ರಾಜ್ಯಾದ್ಯಂತ ಎಬಿಜಿಪಿ ಕಾರ್ಯಕರ್ತರಲ್ಲಿ ಜಾಗೃತಿ ಮೂಡಿಸಲಾಗುವುದು. ಮೈಸೂರು ಘಟಕದ ಕಾರ್ಯಕರ್ತರು ಬೆಂಬಲಿಸಿ ಕಾರ್ಯಕ್ರಮ ಯಶಸ್ವಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಎಬಿಜಿಪಿ ಮೈಸೂರು ಘಟಕದ ಪದಾಧಿಕಾರಿಗಳು ಗ್ರಾಹಕ ಕಾಯ್ದೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಲ್ಲಿ ಮುಂದಿದೆ. ಸಂಘಟನೆಯನ್ನು ಮತ್ತಷ್ಟು ಗಟ್ಟಿಗೊಳಿಸಲು ಪ್ರತಿಯೊಬ್ಬರು ಒಂದು ತಂಡವಾಗಿ ಕೆಲಸ ಮಾಡಬೇಕು. ಗ್ರಾಹಕ ಸ್ನೇಹಿಯಾಗಿ ಸಂಘಟನೆಯಾಗುತ್ತಿರುವ ಎಬಿಜಿಪಿಗೆ ಹೆಚ್ಚಿನ ಯುವಕರು ಸ್ವಯಂ ಪ್ರೇರಿತರಾಗಿ ಸೇರಿ, ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಡಾ.ಜಿ.ವಿ. ರವಿಶಂಕರ್, ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಕಾರ್ಯದರ್ಶಿ ರಾಘವೇಂದ್ರ ರವಿಶಂಕರ್, ಹಿರಿಯ ಸದಸ್ಯ ರಂಗನಾಥ್, ಸಾಮಾಜಿಕ ಹೋರಾಟಗಾರ ಅಜಯ್‌ಶಾಸ್ತ್ರಿ, ಅರಿವು ಸಂಸ್ಥೆಯ ಶ್ರೀಕಾಂತ್ ಕಶ್ಯಪ್, ಚಾಮುಂಡೇಶ್ವರಿ ಯುವಬಳಗದ ಅಧ್ಯಕ್ಷ ರಾಕೇಶ್, ಶ್ರೀನಿವಾಸ್ ನಾಯ್ಡು, ಭೈರತಿ ಲಿಂಗರಾಜು, ಚಕ್ರಪಾಣಿ, ಕಾವೇರಿ, ಗಿರೀಶ್ ರಾವ್ ಮೂರ್ತಿ, ನಿವೃತ್ತ ಪೊಲೀಸ್ ಅಧಿಕಾರಿ ಚಂದ್ರಶೇಖರ್ ಸೇರಿದಂತೆ ಇನ್ನಿತರರಿದ್ದರು.

ಅಂಚೆ ಬ್ಯಾಗ್ ಕಳವು

ಮೈಸೂರು,ಜೂ.17–ಅಂಚೆ ಇಲಾಖೆಗೆ ಸೇರಿದ ಟಪಾಲುಗಳಿದ್ದ ಟ್ರಾನ್ಸಿಟ್ ಬ್ಯಾಗನ್ನು ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಕಳವು ಮಾಡಲಾಗಿದೆ.

ಶೇಷಾದ್ರಿ ಐಯ್ಯರ್ ರಸ್ತೆ ವಿದ್ಯಾವರ್ಧಕ ಕಾಲೇಜು ಎದುರು ಇರುವ ಆರ್‌ಎಂಎಸ್ (ರೈಲ್ವೇ ಮೇಲ್ ಸರ್ವೀಸಸ್) ಕಚೇರಿಯಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿರುವ ಟಿಎಂಓ (ಟ್ರಾನ್ಸಿಟ್ ಮೇಲ್ ಆಫೀಸ್)ಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಅಂಚೆ ಕಚೇರಿಗಳಿಗೆ ತಲುಪಬೇಕಾದ ಪಾರ್ಸೆಲ್‌ಗಳನ್ನು ಕಳುಹಿಸಲಾಗಿತ್ತು. ಜೂ.14ರಂದು ಬೆಳಗ್ಗೆ 5 ಗಂಟೆಗೆ ಟಿಎಂಓ ಕಚೇರಿಯ ಸಿಬ್ಬಂದಿಗಳಾದ ಮುದ್ದೇಗೌಡ, ನೀತು ಪಾಟೀಲ್ ಮತ್ತು ಲೋಕೇಶ್ ಎಂಬುವರು ಯಳಂದೂರು ಅಂಚೆ ಕಚೇರಿಗೆ ಕಳುಹಿಸಬೇಕಾದ ಟ್ರಾನ್ಸಿಟ್ ಬ್ಯಾಗನ್ನು ಬಸ್ ನಿಲ್ದಾಣದ ಪ್ಲಾಟ್ ಫಾರಂ ನಂ.10ಕ್ಕೆ ತೆಗೆದುಕೊಂಡು ಹೋಗಿ ಇಟ್ಟಿದ್ದಾರೆ. ಯಳಂದೂರು ಬಸ್ ಬಾರದ ಕಾರಣ ಇವರು ಕೊಳ್ಳೇಗಾಲ ಬಸ್ ನಿಲ್ಲುವ ಪ್ಲಾಟ್‌ಫಾರಂಗೆ ಹೋಗಿ ಅಲ್ಲಿನ ಬಸ್‌ಗೆ ಬೇರೆ ಟ್ರಾನ್ಸಿಟ್ ಬ್ಯಾಗ್ ಇಟ್ಟು ಹಿಂತಿರುಗುವಷ್ಟರಲ್ಲಿ ಟ್ರಾನ್ಸಿಟ್ ಬ್ಯಾಗನ್ನು ಕಳವು ಮಾಡಲಾಗಿದೆ. ಈ ಬ್ಯಾಗ್‌ನಲ್ಲಿ ಸಾರ್ವಜನಿಕರ ರಿಜಿಸ್ಟರ್ ಪೋಸ್ಟ್‌ಗಳು ಮತ್ತು ಸ್ಪೀಡ್ ಪೋಸ್ಟ್‌ಗಳು ಇದ್ದವು. ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂತರ್ಜಲ ಸಂಪನ್ಮೂಲಗಳ ಸುಸ್ಥಿರತೆ ತರಬೇತಿ ಕಾರ್ಯಾಗಾರ



ಮೈಸೂರು,ಜೂ.17–ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಬೆಂಗಳೂರಿನ ಕೇಂದ್ರೀಯ ಅಂತರ್ಜಲ ಮಂಡಳಿ ಹಾಗೂ ರಾಜ್ಯ ಸರ್ಕಾರದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಯೋಗದೊಂದಿಗೆ ನಗರದ ANSSIRD ಸಂಸ್ಥೆಯಲ್ಲಿ 'ಅಂತರ್ಜಲ ಸಂಪನ್ಮೂಲಗಳ ಸುಸ್ಥಿರತೆ' ಕುರಿತು ಮೂರು ದಿನಗಳ ತರಬೇತಿ ಕಾರ್ಯಾಗಾರ ಜರುಗಿತು.

ಕೇಂದ್ರೀಯ ಅಂತರ್ಜಲ ಮಂಡಳಿ ಪ್ರಾದೇಶಿಕ ನಿರ್ದೇಶಕ ಎನ್.ಜ್ಯೋತಿ ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂತರ್ಜಲ ಹೊರತೆಗೆಯುವಿಕೆಯಲ್ಲಿ ತಾಲೂಕುಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದ್ದು, ಅದರ ನಿರ್ವಹಣೆ ಬಗ್ಗೆ ಹೆಚ್ಚಿನ ಗಮನಕೊಡಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ತರಬೇತಿಯಲ್ಲಿ ತಾಂತ್ರಿಕ ವಿಚಾರ ವಿನಿಮಯ ನಡೆಯಿತು. ಅದರಲ್ಲಿ, ಕೇಂದ್ರೀಯ ಅಂತರ್ಜಲ ಮಂಡಳಿಯ ವಿಜ್ಞಾನಿಗಳು, ಅಂತರ್ಜಲ ಮೂಲಗಳ ಸುಸ್ಥಿರತೆಯ ಬಗ್ಗೆ ವಿಶಾಲವಾದ ರೂಪುರೇಷೆಗಳನ್ನು ಪ್ರಸ್ತುತಪಡಿಸಿದರು. ಮೈಸೂರು ತಾಲೂಕಿನ ಗೋಪಾಲಪುರ ಗ್ರಾಪಂಗೆ ಭೇಟಿ ನೀಡಿ, ಅಲ್ಲಿ ನಿರ್ಮಿಸಿರುವ ಮಾನವ ನಿರ್ಮಿತ ನೀರಿನ ಮರುಪೂರಣ ರಚನೆಗಳನ್ನು ವೀಕ್ಷಿಸಿ, ಅದರ ಸಂಪೂರ್ಣ ಮಾಹಿತಿಯನ್ನು ಅಲ್ಲಿನ ಸ್ಥಳೀಯರಿಂದ ಪಡೆದುಕೊಂಡರು.

ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಉಪನಿರ್ದೇಶಕ ಮನೋಜ್‌ಕುಮಾರ್ ಅಂತರ್ಜಲ ನಿರ್ವಹಣೆ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ತಿಳಿಸಿದರು. ಕೇಂದ್ರೀಯ ಅಂತರ್ಜಲ ಮಂಡಳಿ ವಿಜ್ಞಾನಿಗಳಾದ ಎ.ಶಕ್ತಿವೇಲ್, ಶ್ರೀಹರಿ ಸಾರಂಗನ್, ಅನಿಶಾ, ಡಾ.ಲುಬ್ನಾ ಕೌಸರ್, ಡಾ.ಬೇಬಿ ಶ್ವೇತ, ನಿವೃತ್ತ ವಿಜ್ಞಾನಿ ಸತ್ಯನಾರಾಯಣ್, ಪಿಡಿಓಗಳು ಸೇರಿದಂತೆ ಒಟ್ಟು 50 ಅಧಿಕಾರಿಗಳು ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.6.2023 ಭಾನುವಾರ, ಮಳೆ ನಕ್ಷತ್ರ: ಮೃಗಶಿರ, 08.06.2023ರಿಂದ 21.06.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ,
ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಮೃಗಶಿರ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ದಿ ಆರ್ಟ್ ಆಫ್ ಲಿವಿಂಗ್:** ಶ್ರೀ ಯೋಗ ಶಿಬಿರ, ಸ್ಥಳ: 2870, ವಜ್ರನಖ, 1ನೇ ಮೇನ್, 4ನೇ ಕ್ರಾಸ್, ಚಾಮುಂಡಿಪುರಂ; ಆರ್ಟ್ ಆಫ್ ಲಿವಿಂಗ್ ಆಶ್ರಮ, ಜೆಎಸ್‌ಎಸ್ ಕಾಲೇಜು ಹತ್ತಿರ, ಬೆಳಗ್ಗೆ 6ರಿಂದ 7

■ **ನಾಗನವ ಕಲಾ ಸಾಹಿತ್ಯ ವೇದಿಕೆ:** ಮೂಗೂರು ಕರ್ನಾಟಕ ಬ್ರಾಹ್ಮಣ ಸಮುದಾಯ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಉದ್ಘಾಟನೆ: ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ಅಧ್ಯಕ್ಷತೆ: ವಿಪ್ರ ಮುಖಂಡ ಟಿ.ವಿ. ಸುಬ್ಬರಾವ್, ಮುಖ್ಯ ಅತಿಥಿಗಳು: ಲೇಖಕ ಎಸ್.ಉಮೇಶ್, ಬಿಜೆಪಿ ಯುವ ಮುಖಂಡ ಅರ್ಜುನ್ ಪಾರ್ಥ, ವೇದಿಕೆ ಅಧ್ಯಕ್ಷ ಹೊಮ್ಮ ಮಂಜುನಾಥ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ಅರಸು ಮಹಾಮಂಡಲಿ ಚಾರಿಟಬಲ್ ಟ್ರಸ್ಟ್:** ಎಂ.ಎಲ್.ಬಸವರಾಜೇ ಅರಸ್ ಅವರಿಗೆ ಸನ್ಮಾನ ಸಮಾರಂಭ, ಉದ್ಘಾಟನೆ: ಶ್ರೀ ವರ್ಚಸ್ವಿ ಸಿದ್ದಲಿಂಗರಾಜೇ ಅರಸ್, ಉಪಸ್ಥಿತರು : ಎಂ.ಕೆ. ಆನಂದರಾಜೇ ಅರಸು, ಕೆ.ಪಿ.ಲಕ್ಷ್ಮೀಕಾಂತರಾಜೇ ಅರಸು, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಶ್ರೀಧರ ರಾಜ ಅರಸ್, ಸ್ಥಳ: ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದ ಆವರಣ, ಬೆಳಗ್ಗೆ 10ಕ್ಕೆ.

■ **ಯೋಗದಾ ಸತ್ಸಂಗ ಸೊಸೈಟಿ ಆಫ್ ಇಂಡಿಯಾ:** ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಯೋಗಿಯ ಆತ್ಮಕಥೆ ಕಾರ್ಯಕ್ರಮ, ಸ್ಥಳ: ಯೋಗದ ಸತ್ಸಂಗ ಧ್ಯಾನ ಕೇಂದ್ರ, ಸರಸ್ವತಿಪುರಂ, ಬೆಳಗ್ಗೆ 10.30 ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಯುಕ್ತ ಪ್ರಕಾಶನ:** ಪ್ರೊ.ಕೆ.ಬಿ.ವೆಂಕಟೇಶ್ ಅವರ 'ಮಕ್ಕಳಿಬ್ಬರ ದೃಷ್ಟಿಯಲ್ಲಿ ಕುವೆಂಪು' ಮತ್ತು 'ನಾನು ರಸ್ತೆ ಬದಿಯ ಮರ', ಪ್ರೊ.ಎಸ್.ಬಿ.ತೇಜ ಅವರ 'ಕೊಡವರ ಸಾಂಸ್ಕೃತಿಕ ಲೋಕ' ಕೃತಿಗಳ ಲೋಕಾರ್ಪಣೆ ಸಮಾರಂಭ, ಕೃತಿಗಳ ಲೋಕಾರ್ಪಣೆ: ಹಿರಿಯ ಸಾಹಿತಿ ಪ್ರೊ.ರಾಗೌ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿಗಳನ್ನು ಕುರಿತು: ಸಾಹಿತಿ ಪ್ರೊ.ಮ.ರಾಮಕೃಷ್ಣ, ಮುಖ್ಯ ಅತಿಥಿಗಳು: ಸಾಹಿತಿ ಪ್ರೊ.ಸಿ.ನಾಗಣ್ಣ, ವಿದ್ಯಾಶ್ರಮ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಕೆ.ರಾಕೇಶ್‌ರಾಜೇ ಅರಸ್, ಎ.ಎಂ.ಋಷಿ, ಪ್ರೊ.ಬಿ.ಎಸ್. ಸುಬ್ರಹ್ಮಣ್ಯ, ಸತೀಶ್ ಜವರೇಗೌಡ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಸಕ್ಷಮ:** ಸ್ಥಾಪನಾ ದಿನಾಚರಣೆ, ಹೆಲೆನ್ ಕೆಲ್ಲರ್ ಜನ್ಮ ದಿನ ಹಾಗೂ ಪರಿಸರ ದಿನಾಚರಣೆ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಪ್ರಾಂಶುಪಾಲ ಡಾ. ನಿಶಾಂತ್ ಎ. ನಾಯ್ಡು, ಸ್ಥಳ: ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ ಆವರಣ, ಬೆಳಗ್ಗೆ 10.30ಕ್ಕೆ.

■ **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ವಿಚಾರವಾದಿ ಪ್ರಗತಿಪರ ಚಿಂತಕ ಪ್ರೊ. ಕೆ. ರಾಮದಾಸ್ ನೆನಪಿನಲಿ... ಸಂವಾದ, ಪುಸ್ತಕ ಬಿಡುಗಡೆ, ಲೇಖನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಚಿಂತಕ ದಿನೇಶ್ ಅಮೀನ್ ಮಟ್ಟು, ಅಧ್ಯಕ್ಷತೆ : ಚಿಂತಕ ಪ್ರೊ. ಪುರುಷೋತ್ತಮ್ ಬಿಳಿಮಲೆ, ಪುಸ್ತಕ ಬಿಡುಗಡೆ : ಚಿಂತಕ ಡಾ. ಬಂಜಗೆರೆ ಜಯಪ್ರಕಾಶ್, ಪುಸ್ತಕ ಕುರಿತು : ಚಿಂತಕರಾದ ಡಾ. ಹೆಚ್.ಎಸ್. ಅನುಪಮ, ಪ್ರಶಸ್ತಿ ಪ್ರದಾನ : ಚಿಂತಕ ರುದ್ರಪ್ಪ ಹನಗವಾಡಿ, ಸ್ಥಳ: ಶ್ರೀರಂಗ ವೇದಿಕೆ, ರಂಗಾಯಣ, ಬೆಳಗ್ಗೆ 10.30ಕ್ಕೆ.

■ **ಭಾವಸಾರ್ ವಿಷನ್ ಇಂಡಿಯಾ, ರಾಯಲ್ ಕ್ಲಬ್ :** ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ, ಅಧ್ಯಕ್ಷತೆ ಬ್ರಾಯಲ್ ಕ್ಲಬ್ ಅಧ್ಯಕ್ಷ ಎನ್.ಗಣೇಶ್ ಲಾಳಿಗೆ, ಮುಖ್ಯ ಅತಿಥಿಗಳು: ಶ್ರೀಮತಿ ಸುಧಾ ಜಾದವ್, ಗಜೇಂದ್ರನಾಥ್ ಮಾಲೋದ, ಸತೀಶ್ ಜಾದವ್, ಸಚಿನ್ ಠಾಕ್ರೆ, ಆರ್.ವಿ. ಶಿವಾಜಿರಾವ್ ರಂಪೂರೆ, ರಮೇಶ್ ನಾಜರೆ, ಸ್ಥಳ: ಶ್ರೀ ಪಾಂಡುರಂಗ ವಿಠ್ಠಲ ದೇವಸ್ಥಾನ, ಮಂಡಿ ಮೊಹಲ್ಲಾ, ಬೆಳಗ್ಗೆ 11ಕ್ಕೆ.

■ **ಹಜ್ರತ್ ಟಿಪ್ಪು ಸುಲ್ತಾನ್ ಶಹೀದ್:** ಟಿಪ್ಪು ಸುಲ್ತಾನ್ ಶಹೀದ್ ಅವರ ಗಂಧದ ಉರುಸ್ ಷರೀಫ್ ಆಚರಣೆ, ಮುಖ್ಯ ಅತಿಥಿಗಳು: ಶಾಸಕ ತನ್ವೀರ್ ಸೇಠ್, ವಸತಿ ಸಚಿವ ಜಮೀರ್ ಅಹಮದ್, ಶಾಸಕರಾದ ರಿಜ್ವಾನ್ ಹರ್ಷದ್, ಕೆ. ಹರೀಶ್‌ಗೌಡ, ಪ್ರೊ. ಭಾಷ್ಯಂ ಸ್ವಾಮೀಜಿ, ರೆ. ಫಾ. ಕನಿಕದಾಸ್ ವಿಲಿಯಂ ಅಂತೋಣಿ, ಅಧ್ಯಕ್ಷತೆ : ಹಜರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್ ಸಾಹೇಬ್, ಸ್ಥಳ: ಮಿಲಾದ್ ಬಾಗ್, ಲಷ್ಕರ್ ಮೊಹಲ್ಲಾ, ಮಧ್ಯಾಹ್ನ 12.15ಕ್ಕೆ.

■ **ದಿ ಮೈಸೂರು ಕ್ಲಬ್ :** ಶಾಸಕರಾದ ಕೆ. ಹರೀಶ್‌ಗೌಡ ಮತ್ತು ಟಿ.ಎಸ್. ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಎನ್. ಮಂಜೇಗೌಡ, ಪಾಲಿಕೆ ಸದಸ್ಯ ಎಂ.ಸಿ. ರಮೇಶ್ ಅವರಿಗೆ ಸನ್ಮಾನ ಸಮಾರಂಭ, ಸ್ಥಳ: ದಿ ಮೈಸೂರು ಕ್ಲಬ್ ಆವರಣ, ಕುವೆಂಪುನಗರ, ಸಂಜೆ 4ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಉ.ರಾ. ನಾಗೇಶ್, 6.15 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ–ಬಾನುಲಿ ಸರಣಿ, ಪ್ರಸ್ತುತಿ–ಡಾ.ಎ.ಎಸ್.ಚಂದ್ರಶೇಖರ್, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ– ಎ.ಪಿ. ಚಂದ್ರಶೇಖರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಜ್ಯೋತಿ ಶಂಕರ್, 8.30 ವಿಶಿಷ್ಟ ವ್ಯಕ್ತಿ ವಿಶೇಷಯತ್ನ "ಸೋಲಿಗರ ಅಭಿವೃದ್ಧಿ ಸಮಿತಿಯ ಕಾರ್ಯದರ್ಶಿ ವಿ.ಮುತ್ತಯ್ಯ ಅವರೊಂದಿಗೆ ಸಂವಾದ. ನಡೆಸಿಕೊಡುವವರು ದಿವಾಕರ ಹೆಗಡೆ, 9.05 ವಸುಧೈವ ಕುಟುಂಬಕಂ– ಭಾರತ G20 ಶೃಂಘಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ "ವಿಶ್ವಕ್ಕೆ ಯೋಗದ ಕೊಡುಗೆ", 9.40 ನಮ್ಮ ಆರೋಗ್ಯ–ಡೆಂಗ್ಯೂ, ಮಲೇರಿಯ ಮೊದಲಾದ ಸೊಳ್ಳೆಗಳಿಂದ ಹರಡುವ ರೋಗಗಳು ಕುರಿತು ಡಾ.ಸುಧಾ ರುದ್ರಪ್ಪ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪುಟಾಣಿಗಳಿಂ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ–ಕೆ.ಬಿ.ಮೀನಾ, 11.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತು ನಂತರ ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ **ಮಧ್ಯಾಹ್ನ:** 12.30 ದೇವರನಾಮ–ರೇಖಾ ವೆಂಕಟೇಶ್, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಬಿ.ಸುನಂದಾ ದಿಲೀಪ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಗರುಡ ಗರ್ವಭಂಗ, ಪ್ರಸ್ತುತಿ–ಚನಿಲ ಸುಬ್ರಹ್ಮಣ್ಯ ಭಟ್ ಮತ್ತು ತಂಡದವರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ, ಪಶುರಂಗ–ಮೈಸೂರು ಜಿಲ್ಲಾ ಪಶುಪಾಲನೆ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ. ಕುರಿ, ಮೇಕೆ ಸಾಕಾಣಿಕೆಯಲ್ಲಿ ಸಮತೋಲಿತ ಆಹಾರ ಪೂರೈಕೆ ಮಹತ್ವ ಕುರಿತು ಡಾ.ಹೆಚ್.ಕೆ.ಪ್ರಹ್ಲಾದ್ ಅವರೊಂದಿಗೆ ಸಂದರ್ಶನ, 8.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.30 ರಾಷ್ಟ್ರೀಯ ನಾಟಕ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ರವಿಚಂದ್ರ ಕಲ್ಲೂರು–ವೇಣುವಾದನ

■ **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** ಪ್ರತಿಷ್ಠಾಪನಾ ವಾರ್ಷಿಕ ಮಹೋತ್ಸವ, ಬೆಳಗ್ಗೆ 5.30ರಿಂದ ಗಣಪತಿ ಹೋಮ, ಶ್ರೀ ಗುರುವಾಯೂರಪ್ಪನಿಗೆ ಮತ್ತು ಅಯಪ್ಪಸ್ವಾಮಿಗೆ ಉದಾಸ್ಥಮಾನ ಪೂಜೆ, ನವಗಂ, ಪಂಚಗವ್ಯಂ, ಉಚ್ಚ ಪೂಜೆ, ಮಧ್ಯಾಹ್ನ 12ಕ್ಕೆ ಅನ್ನದಾನ, ಸಂಜೆ 5.30ರಿಂದ ದೀಪಾರಾಧನೆ, ವಿಶೇಷ ಪೂಜೆ, ಅತ್ತಾಳ ಪೂಜಾ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟದ ಪಾದ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ವಿದ್ವಾನ್ ಶ್ರೀರಾಮ್ ಶಾಸ್ತ್ರಿ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ವೆಂಕಟೇಶ ಜೋಶ್ಯರ್–ಪಿಟೀಲು, ವಿದ್ವಾನ್ ಎ. ರಾಧೇಶ್–ಮೃದಂಗ, ವಿದ್ವಾನ್ ಎಸ್. ಮಂಜುನಾಥ –ಘಟಂ, ಸ್ಥಳ: ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ

■ **ರಂಗಾಯಣ :** ರಂಗಾಯಣದ ಕಿರಿಯ ರೆಪರ್ಟರಿ ಕಲಾವಿದರಿಂದ ಚಂದ್ರಗಿರಿ ತೀರದಲ್ಲಿ ನಾಟಕ ಪ್ರದರ್ಶನ, ನಿರ್ದೇಶನ : ಅಮಿತ್ ಜೆ. ರೆಡ್ಡಿ, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ

■ **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ಕದಂಬ ರಂಗ ವೇದಿಕೆ ಸಂಭ್ರಮ, ಕದಂಬ ರಂಗ ವೇದಿಕೆ ಕಲಾವಿದರಿಂದ 'ಇರುಳು ಹಗಲಾಗುವುದರೊಳಗೆ' ನಾಟಕ ಪ್ರದರ್ಶನ, ನಿರ್ದೇಶನ: ಪ್ರೊ. ಉಮೇಶ್, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ

■ **ಪಂಡಿತರತ್ನಂ ಕೆ.ಎಸ್. ವರದಾಚಾರ್ಯ ಶತಮಾನೋತ್ಸವ ಸಮಿತಿ :** ವಿದ್ವದ್ಗೋಷ್ಠಿ ಹಾಗೂ ಸತ್ಯಾನ್ವೇಷಣಮ್ – ದ್ವಿತೀಯ ಸಂಸ್ಮರಣಾ ಗ್ರಂಥದ ಲೋಕಾರ್ಪಣೆ, ಬೆಳಗ್ಗೆ 10ಕ್ಕೆ ಪ್ರಾಚೀನ ನಾ ವಿದ್ವಗ್ಗೋಷ್ಠಿ, ಅಧ್ಯಕ್ಷತೆ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ನಿಕಟಪೂರ್ವ ಕುಲಪತಿ ಪ್ರೊ. ಡಾ. ಕೆ.ಇ. ದೇವನಾಥನ್, ವಿಷಯ ಪ್ರಸ್ತುತಿ : ಮೇಲುಕೋಟೆ ಸರ್ಕಾರಿ ಸಂಸ್ಕೃತ ಕಾಲೇಜು ವಿಶ್ರಾಂತ ಪ್ರಾಂಶುಪಾಲ ವಿದ್ಯಾವಾಚಸ್ಪತಿ ಉಮಾಕಾಂತ ಭಟ್ಟ, ಕೆರೆಕೈ, ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು ಅಧ್ಯಾಪಕ ವಿದ್ವಾನ್ ಡಾ. ಎಂ.ಎ. ಆಳ್ವಾರ್, ಆದಿಚುಂಚನಗಿರಿ ಸಂಸ್ಕೃತ ಕಾಲೇಜು ಪ್ರಾಧ್ಯಾಪಕ ವಿದ್ವಾನ್ ಡಾ. ಮಧುಸೂದನ ಅಡಿಗ, ಸಂಜೆ 4ಕ್ಕೆ ಪಂಡಿತರತ್ನಂ ಕೆ.ಎಸ್.ವರದಾಚಾರ್ಯರ ವಿಶಿಷ್ಟ ಲೇಖನಗಳ ಸಂಗ್ರಹ 'ಸತ್ಯಾನ್ವೇಷಣಮ್' ದ್ವಿತೀಯ ಸಂಸ್ಮರಣ ಗ್ರಂಥದ ಲೋಕಾರ್ಪಣೆ ಸಮಾರಂಭ, ಕೃತಿ ಲೋಕಾರ್ಪಣೆ : ಶ್ರೀ ಸ್ವರ್ಣವಲ್ಲಿ ಮಹಾಸಂಸ್ಥಾನ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ಅಧ್ಯಕ್ಷತೆ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ನಿಕಟಪೂರ್ವ ಕುಲಪತಿ ಪ್ರೊ. ಡಾ. ಕೆ.ಇ. ದೇವನಾಥನ್, ಗ್ರಂಥ ಪರಿಚಯ : ಡಾ. ಎಚ್.ವಿ. ನಾಗರಾಜರಾವ್, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಶಾಸಕ ಟಿ.ಎಸ್. ಶ್ರೀವತ್ಸ, ಸರ್ಕಾರಿ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು ಪ್ರಾಂಶುಪಾಲ ಡಾ.ಪಿ. ಸತ್ಯನಾರಾಯಣ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಸ್ಥಳ: ಸರಸ್ವತಿ ಪ್ರಸಾದ, ಸರ್ಕಾರಿ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು.

■ **ನಟನರಂಗಶಾಲೆ:** ನಟನ ರಂಗ ಶಾಲೆ ಕಲಾವಿದರಿಂದ ಬಿ. ಸುರೇಶ ಅವರ ಅಡುಗೆ ಮನೆಯಲ್ಲೊಂದು ಹುಲಿ ನಾಟಕ ಪ್ರದರ್ಶನ, ನಿರ್ದೇಶನ : ಮೇಘ ಸಮೀರ, ಸ್ಥಳ: ನಟನ ರಂಗಶಾಲೆ, ಸಂಜೆ 6.30ಕ್ಕೆ.

■ **ನುಡಿರಂಗ :** ಸಕುಬಾಯಿ ನಾಟಕ ಮರು ಪ್ರದರ್ಶನ, ನಿರ್ದೇಶನ : ಹುಲುಗಪ್ಪ ಕಟ್ಟಿಮನಿ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 18 ಭಾನುವಾರ 2023

ಸಂಪುಟ: 44 | ಸಂಚಿಕೆ: 63 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ - ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾರೆ... ಮುಖ್ಯಮಂತ್ರಿ ಆಗಿರುತ್ತಾರೆ...!!

● ಪತ್ರಿಕಾ ಸಂವಾದದಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸ್ಪಷ್ಟನೆ ● ನನ್ನ ಕಾಲದಲ್ಲೇ ಮೈಸೂರು-ಬೆಂಗಳೂರು ಹೈವೇ ಆಯ್ತು; ಆದರೆ ಕಾಂಗ್ರೆಸ್ ನನ್ನ ಸಾಧನೆ ಕೊಂಡಾಡಲಿಲ್ಲ

ಮೈಸೂರು. ಜೂ.17 (ಬಿಎಲ್‌ಯು)-ಕಾಂಗ್ರೆಸ್ ಸರ್ಕಾರದಲ್ಲಿ ಈಗ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾರೆ. ಅವರು ಮುಖ್ಯಮಂತ್ರಿ ಆಗಿರುತ್ತಾರೆ. ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ.



ಮೈಸೂರು ಪತ್ರಕರ್ತರ ಭವನದಲ್ಲಿ ಏರ್ಪಡಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, ಎರಡೂವರೆ ವರ್ಷ ಆದ ಮೇಲೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಅಧಿಕಾರ ಹಸ್ತಾಂತರ ಆಗುವುದೇ. ಈ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲಿ ಒಪ್ಪಂದ ಆಗಿದೆಯೇ ಎಂಬ ಪ್ರಶ್ನೆಗೆ ಡಾ.ಮಹದೇವಪ್ಪ ಈ ಪ್ರತಿಕ್ರಿಯೆ ನೀಡಿದರು.

ಸಿದ್ದರಾಮಯ್ಯ ಅವರದ್ದು ಅಡ್ಜೆಸ್ಟ್‌ಮೆಂಟ್ ಪಾಲಿಟಿಕ್ಸ್ ಎಂಬ ಸಂಸದ ಪ್ರತಾಪ್ ಸಿಂಹ ಹೇಳಿಕೆಗೆ ಕಿಡಿಕಾರಿದ ಅವರು, ಎಲ್ಲಾ ವಿಚಾರಗಳ ಬಗ್ಗೆ ಮಾತನಾಡಲು ಪ್ರತಾಪ್‌ಸಿಂಹ ಏನು ಪೊಲಿಟಿಕಲ್ ಅಥಾರಿಟಿಯೇ ಎಂದು ಪ್ರಶ್ನಿಸಿದರು.

ಅಡ್ಜೆಸ್ಟ್‌ಮೆಂಟ್ ಪಾಲಿಟಿಕ್ಸ್ ಅಂದರೆ ಸಿದ್ದರಾಮಯ್ಯ ಅವರಿಗೆ ಗೊತ್ತಿಲ್ಲ. ಹಾಗೊಂದು ವೇಳೆ ಹೊಂದಾಣಿಕೆ ರಾಜಕಾರಣ ಮಾಡಿದ್ದರೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅವರು ಸೋಲುತ್ತಿರಲಿಲ್ಲ. ಜನರ ಬೆಂಬಲದಿಂದ ಅಧಿಕಾರಕ್ಕೆ ಬಂದಿದ್ದೇವೆ. ಉತ್ತಮ ಆಡಳಿತ ನೀಡುತ್ತೇವೆ ಎಂದು ಹೇಳಿದರು.

ಕಾಂಗ್ರೆಸ್ ನನ್ನ ಸಾಧನೆ ಕೊಂಡಾಡಲಿಲ್ಲ: ನಾನು ಲೋಕೋಪಯೋಗಿ ಸಚಿವನಾಗಿ ಹಲವು ಸಾಧನೆ ಮಾಡಿದರೂ ಅದನ್ನು ಹೇಳಲು ಕಾಂಗ್ರೆಸ್ ಪಕ್ಷ ಮರೆತುಹೋಯಿತು ಎಂದು ಡಾ.ಹೆಚ್.ಸಿ. ಮಹದೇವಪ್ಪ, ಸ್ವಪಕ್ಷದ ವಿರುದ್ಧವೇ ಇದೇ ವೇಳೆ ಬೇಸರ ವ್ಯಕ್ತಪಡಿಸಿದರು. ಲೋಕೋಪಯೋಗಿ ಹಾಗೂ ಆರೋಗ್ಯ ಇಲಾಖೆಯಲ್ಲಿ ಕ್ರಾಂತಿಕಾರಕ ಬದಲಾವಣೆ ಮಾಡಿದೆ. ಹಲವು ಯೋಜನೆ ರೂಪಿಸಿ ಅನುಷ್ಠಾನಕ್ಕೆ ತಂದೆ. ಇಷ್ಟೆಲ್ಲಾ ಸಾಧನೀಯ ಕಾರ್ಯ ಮಾಡಿದ ನಾನು ಪ್ರಚಾರ ತೆಗೆದುಕೊಳ್ಳಲಿಲ್ಲ. ಆದರೆ ನನ್ನ ಸಾಧನೀಯ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಪಕ್ಷ ಸ್ಮರಿಸದೇ ಮರೆತು ಹೋಯಿತು ಎಂದು ಡಾ.ಮಹದೇವಪ್ಪ ನೋವಿನಿಂದ ನುಡಿದರು.


ಈ ತನಕ 9 ಚುನಾವಣೆಯಲ್ಲಿ ಸ್ಪರ್ಧಿಸಿದ್ದೇನೆ. ಅದರಲ್ಲಿ 3 ಚುನಾವಣೆ ಸೋತಿದ್ದೇನೆ. 6 ಬಾರಿ ಗೆದ್ದಿದ್ದೇನೆ. ಯಾವತ್ತೂ ಹಿಗ್ಗಲಿಲ್ಲ, ಕುಗ್ಗಲಿಲ್ಲ. ನಾಲ್ಕು ಬಾರಿ ಸಚಿವನಾಗಿದ್ದೇನೆ. ಎಂದೂ ಮಂತ್ರಿ ಸ್ಥಾನಕ್ಕೆ ಲಾಬಿ ಮಾಡಲಿಲ್ಲ. ಸಚಿವನಾಗಿ ರಾಜ್ಯದ ಕಡೆ ಗಮನ ನೀಡಬೇಕಾಗಿ ಬಂದ ಕಾರಣ ಕ್ಷೇತ್ರದ ಕಡೆ ಹೆಚ್ಚು ಬರಲು ಆಗಲಿಲ್ಲ. ಆದ ಕಾರಣ ಮೂರು ಬಾರಿ ಸೋಲಬೇಕಾಯಿತು. ಇದಕ್ಕೆ ನಾನು ಕಾರಣನೇ ಹೊರತು ಕ್ಷೇತ್ರದ ಜನರಲ್ಲ. ಆದರೆ ಎಂದೂ ಕೂಡ ನನ್ನ ಕ್ಷೇತ್ರದ ಅಭಿವೃದ್ಧಿ ಕಡೆಗಣಿಸಲಿಲ್ಲ ● 9ನೇ ಪುಟಕ್ಕೆ

ನನಗೂ ಸಿಎಂ ಆಗುವ ಆಸೆ ಇದೆ, ಬುದ್ಧ ಅಲ್ಲ

ನನಗೂ ಮುಖ್ಯಮಂತ್ರಿ ಆಗುವ ಆಸೆ ಇದೆ. ನಾನು ಬುದ್ಧ ಅಲ್ಲ. ಹೀಗೆಂದವರು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ. ಮುಖ್ಯಮಂತ್ರಿ ಆಗಬೇಕೆಂದು ಯಾರಿಗೆ ತಾನೆ ಆಸೆ ಇರಲ್ಲ. ನನಗೂ ಮುಖ್ಯಮಂತ್ರಿ ಆಗುವ ಆಸೆ ಇದೆ. ನಾನೇನು ಬುದ್ಧ ಅಲ್ಲ. ಬುದ್ಧನನ್ನು ಫಾಲೋ ಮಾಡುತ್ತಿದ್ದೇನೆ ಅಷ್ಟೆ ಎಂದು ಹೇಳಿದರು. ದಲಿತ ಸಮುದಾಯಕ್ಕೆ ಮುಖ್ಯಮಂತ್ರಿ ಸ್ಥಾನ ನೀಡಬೇಕು. ನನ್ನನ್ನು ಸಿಎಂ ಮಾಡಬೇಕಿತ್ತು ಎಂಬ ಗೃಹ ಸಚಿವ ಡಾ.ಪರಮೇಶ್ವರ್ ಹೇಳಿಕೆ ಸರಿಯಾಗಿದೆ. ಅವರು ಹೇಳಿರುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಅಭಿಪ್ರಾಯಪಟ್ಟರು. ಈ ಬಾರಿಯ ಚುನಾವಣೆಯಲ್ಲಿ ದಲಿತ ಸಮುದಾಯ ಪೂರ್ಣ ಪ್ರಮಾಣದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಿದೆ. ಹಿಂದಿನಿಂದಲೂ ಬೆಂಬಲಿಸುತ್ತಾ ಬಂದಿದೆ. ಆದರೆ ನಾವು ಮತ ಹಾಕುತ್ತೇವೆ. ಆದರೆ ನಮ್ಮ ದಲಿತ ಸಮುದಾಯಕ್ಕೆ ಸಿಎಂ ಸ್ಥಾನ ಸಿಗುತ್ತಿಲ್ಲವಲ್ಲ ಎಂಬ ಬೇಸರ ಅವರಲ್ಲಿ ಇದೆ ಇದು ಸಹಜ ಕೂಡ ಎಂದು ಮಹದೇವಪ್ಪ ಹೇಳಿದರು

ಅರಮನೆ ಸುತ್ತ ಝೀರೋ ಟ್ರಾಫಿಕ್ ಝೋನ್

● ಚಾಮುಂಡಿಬೆಟ್ಟವನ್ನು ಕಾಂಕ್ರೀಟ್ ಕಾಡು ಮಾಡಲ್ಲ ● ಪಾರಂಪರಿಕ ಕಟ್ಟಡಗಳ ರಕ್ಷಣೆ, ದಸರಾ ಪ್ರಾಧಿಕಾರ ರಚನೆ, ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ಸಂಬಂಧ ಪರಿಶೀಲನೆ



ಮೈಸೂರು, ಜೂ.17(ಬಿಎಲ್‌ಯು)-ಸಾಂಸ್ಕೃತಿಕ ನಗರಿ ಮೈಸೂರಿನ ಅರಮನೆ ಸುತ್ತ ಝೀರೋ ಟ್ರಾಫಿಕ್ ಝೋನ್ ಮಾಡುವ ಪ್ರಸ್ತಾವನೆ ಇದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ. ಅರಮನೆ ಸುತ್ತ ಝೀರೋ ಟ್ರಾಫಿಕ್ ಝೋನ್ ಮಾಡುವ ಬಗ್ಗೆ ಚರ್ಚೆ ಮಾಡಲಾಗುವುದು. ಸಂಚಾರ ದಟ್ಟಣೆ ತಪ್ಪಿಸುವ ಉದ್ದೇಶದಿಂದ ಟೌನ್‌ಹಾಲ್‌ನಲ್ಲಿ ವಾಹನ ನಿಲ್ದಾಣ ತೆರೆಯಲಾಗುವುದು ಎಂದು ಹೇಳಿದರು. ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಕೇಂದ್ರ ಸರ್ಕಾರದ 47 ಕೋಟಿ ಅನುದಾನದ 'ಪ್ರಸಾದ' ಯೋಜನೆಯಲ್ಲಿ ಕಾಂಕ್ರೀಟ್ ಕಾಡು ಮಾಡಲಾಗುತ್ತಿದೆ ಎಂಬ ಪರಿಸರವಾದಿಗಳ ಕೂಗಿಗೆ ಪ್ರತಿಕ್ರಿಯೆ ನೀಡಿದ ಡಾ.ಮಹದೇವಪ್ಪ, ● 9ನೇ ಪುಟಕ್ಕೆ

ಆಗಸ್ಟ್ 18ರಂದು ಗೃಹಲಕ್ಷ್ಮಿಯರ ಖಾತೆಗೆ ಹಣ



ಚಿಕ್ಕಮಗಳೂರು, ಜೂ.17- ರಾಜ್ಯದಲ್ಲಿ ಗೃಹಲಕ್ಷ್ಮಿ ಯೋಜನೆ ಮತ್ತಷ್ಟು ವಿಳಂಬವಾಗಿದ್ದು, ಆಗಸ್ಟ್ 18 ರಂದು ಗೃಹಲಕ್ಷ್ಮಿಯರ ಖಾತೆಗೆ ಹಣ ನೀಡಲಾಗುವುದು ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದ್ದಾರೆ. ಕೊಪ್ಪ ತಾಲೂಕಿನ ಗೌರಿಗದ್ದೆ ದತ್ತಾಶ್ರಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಪ್ಲಿಕೇಶನ್ ಹಾಕಲು ಮತ್ತಷ್ಟು ವಿಳಂಬ ಆಗಲಿದೆ ಆಗಸ್ಟ್ 17 ಅಥವಾ 18ಕ್ಕೆ ಖಂಡಿತಾ ಹಣ ಅವರ ಖಾತೆ ಸೇರುತ್ತೆ. ಯೋಜನೆಯ ಬದಲಾವಣೆಯಿಂದ ವಿಳಂಬವಾಗುತ್ತಿದೆ ಅಷ್ಟೇ ಎಂದು ವಿವರಿಸಿದ್ದಾರೆ. ಗೃಹಲಕ್ಷ್ಮಿ ಯೋಜನೆ ಜನರಿಗೆ ಸರಳವಾಗಿ ಸಿಗಬೇಕು. ಹಾಗಾಗಿ ● 6ನೇ ಪುಟಕ್ಕೆ

ವೀರಶೈವ ಲಿಂಗಾಯತ ನಾಯಕರ ಮಲಗಿಸುವುದರೊಂದಿಗೆ

ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಸಂತೋಷ್ ಕೊಡುಗೆ ಅಪಾರ

● ಸರಣಿ ಟ್ವೀಟ್ ಮೂಲಕ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಟಾಂಗ್ ● ಯಡಿಯೂರಪ್ಪ, ಸೋಮಣ್ಣ, ನಂತರ ಈಗ ಯತ್ನಾಳ ಮೂಲಕ ಮಾಜಿ ಸಿಎಂ ಬೊಮ್ಮಾಯಿ ಟಾರ್ಗೆಟ್ ಆರೋಪ; ಪಟ್ಟಶಿಷ್ಯ ಪ್ರತಾಪ್ ಸಿಂಹರ ಹೆಗಲ ಮೇಲೂ ಬಂದೂಕು ಇಟ್ಟು, ಗುರಿ ಇಟ್ಟಿದ್ದಾರೆ!



ಬೆಂಗಳೂರು, ಜೂ.17(ಕೆಎಂಶಿ)- ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯಲು ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರ ಕೊಡುಗೆ ಅಪಾರ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ. ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಕಾಂಗ್ರೆಸ್ ಸರ್ಕಾರ ಬರಲು ಸಂತೋಷ್ ಕೊಡುಗೆ ಅಪಾರ. ಅದಕ್ಕೆ ನಿಮಗೆ ಆಭಾರಿ ಎಂದಿದ್ದಾರೆ. ಸಂತೋಷ್ ಬಿಜೆಪಿಯಲ್ಲಿನ ಅನೇಕ ಲಿಂಗಾಯತ ನಾಯಕರನ್ನು ಮುಗಿಸಿದರ ಪರಿಣಾಮ ನಮಗೆ ಚುನಾವಣೆಯಲ್ಲಿ ಪರೋಕ್ಷ ಲಾಭವಾಯಿತು. ಯಡಿಯೂರಪ್ಪನವರಿಂದ ಹಿಡಿದು, ವಿ.ಸೋಮಣ್ಣನವರೆಗೂ ಒಂದಲ್ಲ ಒಂದು ರೀತಿ ರಾಜಕೀಯವಾಗಿ ವೀರಶೈವ ಲಿಂಗಾಯತ ನಾಯಕರ ಮುಗಿಸಿದ ಸಂತೋಷ್ ಇದೀಗ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಮುಗಿಸಲು ಹೊರಟಿದ್ದಾರೆ. ಇದನ್ನು ಹಾದಿ ಬೀದಿಯಲ್ಲೂ ಮಾತನಾಡುತ್ತಿದ್ದಾರೆ ಎಂದಿದ್ದಾರೆ.

ಬೊಮ್ಮಾಯಿ ಅವರನ್ನು ಮುಗಿಸಲು ಬಸವನಗೌಡ ಪಾಟೀಲ್ ಯತ್ನಾಳ್ ಅವರನ್ನು ಎತ್ತಿಕಟ್ಟಿದ್ದೀರಿ. ಜೊತೆಗೆ ನಿಮ್ಮ ಪಟ್ಟ ಶಿಷ್ಯ ಪ್ರತಾಪ್ ಸಿಂಹ ಅವರ ಹೆಗಲಮೇಲೆ ಬಂದೂಕು ● 6ನೇ ಪುಟಕ್ಕೆ

ಕೆಲಕಾಲ ಲಷ್ಕರ್ ಪೊಲೀಸ್ ಠಾಣೆಯ ಮುಂದಿನ ನೆಹರು ಸರ್ಕಲ್ 'ಗೂಳಿ' ಅಡ್ಡ

● ವಾಹನ ಸವಾರರು, ಪಾದಚಾರಿಗಳ ಮೇಲೆ ಹರಿಹಾಯ್ದು ಭಯಭೀತ ವಾತಾವರಣ; ಅಟ್ಟಹಾಸದಿಂದ ನಲುಗಿದ ಜನರ ನೆರವಿಗೆ ಬಂದ ಪೊಲೀಸರು ● ಹರಸಾಹಸಪಟ್ಟು ಗೂಳಿ ಸೆರೆ ಹಿಡಿದು ಪಿಂಜರಾಪೋಲ್‌ಗೆ ಸಾಗಣೆ ● ಬಿಡಾಡಿ ಜಾನುವಾರುಗಳಿಗೆ ಕಡಿವಾಣ ಹಾಕುವ ವೀರಾವೇಶದ ಪ್ರಸ್ತಾಪ 'ಠುಸ್'



ಮೈಸೂರು, ಜೂ. 17(ಆರ್‌ಕೆ)- ಮೈಸೂರಿನ ಲಷ್ಕರ್ ಪೊಲೀಸ್ ಠಾಣೆಗೆ ಹೊಂದಿಕೊಂಡಂತಿರುವ ಪ್ರತಿಷ್ಠಿತ 'ನೆಹರು ಸರ್ಕಲ್' ಕೆಲಕಾಲ ಗೂಳಿಯ ಅಡ್ಡವಾಗಿತ್ತು. ಕಂಡ ಕಂಡ ವಾಹನ, ಜನರ ಮೇಲೆ ಹರಿಹಾಯ್ದು ಭಯಭೀತ ವಾತಾವರಣ ಸೃಷ್ಟಿಸಿತು. ಮೈಸೂರಿನಲ್ಲಿ ಇತ್ತೀಚೆಗೆ ಪ್ರಮುಖ ರಸ್ತೆಗಳಲ್ಲಿ ಬಿಡಾಡಿ ದನಗಳ ಹಾವಳಿ ಹೆಚ್ಚಾಗಿದ್ದು, ವಾಹನ ಸವಾರರು ಹಾಗೂ ಪಾದಚಾರಿಗಳು ಜೀವವನ್ನು ಕೈಯ್ಯಲ್ಲಿ ಹಿಡಿದುಕೊಂಡು ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಇತ್ತೀಚೆಗೆ ಈ ವಿಚಾರ ಮೈಸೂರು ನಗರ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಪ್ರಸ್ತಾಪವಾಗಿತ್ತು. ಹಲವು ಸದಸ್ಯರು ವೀರಾವೇಶದಿಂದ ಮಾತನಾಡಿದ್ದರು. ಆದರೆ ಅದು 'ಬರೀ ಮಾತು' ಎಂಬುದು ಇಂದಿನ ಘಟನೆ ಸಾರಿ ಸಾರಿ ● 9ನೇ ಪುಟಕ್ಕೆ

ಪಾರಂಪರಿಕ ನೆಲೆಗಟ್ಟಿನಲ್ಲಿ ವಿವೇಕಾನಂದನಗರ ವೃತ್ತ ಪುನರ್ ನಿರ್ಮಾಣ


ಮೈಸೂರಿನ ಮತ್ತೊಂದು ಅಂದದ ತಾಣವಾಗಿಸಲು ಭರದ ಸಿದ್ಧತೆ

ಮೈಸೂರು, ಜೂ.17(ಎಸ್‌ಬಿಡಿ)- ಮೈಸೂರಿನ ಸ್ವಾಮಿ ವಿವೇಕಾನಂದ ವೃತ್ತವನ್ನು ಅತ್ಯಾಕರ್ಷಕವಾಗಿ ಮರು ನಿರ್ಮಾಣ ಮಾಡುವ ಯೋಜನೆ ಚಾಲನೆಗೊಂಡಿದೆ.

ವೃತ್ತದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಸ್ಥಳಾಂತರಿಸಿ, ಉಳಿದ ನಿರ್ಮಾಣವನ್ನು ತೆರವುಗೊಳಿಸುವ ಕಾರ್ಯ ನಡೆದಿದೆ. ಮೈಸೂರಿನ ಇತಿಹಾಸ, ಪರಂಪರೆ ನೆಲೆಗಟ್ಟಿನಲ್ಲೇ ಅತ್ಯಾಕರ್ಷಕವಾಗಿ ವೃತ್ತವನ್ನು ಮರು ನಿರ್ಮಾಣ ಮಾಡಲು ಯೋಜನೆ ಸಿದ್ಧಪಡಿಸಲಾಗಿದೆ. ಈಗಾಗಲೇ ವೃತ್ತದ ವಿನ್ಯಾಸ, ನೀಲನಕ್ಷೆ, ತಾಂತ್ರಿಕ ಯೋಜನೆ ಸೇರಿದಂತೆ ಎಲ್ಲಾ ರೀತಿಯ ಸಿದ್ಧತೆಗಳೊಂದಿಗೆ ಕಾಮಗಾರಿಗೆ ಮುಂದಡಿ ಇಡಲಾಗಿದೆ.

3 ಕೋಟಿ ಯೋಜನೆ: ಮೈಸೂರು ಮಹಾನಗರ ಪಾಲಿಕೆ 3 ಕೋಟಿ ರೂ. ಅಂದಾಜು ಮೊತ್ತದಲ್ಲಿ ಸ್ವಾಮಿ ವಿವೇಕಾನಂದ ವೃತ್ತ ಮರು ನಿರ್ಮಾಣ ಯೋಜನೆ ಕೈಗೊಂಡಿದೆ. ಮೈಸೂರಿನ ಕಲಾವಿದ ಪ್ರಾಶ್ ಚಿಕ್ಕಪಾಳ್ಯ ವೃತ್ತದ ವಿನ್ಯಾಸ ಹಾಗೂ ನೀಲನಕ್ಷೆ ರೂಪಿಸಿದ್ದಾರೆ. ಇಂಜಿನಿಯರ್ ಕಿಶೋರ್ ಚಂದ್ರ ತಾಂತ್ರಿಕ ಯೋಜನೆ ಸಿದ್ಧಪಡಿಸಿದ್ದಾರೆ. ಗುತ್ತಿಗೆದಾರ ವೆಂಕಟಸುಬ್ಬಯ್ಯ ಅವರಿಗೆ ವೃತ್ತದ ಕಾಮಗಾರಿ ವಹಿಸಲಾಗಿದೆ. ನಿರ್ಮಾಣಕ್ಕೆ ದೊಡ್ಡಬಳ್ಳಾಪುರದ ಉತ್ಕೃಷ್ಟ ಕಲ್ಲು ಬಳಸಿಕೊಳ್ಳುವ ಚಿಂತನೆಯಿದೆ. ಯಾವುದೇ ಮಾದರಿ ಅನುಸರಿಸದೆ ಮೈಸೂರಿನ ಪಾರಂಪರಿಕ ವೃತ್ತಗಳ ಸಾಲಿನಲ್ಲಿ ಗುರುತಿಸುವಂತೆ ಆಕರ್ಷಕ ರೀತಿಯಲ್ಲಿ ವೃತ್ತ ನಿರ್ಮಿಸಲು ಯೋಜನೆ ರೂಪಿಸಿಕೊಂಡಿದ್ದು, ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್.ಸಿ.ಮಹದೇವಪ್ಪ, ಶಾಸಕ ಟಿ.ಎಸ್. ಶ್ರೀವತ್ಸ ಹಾಗೂ ಮೇಯರ್ ಶಿವಕುಮಾರ್ ಉಪಸ್ಥಿತಿಯಲ್ಲಿ ಕಾಮಗಾರಿಗೆ ಚಾಲನೆ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ರಾಜ್ಯ ಸರ್ಕಾರದ ಅನುದಾನ ಬಳಕೆ: ರಾಜ್ಯ ಸರ್ಕಾರದ ಅನುದಾನದಲ್ಲಿ 3 ಕೋಟಿ ರೂ.ಗಳಲ್ಲಿ ಸ್ವಾಮಿ ವಿವೇಕಾನಂದರ ವೃತ್ತದ ಮರು ನಿರ್ಮಾಣ ● 9ನೇ ಪುಟಕ್ಕೆ



ಮೈಸೂರು ವಿವೇಕಾನಂದನಗರದ ಸ್ವಾಮಿ ವಿವೇಕಾನಂದ ವೃತ್ತದ ಅತ್ಯಾಕರ್ಷಕ ವಿನ್ಯಾಸವುಳ್ಳ ನೀಲನಕ್ಷೆ

> ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಹಲವು ವೃತ್ತಗಳ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಹಾಗೆಯೇ 59 ಹಾಗೂ 64ನೇ ವಾರ್ಡ್ ವ್ಯಾಪ್ತಿಯಲ್ಲಿರುವ ಸ್ವಾಮಿ ವಿವೇಕಾನಂದ ವೃತ್ತದ ಮರು ನಿರ್ಮಾಣ ಕಾಮಗಾರಿ ನಡೆಸಲಾಗುತ್ತದೆ. ಈಗಾಗಲೇ ಪ್ರತಿಮೆ ಸ್ಥಳಾಂತರಿಸಿ, ಹಳೆಯ ವೃತ್ತವನ್ನು ತೆರವು ಗೊಳಿಸುವ ಕಾರ್ಯ ನಡೆದಿದೆ. 3 ಕೋಟಿ ರೂ. ಅಂದಾಜು ಮೊತ್ತದ ಕಾಮಗಾರಿ ಸದ್ಯದಲ್ಲೇ ಆರಂಭವಾಗಲಿದೆ.
>
> -ಮೇಯರ್ ಶಿವಕುಮಾರ್

ನಕ್ಕರೆ ಅದೇ ಸ್ವರ್ಗ

ಬಾಸ್ : "ನಿಮಗೆ ಪುನರ್ಜನ್ಮದಲ್ಲಿ ನಂಬಿಕೆ ಇದೆಯಾ?"
ನೌಕರ : "ಇದೆ. ಯಾಕೆ ಸಾರ್?"
ಬಾಸ್ : "ನಿನ್ನೆ ನಿಮ್ಮ ಅಜ್ಜಿಯವರ ಅಂತ್ಯ ಸಂಸ್ಕಾರಕ್ಕೆ ಹೋಗಬೇಕೆಂದು ನೀವು ರಜೆ ಪಡೆದು ಹೋದ ಮೇಲೆ ಬಿಪಿ ಮಾತ್ರೆ ಹೆಚ್ಚು ತಗೊಂಡು ಬಾ ಅಂತ ನಿಮಗೆ ಹೇಳೋಕೆ ನಿಮ್ಮ ಅಜ್ಜೀನೇ ಆಫೀಸ್‌ಗೆ ಬಂದಿದ್ರು!"

ಮೈಸೂರು ಮಿತ್ರ

ಭಾನುವಾರ, 18 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಬಹಳ ಮಾತನಾಡುವವರ ಮಾತುಗಳನ್ನು ಯಾರೂ ಆದರದಿಂದ ಆಲಿಸುವುದಿಲ್ಲ.– ಬಾಣ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಂಟ್ರು ಮನೆಗೆ ಮೂಲ, ಕುಂಟೆತ್ತು ಹೊಲಕ್ಕೆ ಮೂಲ

ನಿಮ್ಮ ಪತ್ರಗಳು

ಪ್ರಾಣಕ್ಕೆ ಕುತ್ತು ತರುತ್ತಿರುವ ರಸ್ತೆ!



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರ ಸಮೀಪ, ಕೆ.ಆರ್. ನಗರ– ಬೆಟ್ಟದಪುರ ಮುಖ್ಯ ರಸ್ತೆಯಲ್ಲಿ ಸುಮಾರು ಹತ್ತು ಅಪಾಯಕಾರಿ ತಿರುವುಗಳಿದ್ದು, ಇದರಿಂದ ಪ್ರತಿ ವರ್ಷ ಹತ್ತಾರು ಜನರು ತಮ್ಮ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಈ ತಿರುವುಗಳಲ್ಲಿ ತೋಟ ಮತ್ತು ಕಾಲುವೆಗಳು ಇದ್ದು ಇಲ್ಲಿ ಎರಡು ವಾಹನಗಳು ಸಂಚರಿಸಲು ಆಗುವುದಿಲ್ಲ. ಈ ತಿರುವುಗಳನ್ನು ತೆರವುಗೊಳಿಸಿ ರಸ್ತೆ ಅಗಲೀಕರಣ ಮಾಡಿ ಅಮಾಯಕರ ಪ್ರಾಣಗಳನ್ನು ಉಳಿಸಬೇಕೆಂದು ಸಾರ್ವಜನಿಕರು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ. ಅಲ್ಲದೆ ಈ ಜಾಗಗಳಲ್ಲಿ ಇರುವ ತೋಟದಲ್ಲಿ ಭಾರಿ ಪ್ರಮಾಣದ ಮರಗಳು ರಸ್ತೆಗೆ ಅಡ್ಡಲಾಗಿ ಚಾಚಿಕೊಂಡಿದ್ದು, ಇವನ್ನು ತೆರವುಗೊಳಿಸಬೇಕೆಂದು ಹಲವಾರು ಬಾರಿ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಆದುದರಿಂದ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ರೈತರು ಹಾಗೂ ನೊಂದ ಕುಟುಂಬದ ಸದಸ್ಯರು ಈ ಮೂಲಕ ಮನವಿ.

– ಬೆಟ್ಟದಪುರ ಗ್ರಾಮಸ್ಥರು, ಪಿರಿಯಾಪಟ್ಟಣ ತಾ.

ಉಚಿತ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಳ್ಳಬಾರದು

ಮಾನ್ಯರೆ,

ಕರ್ನಾಟಕ ಕಲ್ಯಾಣ ಕರ್ನಾಟಕದೆಡೆಗೆ ಮುನ್ನುಗ್ಗುತ್ತಿದೆ. ಜನತೆ ಬದಲಾವಣೆಯನ್ನು ಬಯಸುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಗೆದ್ದ ಆಡಳಿತ ಪಕ್ಷಗಳು ಜನತೆಗೆ ಅನುಕೂಲಕರವಾದ ಯೋಜನೆಯನ್ನು ಜಾರಿಗೆ ತಂದು ನಮ್ಮ ನಾಡನ್ನು ಹೊಸ ದಿಕ್ಕಿನೆಡೆಗೆ ಕೊಂಡೊಯ್ಯುತ್ತಾರೆ ಎಂಬ ಭರವಸೆಯನ್ನು ನಮ್ಮ ಜನತೆ ನಂಬಿದೆ. ಈ ಭರವಸೆಯನ್ನು ಚುನಾವಣೆ ಸಮಯದಲ್ಲಿ ಪಕ್ಷಗಳು ಕೊಟ್ಟ ಎಂದಿಗೂ ಮರೆಯಬಾರದು.

ಆಡಳಿತ ಪಕ್ಷಗಳು ನಮ್ಮ ನಾಡಿನ ಜನತೆಗೆ ಕೊಟ್ಟ ಸೌಲಭ್ಯಗಳನ್ನು ಜನರು ಸಮರ್ಪಕವಾಗಿ ಸರಿಯಾದ ಮಾದರಿಯಲ್ಲಿ ಬಳಸಿಕೊಳ್ಳಬೇಕು. ಉಚಿತ ಉಚಿತ ಅಂತ ಹೇಳಿ ಹುಚ್ಚರ ತರ ವರ್ತಿಸಬಾರದು. ಉಚಿತ ಬಸ್ ಪ್ರಯಾಣ ಎಂದು ಮಹಿಳೆಯರು ತಮಗೆ ಅವಶ್ಯಕವಿಲ್ಲದಿದ್ದರು ಹಾಗೆ ಸುಮ್ಮನೆ ಒಂದು ರೌಂಡಿಗೆಂದು ಬಸ್ ಪ್ರಯಾಣ ಮಾಡಬಾರದಷ್ಟೇ? ಕೆಲಸದ ನಿಮಿತ್ತವಾಗಿ ಇಲ್ಲವೆ ಇನ್ನಿತರ ಅವಶ್ಯಕ ಕೆಲಸವಿದ್ದಲ್ಲಿ ಈ ಶಕ್ತಿ ಯೋಜನೆಯನ್ನು ಮಹಿಳೆಯರು ಸಮರ್ಪಕವಾಗಿ ಬಳಸಿಕೊಳ್ಳಬೇಕು.

ಅತಿಯಾದರೆ ಅಮೃತವು ವಿಷವಾಗಿ ಪರಿಣಮಿಸುವಂತೆ ಯಾವುದನ್ನು ನಾವು ಅತಿಯಾಗಿ ಬಳಸಬಾರದು ಎಂಬ ನೀತಿಯನ್ನು ಮೈಗೂಡಿಸಿಕೊಂಡು ಜೀವನ ದಲ್ಲಿ ಮುಂದೆ ಸಾಗಬೇಕಿದೆ. ಈ ಆಡಳಿತ ಪಕ್ಷ ಕೊಟ್ಟ ಉಚಿತ ಯೋಜನೆಯನ್ನು ಸರಿಯಾಗಿ ಸರಿಯಾದ ಸಮಯದಲ್ಲಿ ಬಳಸಿಕೊಂಡಾಗ ಮಾತ್ರ ಜನತೆಯು ಮುಂದಿನ ದಿನಗಳಲ್ಲಿ ಇನ್ನಿತರ ಉಚಿತ ಜನಪರ ಯೋಜನೆಯನ್ನು ಪಡೆಯಲು ಅನುವಾಗುತ್ತದೆ. ಇದರಲ್ಲಿ ಸಿಕ್ಕ ಸಿಕ್ಕಾಗೆ ಬಳಸಿದಾಗ ಮುಂದಿನ ಯೋಜನೆಗಳಲ್ಲಿ ನಾವು ಸಫಲತೆಯನ್ನು ಕಾಣಲು ಸಾಧ್ಯವಾಗುವುದಿಲ್ಲಾ ಅಲ್ಲವೇ?

ಜನತೆಯು ಎಚ್ಚೆತ್ತುಕೊಂಡು ಆಡಳಿತರೂಢ ಸರ್ಕಾರ ಕೊಟ್ಟ ಜನಪರ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡು ಇತರ ರಾಜ್ಯ ಸರ್ಕಾರಗಳಿಗೆ ಮಾದರಿ ರಾಜ್ಯವಾಗಲಿ, ಇನ್ನು ಹಲವಾರು ಉಚಿತ ಯೋಜನೆಗಳು ಜಾರಿಗೆ ಬರುವಂತಾಗಲಿ ಕರ್ನಾಟಕ ಕಲ್ಯಾಣ ಕರ್ನಾಟಕವಾಗಲಿ ಎಂಬುದೇ ಎಲ್ಲಾ ಕನ್ನಡಿಗರ ಆಶಯ?.!

–ಅನಿಲ್ ರಾಜ, ಸಹ ಶಿಕ್ಷಕ, ಸಿದ್ಧಾರ್ಥನಗರ ಮೈಸೂರು

ಶಕ್ತಿ ಯೋಜನೆ ಸರ್ಕಾರಕ್ಕೆ ಹೊರೆಯಾಗದಿರಲಿ

ಮಾನ್ಯರೆ,

ಇತ್ತೀಚೆಗೆ ಕರ್ನಾಟಕದಲ್ಲಿ ಜಾರಿಯಾದ ಶಕ್ತಿ ಯೋಜನೆಯಿಂದಾಗಿ ಮಹಿಳೆಯರಿಗೆ ಸರ್ಕಾರಿ ಬಸ್ಸುಗಳಲ್ಲಿ ಉಚಿತ ಪ್ರಯಾಣ ಮಾಡುವ ಸೌಲಭ್ಯ ಲಭ್ಯವಾಗಿದ್ದು, ಇದರಿಂದಾಗಿ ಉದ್ಯೋಗಸ್ಥ, ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಅನುಕೂಲಕರವಾಗಿದೆ.

ಆದರೆ ಈ ಶಕ್ತಿ ಯೋಜನೆಯು ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುವುದು ಖಚಿತವಾಗಿದೆ. ಈ ಯೋಜನೆ ಪ್ರಾರಂಭವಾದ ಮೂರು ದಿನಗಳಲ್ಲಿ 51.53 ಲಕ್ಷ ಮಹಿಳೆಯರು ಈ ಶಕ್ತಿ ಯೋಜನೆಯ ಪ್ರಯೋಜನ ಪಡೆದಿದ್ದು, ಇದರ ವೆಚ್ಚ 10.82 ಕೋಟಿ ರೂಗಳಾಗಿದೆ.

ಕರ್ನಾಟಕ ಸರ್ಕಾರದ ಶಕ್ತಿ ಯೋಜನೆ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಅನುಕೂಲಕರವಾಗಿದೆ. ಆದರೆ ಎಲ್ಲಾ ಮಹಿಳೆಯರಿಗೆ ಈ ಯೋಜನೆ ವಿಸ್ತರಿಸಿರುವುದು ಸೂಕ್ತವಲ್ಲ. ಯಾರಿಗೆ ಅಗತ್ಯವಿದೆಯೋ ಅವರಿಗೆ ಮಾತ್ರ ಈ ಶಕ್ತಿ ಯೋಜನೆ ಲಭ್ಯವಾಗುವಂತಹ ಕೆಲವು ನಿಯಮಗಳನ್ನು ವಿಧಿಸಬೇಕು.

ಉದಾಹರಣೆಗೆ : ಶಕ್ತಿ ಯೋಜನೆಯು 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ, ಅಂಗವಿಕಲರಿಗೆ, ವಿದ್ಯಾರ್ಥಿಗಳಿಗೆ, ಆದಾಯ ಕಡಿಮೆಯಿರುವ ನಾಗರಿಕರಿಗೆ ಈ ಯೋಜನೆಯ ವ್ಯಾಪ್ತಿಯೊಳಗೆ ಬರುವಂತೆ ಮಾಡಿ, ಯಾರು ಆರ್ಥಿಕವಾಗಿ ಸಬಲರಾಗಿದ್ದಾರೋ ಅವರಿಗೆ ಈ ಯೋಜನೆಯ ಅವಶ್ಯಕತೆಯಿಲ್ಲವಾಗಿದ್ದು, ಯಾರಿಗೆ ಅವಶ್ಯಕತೆಯಿದೆಯೋ ಅಂತಹವರಿಗೆ ಮಾತ್ರ ಈ ಯೋಜನೆಯ ಲಾಭ ದೊರಕುವಂತಾಗಬೇಕು.

ಸರ್ಕಾರ ಈ ನಿಟ್ಟಿನಲ್ಲಿ ಕೆಲವು ನಿಯಮಗಳನ್ನು ಈ ಶಕ್ತಿ ಯೋಜನೆಗೆ ವಿಧಿಸಬೇಕು. ಇದರಿಂದಾಗಿ ಅಗತ್ಯವಿರುವವರು ಮಾತ್ರ ಈ ಯೋಜನೆಯ ಲಾಭ ಪಡೆಯುತ್ತಾರೆ ಮತ್ತು ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುವುದು ತಪ್ಪುತ್ತದೆ. ಸರ್ಕಾರದ ಮಹಿಳಾ ಸಬಲೀಕರಣದ ಭಾಗವಾದ ಶಕ್ತಿ ಯೋಜನೆಯನ್ನು ಜಾರಿಗೆ ತಂದಿರುವುದಕ್ಕೆ ಸರ್ಕಾರಕ್ಕೆ ಕರ್ನಾಟಕದ ಜನತೆಯ ಪರವಾಗಿ ಅಭಿನಂದನೆಗಳು.

–ರಾಸುಮ ಭಟ್, ಚಿಕ್ಕಮಗಳೂರು.

ಮಕ್ಕಳ ಅತ್ಯಾಪ್ತ ಅಪ್ಪ



ನಮ್ಮಲ್ಲಿ ಎಷ್ಟು ಜನ ಈ ಅಪ್ಪಂದಿರ ದಿನವನ್ನು ಆಚರಿಸುತ್ತೇವೆ..?, ಅಷ್ಟಕ್ಕೂ ಅಪ್ಪನ್ನ ನೆನೆಯುವುದಕ್ಕೆ ಒಂದು ದಿನ ಅಂತ ಬೇಕಾ? ಅಷ್ಟು ದೂರದ ಸಂಬಂಧವೇ ಅದು ಮರೆತು ಬಿಡಲು?, ಸುಮ್ಮನೇ ಕೂತು ಅಪ್ಪ ಅಂತ ಯೋಚನೆ ಮಾಡಿದ್ರೆ ಕಣ್ಣಾಲಿಗಳು ಒದ್ದೆಯಾಗದೆ ಇರದು. ತಂದೆ ಮಾಡಿದ ತ್ಯಾಗದ ಅರಿವಾಗದೇ ಇರದು ಅಲ್ಲವೇ? ಅಪ್ಪ ಅಂದರೆ ನಮ್ಮೆಲ್ಲ ಧೈರ್ಯ, ಶಕ್ತಿ, ಸಂತೋಷ, ಸುಖ ಎಂದು ಹೇಳಬಹುದೇನೋ..

-ಮ.ನ. ಲತಾ ಮೋಹನ್,
1576, 3/ಎ ಕ್ರಾಸ್, ರಾಘವೇಂದ್ರ ಬಡಾವಣೆ,
ರಾಘವೇಂದ್ರನಗರ, ಶಕ್ತಿನಗರ ಅಂಚೆ,
ಮೈಸೂರು. ಮೊ. 9481831434

ಅಪ್ಪಂದಿರ ದಿನಾಚರಣೆಯನ್ನು ಆಚರಿಸುವುದಕ್ಕೆ ಮನಸ್ಸು ಮುದಗೊಳ್ಳುತ್ತದೆ. ಈ ರೀತಿಯ ಬಹುವಚನ ಬಳಸುವುದಕ್ಕೆ ಮುಜುಗರ ಎನಿಸಿದರೂ ಇದೇ ಸರಿ ಎಂದೆನಿಸುತ್ತದೆ. ಈ ದಿನಾಚರಣೆ ಭಾರತೀಯ ಸಂಸ್ಕೃತಿಯಲ್ಲಿ ಇಲ್ಲವಾದರೂ ಈ ವಿಶೇಷ ದಿನವನ್ನು ಆಚರಿಸುವುದಕ್ಕೆ ಏನೂ ಅಡ್ಡಿಯಿಲ್ಲ. ನಮ್ಮ ಸಂಸ್ಕೃತಿಯಲ್ಲಿ ತಂದೆಯ ಸ್ಥಾನ ಬಹಳ ದೊಡ್ಡದು. ಹೆತ್ತ ತಾಯಿಯ ನಂತರದ ಸ್ಥಾನವನ್ನು ತಂದೆಗೆ ನೀಡಿರುವುದರಿಂದಲೇ ಪಿತೃದೇವೋ ಭವ ಎಂದು ಕರೆಯಲಾಗುತ್ತದೆ. ಮಕ್ಕಳನ್ನು ಬೆಳೆಸಿ, ಅವರು ಉತ್ತಮ ಸ್ಥಾನಗಳಿಸುವಲ್ಲಿ ಅಪ್ಪ–ಅಮ್ಮನ ಪಾತ್ರ ಪ್ರಮುಖವಾದದು. ಆದರೆ ಅಮ್ಮನ ಪ್ರೀತಿ ಅಪ್ಪನ ಪ್ರೀತಿಗಿಂತ ದೊಡ್ಡದು ಅಂತ ಬಣ್ಣಿಸಿ ಬಿಡುತ್ತೇವೆ. ಅಪ್ಪನಿಗೂ ಮಕ್ಕಳ ಮೇಲೆ ತುಂಬಾ ಪ್ರೀತಿ ಇರುತ್ತದೆ, ಅಮ್ಮ ವ್ಯಕ್ತಪಡಿಸುತ್ತಾರೆ, ಅಪ್ಪಂದಿರು ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುವುದು ಕಡಿಮೆ. ಆದ್ದರಿಂದ ಸ್ಟ್ರಿಕ್ಟ್ ಅಪ್ಪ ಅಂತ ಬಿರುದನ್ನು ಪಡೆದುಬಿಡುತ್ತಾರೆ. ಅಪ್ಪ ಅಂದ್ರೆ ಕಾಫೀ ತರ,ಚಳಿಗೆ ರಗ್ಗು, ಬಿಸಿಲಿಗೆ ತಂಪು ,ತಂಪು ಮರದ ನೆರಳು,ನಮ್ಮೆಲ್ಲಾ ಸಮಸ್ಯೆಗಳಿಗೆ ಅವರ ನಗುವೇ ಉತ್ತರ, ಇಂತಾ ಅಪ್ಪನ್ನ ಒಂದೇ ದಿನ ಅಂತ ನೆನೆಯೋದು ಹೇಗೆ?

ಅಪ್ಪ ಒಬ್ಬ ಸರಳತೆಯ ಶಿಸ್ತಿನ ಸಿಪಾಯಿ. ಒಬ್ಬ ಮಾದರಿಯ ಸಜ್ಜನಿಕೆಯ ವ್ಯಕ್ತಿ. ಅಪ್ಪ ಅಂದ್ರೆ ಅದೇನೋ ಪ್ರೀತಿ. ಕೇಳಿದಾಗ ಹಣ ಕೊಡ್ತಾರೆ ಅಂತಲಾ, ಬೈಯ್ಯೋ ಅಮ್ಮನಿಂದ ಬಚಾವ್ ಮಾಡ್ತಾರೆ ಅಂತಲಾ, ಔಷಧಿ ಕಹಿಯಾದ್ರೂ ಆರೋಗ್ಯಕ್ಕೆ ಸಿಹಿಯಾಗಿರೋ ತರ ಪ್ರತೀ ಬೈಯ್ಗುಳದ ಹಿಂದೆ ಇರುವ ಸದುದ್ದೇಶಗಳ ಕಾರಣದಿಂದ್ಲಾ? .. ಗೊತ್ತಿಲ್ಲ.. ಯಾಕೋ ಇಷ್ಟ ಆಗ್ಬುಡ್ತಾರೆ. ಎಲ್ಲಾ ಇಷ್ಟಗಳಿಗೂ ಕಾರಣ ಇರಲೇಬೇಕೆಂದೇನಿಲ್ಲವಲ್ಲ..ಹೆಣ್ಣು ಮಕ್ಕಳಿಗಂತೂ ತಮ್ಮ ಅಪ್ಪನೇ ಎವರ್ ಗ್ರೀನ್ & ಪವರ್ ಫುಲ್ ಹೀರೋ. ಬೆಸ್ಟ್ ಫ್ರೆಂಡ್ ಅಂತಲೂ ಹೇಳಬಹುದು. ಮಗುವಿನ ಕೈ ಹಿಡಿದು ಮೊದಲ ಪುಟ್ಟ ಹೆಜ್ಜೆಯನ್ನು ಹಾಕಿಸುವುದರಿಂದ ಹಿಡಿದು, ಮಕ್ಕಳು ತಮ್ಮ ಕಾಲ ಮೇಲೆ ತಾವೇ ನಿಂತು ಕೊಳ್ಳುವಂತೆ ಸ್ಫೂರ್ತಿಯಾಗುವವರು ಅಪ್ಪ. ಮನೆಯವರ ರಕ್ಷಣಾ ಜವಾಬ್ದಾರಿ ಅಪ್ಪನ ಮೇಲೆ ಇರುತ್ತದೆ. ಆದ್ದರಿಂದಲೇ ಆರ್ಮಿಯವರಂತೆ ಅಪ್ಪಂದಿರು ಸ್ಟ್ರಿಕ್ಟ್ ಆಗಿ ಇರುತ್ತಾರೋ ಏನೊ.

ತಂದೆಯನ್ನು ದೇವರಂತೆ ಪೂಜಿಸಿದ ದೇಶ ನಮ್ಮದು, ತಾಯಿಗಿರುವಷ್ಟೇ ಗೌರವ ತಂದೆಗೂ ಇದೆ. ಹುಟ್ಟಿದ ಪ್ರತಿಯೊಬ್ಬರೂ ಸಾಯುವ ಕೊನೆಯ ಕ್ಷಣದವರೆಗೂ ಋಣಿಯಾಗಿರಬೇಕಾದ ಸಂಬಂಧ ಅದು. ಎಷ್ಟು ಹೊಗಳಿದರೂ, ಎಷ್ಟೇ ಪೂಜಿಸಿದರೂ ತಂದೆ ಎಂಬ ಸಂಬಂಧದಿಂದ ಮುಕ್ತರಾಗಲು ಸಾಧ್ಯವಿಲ್ಲ. ಅಪ್ಪ ಕೊಡುವ ರಕ್ಷಣೆಯನ್ನು, ಪ್ರೀತಿಯನ್ನು ಯಾರಿಂದಲೂ ಕೊಡಲು ಸಾಧ್ಯವಿಲ್ಲ

1910ರಲ್ಲಿ ವಾಷಿಂಗ್ಟನ್‌ನ ಸೊನಾರಾ ಸ್ಮಾರ್ಟ್ ಡೊಡ್ ಎಂಬಾಕೆ 'ವಿಶ್ವ ಅಪ್ಪಂದಿರ ದಿನಾಚರಣೆ'ಯನ್ನು ಜಾರಿಗೆ ತರಲು ಶ್ರಮಿಸಿದಳು. ಸೊನಾರಾಳ ತಾಯಿ ತೀರಿ ಹೋದ ನಂತರ, ಸೇನೆಯಲ್ಲಿದ್ದ ಆಕೆಯ ತಂದೆ ತನ್ನ ಆರೂ ಮಕ್ಕಳನ್ನು, ತಾಯಿಯ ಪ್ರೀತಿ–ಮಮತೆಗೆ ಯಾವುದೇ ಕೊರತೆ ಆಗದಂತೆ ಬೆಳೆಸಿದ.

1909ರಲ್ಲಿ 'ವಿಶ್ವ ತಾಯಂದಿರ ದಿನ' ಜಾರಿಗೆ ಬಂದ ನಂತರ, ತಂದೆಗೂ ಅಷ್ಟೇ ಮಹತ್ವ ನೀಡಬೇಕೆಂದು ಸೊನಾರಾ ಆರಂಭಿಸಿದ ಹೋರಾಟದ ಫಲವಾಗಿ ಆಕೆಯ ತಂದೆಯ ಹುಟ್ಟಿದ ತಿಂಗಳಾದ ಜೂನ್ ತಿಂಗಳ ಮೂರನೇ ಭಾನುವಾರವನ್ನು 'ಅಪ್ಪಂದಿರ ದಿನ'ವಾಗಿ ಆಚರಿಸಲು ನಿರ್ಧರಿಸಲಾಯಿತು ಪಿತೃ ಸಮಾನರೆಲ್ಲರನ್ನೂ ಗೌರವಿಸುವ ಆಚರಣೆಗೆ ಅಧಿಕೃತವಾಗಿ ಚಾಲನೆ ಕೊಟ್ಟ ಮೊದಲಿಗಳಾದಳು ಈಕೆ.. ಜಗತ್ತಿನ 52 ರಾಷ್ಟ್ರಗಳಲ್ಲಿ, ಪ್ರತಿ ವರ್ಷದ ಜೂನ್ ತಿಂಗಳ ಮೂರನೆ ಭಾನುವಾರದಂದೂ ಮತ್ತು ಇತರ ಕಡೆಗಳಲ್ಲಿ ಇನ್ನಿತರ ದಿನಗಳಂದೂ ತಂದೆಯ ದಿನಾಚರಣೆ ಎಂದು ಆಚರಿಸಲಾಗುತ್ತದೆ. ತಂದೆಗೆ ಗೌರವ ಸಲ್ಲಿಸಲು ಈ ದಿನ ಮೀಸಲು. ತಾಯಿಯನ್ನು ಗೌರವಿಸಲು ಆಚರಿಸುವ ಮಾತೃ ದಿನಕ್ಕೆ ಇದು ಪೂರಕವಾಗಿದೆ.

ನಮ್ಮಲ್ಲಿ ಎಷ್ಟು ಜನ ಈ ಅಪ್ಪಂದಿರ ದಿನವನ್ನು ಆಚರಿಸುತ್ತೇವೆ..?, ಅಷ್ಟಕ್ಕೂ ಅಪ್ಪನ್ನ ನೆನೆಯುವುದಕ್ಕೆ ಒಂದು ದಿನ ಅಂತ ಬೇಕಾ? ಅಷ್ಟು ದೂರದ ಸಂಬಂಧವೇ ಅದು ಮರೆತುಬಿಡಲು?, ಸುಮ್ಮನೇ ಕೂತು ಅಪ್ಪ ಅಂತ ಯೋಚನೆ ಮಾಡಿದ್ರೆ ಕಣ್ಣಾಲಿಗಳು ಒದ್ದೆಯಾಗದೆ ಇರದು. ತಂದೆ ಮಾಡಿದ ತ್ಯಾಗದ ಅರಿವಾಗದೇ ಇರದು ಅಲ್ಲವೇ? ಅಪ್ಪ ಅಂದರೆ ನಮ್ಮೆಲ್ಲ ಧೈರ್ಯ. ಶಕ್ತಿ, ಸಂತೋಷ, ಸುಖ ಎಂದು ಹೇಳಬಹುದೇನೋ..

ತಂದೆಯನ್ನು ಅಪ್ಪಯ್ಯ, ಅಪ್ಪಾಜಿ ಎಂದು ಕರೆಯುತ್ತಿದ್ದರೆ, ಪತ್ರ ವ್ಯವಹಾರಗಳಲ್ಲಿ ತೀರ್ಥರೂಪ ಪಾದಚರಣ/ ಪಾದಪದ್ಮಗಳಲ್ಲಿ ಎಂದು ಗೌರವಪೂರ್ವಕವಾಗಿ ಸಂಬೋಧಿಸಲಾಗುತ್ತಿತ್ತು. ಆದರೆ ಕಾಲ ಬದಲಾದಂತೆ ದೊಡ್ಡ ಕುಟುಂಬಗಳು ಸಣ್ಣವಾಗಿ, ಅವಿಭಕ್ತ ಕುಟುಂಬಗಳು ವಿರಳವಾಗಿ ತಂದೆಯೊಂದಿಗೆ ತಾಯಿಯಷ್ಟೇ ಸಲುಗೆ ಬೆಳೆಯಿತು. ಅಪ್ಪಯ್ಯ ಈಗ ಅಪ್ಪ, ಪಪ್ಪ, ಡ್ಯಾಡಿ ಎಂದು ಪ್ರೀತಿಯಿಂದ ಕರೆಸಿಕೊಳ್ಳುತ್ತಾನೆ. ಸಾಗರದಷ್ಟು ಆಳ ಅಪ್ಪನ ವಾತ್ಸಲ್ಯದ ಪ್ರೀತಿ. ಎಲೆಮರೆ ಕಾಯಿಯಂತೆ ಅಡಗಿರುವುದು ಅವರ ಅಂತರಾಳದ ಪ್ರೀತಿ. ಅಪ್ಪ ಎಂದರೆ ಭಯವೆಷ್ಟಿದೆಯೋ ಅದಕ್ಕೆರಡರಷ್ಟು ಮಿಗಿಲಾದ ಪ್ರೀತಿ ನಮಗೆ.

ಮಕ್ಕಳೊಂದಿಗೆ ಹೆಚ್ಚು ಬೆರೆಯದಿದ್ದರೂ ಮಕ್ಕಳ ರಕ್ಷಣೆಯಲ್ಲಿ ತಾಯಿಗಿಂತ ಸ್ವಲ್ಪ ಹೆಚ್ಚೇ ಕಾಳಜಿ ವಹಿಸುವ, ಎಲ್ಲರಿಗೂ ಧೈರ್ಯ ತುಂಬುತ್ತಾ ತನ್ನ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಅಪ್ಪನ ಪರಿ ಯಾರಿಗೆ ತಾನೇ ಬಂದೀತು. ತನ್ನ ಮನಸ್ಸಿನಲ್ಲಿ ನೂರೆಂಟು ನೋವುಗಳನ್ನು ತುಂಬಿಕೊಂಡಿದ್ದರೂ ಮನೆಯವರಿಗೆ ಸಾಂತ್ವಾನ ಹೇಳುವ ರೀತಿ ನಿಜಕ್ಕೂ ಮೆಚ್ಚತಕ್ಕ ವಿಷಯ. ಮಕ್ಕಳನ್ನು ಹೊಡೆದು ಬಡಿದು ಮಾಡಿದ ಮಾತ್ರಕ್ಕೆ ಅಪ್ಪ ಕೆಟ್ಟವರೆಂದಲ್ಲ. ಉಳಿ ಪೆಟ್ಟನ್ನು ತಿನ್ನದಿದ್ದರೆ ಯಾವ ಕಲ್ಲು ಶಿಲೆಯಾಗ್ತಿರಲಿಲ್ಲ. ಅಪ್ಪನ ಪೆಟ್ಟು ತಿನ್ನದೇ ಯಾವ ಮಕ್ಕಳು ಉದ್ಧಾರ ಆಗಲ್ಲ. ವಿದ್ಯಾಭ್ಯಾಸದ ಖರ್ಚು–ವೆಚ್ಚಗಳು ಅಪ್ಪನದೇ, ಮನೆಯಲ್ಲಿನ ಖರ್ಚು–ವೆಚ್ಚಗಳು ಅಪ್ಪನದೇ, ಪ್ರತಿಯೊಂದು ತರಗತಿಯ ಅಂಕಪಟ್ಟಿಯಲ್ಲೂ ಅಪ್ಪನ ಸಹಿಯೇ ಆಗಿರಬೇಕೆನ್ನುವ ಅಲಿಖಿತ ನಿಯಮವೂ ಇಲ್ಲದೇನಿಲ್ಲ. ಕಾರಣ ಅಪ್ಪ ಎಲ್ಲಾ ವಿಷಯಗಳಲ್ಲೂ ಎಷ್ಟು ಕರುಣಾಮಯಿಯೋ ಮಕ್ಕಳ ಭವಿಷ್ಯ ರೂಪಿಸುವುದರಲ್ಲಿ ಅಷ್ಟೇ ಕಟ್ಟುನಿಟ್ಟಾಗಿರುವುದೇ ಎಂದೆನಿಸುತ್ತದೆ.

ಅಪ್ಪ ನಮಗೆ ಒಂದು ರೀತಿಯ ಗುರು ಇದ್ದಂತೆ. ಅವರನ್ನು ನೋಡಿಯೇ ಬೆಳೆದವರಿಗಷ್ಟೇ ಅದರ ಮಜ ಗೊತ್ತು. ತಪ್ಪು ಒಪ್ಪುಗಳನ್ನು ಎತ್ತಿ ತೋರಿಸಿ ಸರಿದಾರಿಗೆ ನಡೆಸೋ ಮಾರ್ಗದರ್ಶಿ. ತಪ್ಪಿದಾಗ ತಿದ್ದುವ, ಸರಿ ಮಾಡಿದಾಗ ಭೇಷ್ ಎಂದು ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಾ, ನಮಗೆ ಬೇಕು ಎನಿಸಿದ್ದನ್ನು ಬಾಯಿ ಬಿಟ್ಟು ಕೇಳುವ ಮೊದಲೇ ನಮ್ಮ ಕಣ್ಣೆದುರಿಗೆ ತಂದು ಕೊಡುವ ಧಾರಾಳ ಗುಣ ತಂದೆಗೇ ಹೆಚ್ಚು, ಯಾವುದಕ್ಕೂ ಹೆಚ್ಚೂ ಪ್ರಶ್ನೆ ಮಾಡದೆ ಮಕ್ಕಳ ಒಳಿತನ್ನಷ್ಟೇ ಬಯಸುವ ಈ ಜೀವಕ್ಕೆ ಒಂದು ದಿನ ಮಾತ್ರವಲ್ಲ ಇಡೀ ಜೀವಮಾನವೇ ಋಣಿಯಾಗಿರಬೇಕಾದ್ದು ನಮ್ಮ ಧರ್ಮ. ತನಗೆಷ್ಟೇ ಕಷ್ಟವಿದ್ದರೂ ಅದನ್ನೆಲ್ಲ ಯಾರಲ್ಲೂ ಹಂಚಿಕೊಳ್ಳದೆ ನಗುವಿನ ಮುಖವಾಡ ಧರಿಸಿ ಎಲ್ಲವನ್ನೂ ನಿಭಾಯಿಸುವ ಶಕ್ತಿ ತಂದೆಯಲ್ಲೇ ಇರುವುದು. ಇವೆಲ್ಲದರ ನಡುವೆಯೂ ಜೀವನದ ಮೌಲ್ಯ, ಶಿಸ್ತುಗಳನ್ನು ಕಲಿಸಲು ಮರೆಯದವ, ಮಕ್ಕಳಿಗೆ ಸೂಕ್ತ ಸಂಗಾತಿಯನ್ನು ಹುಡುಕಿ ಬಾಳನ್ನು ಹಸನಾಗಿಸುವವ, ಮಗಳಾಗಿದ್ದರೆ ತಕ್ಕ ಗಂಡನನ್ನು ಅರಸಿ ಭಾರವಾದ ಮನಸ್ಸಿನಿಂದ ಧಾರೆಯೆರೆದು, ತನ್ನ ಜವಾಬ್ದಾರಿ ಮುಗಿಯಿತು ಎಂದುಕೊಳ್ಳದೇ ತನ್ನ ಪ್ರೀತಿ–ಮಮಕಾರದ ಮಳೆ ಹರಿಸುತ್ತಲೇ ಇರುವವ–ಹೀಗೆ ಅಪ್ಪ ಎಂದರೆ ಒಂದು ಭಾವುಕ ಸಂಬಂಧ ಮತ್ತು ಬಿಡಿಸಲಾಗದ ಕೊಂಡಿ. ಇಂತಹ ಅಪ್ಪನನ್ನು ಪಡೆದ ಜನ್ಮ ಸಾರ್ಥಕವೇ ಸರಿ. ಆದರೆ ಅದೆಷ್ಟು ಜನರಿಗುಂಟು ಈ ಭಾಗ್ಯ?

ಆದರೆ ತಪ್ಪು ಮಾಡುವ ಮಕ್ಕಳನ್ನು ತಿದ್ದಿ, ಅವರಲ್ಲಿ ಒಳ್ಳೆಯ ಸಂಸ್ಕಾರ ಬೆಳೆಸಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಅಪ್ಪನ ಪಾತ್ರ ನಿಜಕ್ಕೂ ಜೀವನದಲ್ಲಿ ಬಹಳ ದೊಡ್ಡದು. ಅಪ್ಪನ ಕಿಂಚಿತ್ ಪ್ರೀತಿಗಾಗಿ ಹಾತೊರೆಯುವ ಎಷ್ಟೋ ಜೀವಗಳ ಪಾಲಿಗೆ ಮಮತೆಯ ಸಾಕಾರಮೂರ್ತಿಯಾಗಿ, ಪ್ರೀತಿ ಸ್ನೇಹ, ಭರವಸೆಗಳು ಸಿಗುವಂತಾಗಬೇಕಾಗಿದೆ. ನನಂಥ ಅಪ್ಪ ಇಲ್ಲ ಎಂದು ಎಲ್ಲಾ ಮಕ್ಕಳೂ ಹೇಳುವಂತಾದಾಗ ಮಾತ್ರ ಅಪ್ಪನ ದಿನಾಚರಣೆ ನಿಜಕ್ಕೂ ಅರ್ಥಪೂರ್ಣವಾಗುತ್ತದೆ.

ತಂದೆಯರ ದಿನ ಅಂತ ವರ್ಷದಲ್ಲಿ ಒಂದು ದಿನ ಮಾತ್ರ ಅಪ್ಪನನ್ನು ನೆನೆಯಲು ಸಾಧ್ಯವೇ ? ಅಪ್ಪ ಎಂದೂ ನಮ್ಮ ಪಾಲಿನ ಕುಗ್ಗದ ಉತ್ಸಾಹದ ಚಿಲುಮೆ. ಯಾವುದೇ ಕೆಲಸವಾದರೂ ಅದನ್ನು ಚಾಕಚಕ್ಯತೆಯಿಂದ ಅಷ್ಟೇ ಧೈರ್ಯದಿಂದ ಮಾಡಿ ಮುಗಿಸುವ ಸಾಹಸೀ ಪ್ರವೃತ್ತಿಯ ಪ್ರತಿರೂಪ. ಅಪ್ಪ ಎಂದೂ ಮಕ್ಕಳ ಪಾಲಿನ ನಿಜವಾದ ಹೀರೋ. ನಮ್ಮ ಏಳ್ಗೆಯನ್ನು ಸದಾ ಗಮನಿಸುವ ಅದಕ್ಕಾಗಿ ತುಡಿಯುವ ನಮಗಾಗಿಯೇ ಇರುವ ಮಾನವತಾ ಮೂರ್ತಿ. ಅಪ್ಪ ಸ್ವಲ್ಪ ಮಕ್ಕಳ ವಿಷಯದಲ್ಲಿ ಯಾವುದೇ ರೀತಿಯಲ್ಲೂ ಮೂಗು ತೂರಿಸಿದಂತೆ ಕಾಣಿಸದೇ ಹೋದರೂ ಅಮ್ಮನಿಂದ ಎಲ್ಲವನ್ನೂ ಅರಿತುಕೊಂಡು ನಮ್ಮ ಬೇಕು ಬೇಡಗಳನ್ನು ಪೂರ್ಣವಾಗಿ ಈಡೇರಿಸುವ ಕಾಮಧೇನು. ಬದುಕಿಗೊಂದು ಸೂತ್ರವನ್ನು ಹಾಕಿಕೊಳ್ಳಲು ಆರ್ಥಿಕವಾಗಿ, ನೈತಿಕವಾಗಿ ನಮ್ಮ ಬೆನ್ನು ಹಿಂದೆ ಇದ್ದು ಸದಾ ಪ್ರೋತ್ಸಾಹಿಸುವ ಮಾನವತಾವಾದಿ. ಜೀವನದಲ್ಲಿ ಕುಗ್ಗಿದಾಗ ನಮ್ಮನ್ನು ಬೆನ್ನುತಟ್ಟಿ ಜೀವನ್ಮುಖಿ ಮಾಡುವ ಜೀವನ್ಮುಖಿ.

ಇಂತಹ ಅಪ್ಪನಿಗೆ ವರ್ಷದಲ್ಲಿ ಒಂದು ದಿನ ಎಂದು ಗುರುತಿಸಿ ಅದನ್ನು ನೆನೆಯುವ ನಾವು ಮೂರ್ಖರೆಂದೇ ಎನಿಸುತ್ತದೆ. ಅಪ್ಪನನ್ನು ನೆನೆಯದ ದಿನಗಳಿಲ್ಲ. ಯಾವುದೇ ಘಳಿಗೆಯಲ್ಲೂ ನಮಗೆ ಅಪ್ಪ ಬೇಡ ಎಂದೂ ಅನಿಸುವುದಿಲ್ಲ. ಅಪ್ಪ ಎಂದೂ ನಮ್ಮ ಪಾಲಿನ ದೇವರೇ. ಅಪ್ಪ ಇಲ್ಲದ ಮಕ್ಕಳ ಪಾಡು ಎಷ್ಟೊಂದು ಕಷ್ಟ ಎಂಬುದು ಅದನ್ನು ಬಲ್ಲವರಿಗೇ ಗೊತ್ತು. ಅಪ್ಪನ ಸ್ಥಾನ ತುಂಬಲು ಯಾರಿಂದಲೂ ಸಾಧ್ಯವಿಲ್ಲ. ಅಪ್ಪನ ಪ್ರೀತಿಯ ಮುಂದೆ ಎಲ್ಲವೂ ಕಡಿಮೆಯೇ ಎಂದೆನಿಸದಿರದು. ಮಾತು ಕಡಿಮೆಯಾದರೂ ಅಪ್ಪನ ಇರುವಿಕೆಯೇ ಮಕ್ಕಳಿಗೆ ಆನೆ ಬಲ ತಂದುಕೊಡುವ ಶಕ್ತಿ ಎಂದರೆ ತಪ್ಪಾಗಲಾರದು.


ನಮ್ಮ ಬೇಕು ಬೇಡಗಳನ್ನು ಪರೋಕ್ಷವಾಗಿ ಗಮನಿಸುತ್ತಾ ಅದನ್ನು ಅಮ್ಮನ ಮೂಲಕ ಪೂರೈಸುವ ಅಪ್ಪ ನಿಜಕ್ಕೂ ಮಕ್ಕಳ ಬದುಕಿನ ಸೂತ್ರಧಾರಿಯೇ ಸರಿ. ಮಕ್ಕಳು ತಪ್ಪು ಮಾಡಿದಾಗ ತಿದ್ದಿ ತೀಡಿ ಮಗುವಿಗೊಂದು ರೂಪವನ್ನು ಕೊಡುವ ಶಿಲ್ಪಿ. ಬದುಕಿನುದ್ದಕ್ಕೂ ತನ್ನತನವನ್ನು ಬಿಟ್ಟುಕೊಡದೆ ಬೇರೆಯವರ ಮೇಲೆ ಜವಾಬ್ದಾರಿಯನ್ನು ಹೊರೆಸದೆ ತನ್ನ ಕರ್ತವ್ಯವನ್ನು ಚಾಚೂ ತಪ್ಪದೆ ನಿರ್ವಹಿಸುವ ಚೈತನ್ಯಶಕ್ತಿ.

ಇಂದಿನ ಸಂಕೀರ್ಣ ಸಮಾಜದಲ್ಲಿ ಅಪ್ಪನ ಮಮತೆ, ಅಮ್ಮನ ವಾತ್ಸಲ್ಯ ಎರಡನ್ನೂ ಮಕ್ಕಳು ಬಯಸುತ್ತಾರೆ. ಅಪ್ಪನೆಂದರೆ ಹೆದರುತ್ತಿದ್ದ ದಿನಗಳು ಇಂದು ಇಲ್ಲ. ತಂದೆಯ ಎದುರು ನಿಂತು ಮಾತನಾಡುವ ಧೈರ್ಯ ಇಂದಿನ ಮಕ್ಕಳಲ್ಲಿ ಮನೆ ಮಾಡಿದೆ. ಆದರೆ ಇದರಿಂದ ಸಂಬಂಧಗಳು ಹಳಸದೆ ತಂದೆಯ ಮಾತಿಗೆ ಕಿಮ್ಮತ್ತಿಲ್ಲ ಎನ್ನುವಂತಾಗದೆ ತಂದೆಯ ಬುದ್ಧಿವಂತಿಕೆಯ ಮಾತುಗಳಿಗೆ ಕಿವಿಗೊಡುವ ಮಕ್ಕಳೂ ಬೇಕಾಗಿದೆ. ಮಕ್ಕಳ ಲಾಲನೆ ಪಾಲನೆಯ ಜವಾಬ್ದಾರಿಯನ್ನು ಅಪ್ಪನೂ ನಿರ್ವಹಿಸಿದರೆ ಸಂಬಂಧಗಳು ಬಹಳಷ್ಟು ನಿಕಟವಾಗುತ್ತಾ ಸಾಗುತ್ತದೆ.

ಅಪ್ಪನಿಗಾಗಿ ನಾವೇನಾದರೂ ಮಾಡಬೇಕೆನಿಸಿದರೆ ಇಳಿವಯಸ್ಸಿನಲ್ಲಿ ಅಪ್ಪನಿಗೆ ಆಸರೆಯಾದರೆ ಅಷ್ಟೇ ಸಾಕು. ನಮ್ಮನ್ನು ಕೈಹಿಡಿದು ಸರಿದಾರಿಗೆ ನಡೆಯಲು ಕಾರಣನಾದ ತಂದೆಯ ಹೆಗಲಿಗೆ ಹೆಗಲು ಕೊಟ್ಟು ಸ್ವಲ್ಪ ಸಮಯವನ್ನು ಅವರೊಂದಿಗೆ ಕಳೆಯುವುದಾದರೆ ಅದಕ್ಕಿಂತ ಬೇರೆ ಏನನ್ನೂ ನಮ್ಮಿಂದ ನಿರೀಕ್ಷಿಸಲಾರರು. ವೃದ್ಧಾಪ್ಯದಲ್ಲಿರುವ ಅದೆಷ್ಟೋ ಅಪ್ಪ ಅಮ್ಮಂದಿರು ಇಂದು ಬೀದಿಪಾಲಾಗಿದ್ದಾರೆ,ಕಾರಣ ಏನು ಗೊತ್ತೇ?, ತಮ್ಮನ್ನು ಬೆಳೆಸಲು ತಮ್ಮ ಅಮೂಲ್ಯ ಸಮಯ ತೆಗಿದಿಟ್ಟ ಅಪ್ಪ ಅಮ್ಮನ್ನ ನೋಡಿಕೊಳ್ಳಲು ಮಕ್ಕಳಿಗೆ ಸಮಯವಿಲ್ಲ,ಹಾಗೂ ಕೆಲಸ ಮಾಡಲಾಗದ ಅವರ ಅಸಹಾಯಕತೆ, ನಾವೆಲ್ಲರೂ ನಮ್ಮ ಪರಿಧಿಯಲ್ಲಿ ಈ ಘಟನೆಗಳು ನಡೆಯದಂತೆ ನೋಡಿಕೊಳ್ಳೋಣ, ಇವತ್ತು ನಾವು ಇರುವ ಉನ್ನತ ಸ್ಥಾನಕ್ಕೆ ಮುಖ್ಯ ಕಾರಣವೇ ನಮ್ಮಪ್ಪ ಅಮ್ಮ ಎಂಬುದನ್ನು ಸದಾ ಮನಸ್ಸಿನಲ್ಲಿಟ್ಟುಕೊಂಡು ಅವರನ್ನು ಜೊತೆಯಲ್ಲೇ ಇಟ್ಟುಕೊಳ್ಳುವ ಪರಿಪಾಠವನ್ನು ಬೆಳೆಸಿಕೊಳ್ಳಬೇಕಾಗಿದೆ.

ಪಠ್ಯಪುಸ್ತಕ ಪುನರ್ ಪರಿಷ್ಕರಿಸಿ ಸರ್ಕಾರಿ ಆದೇಶ

ಬಿಜೆಪಿ ಸರ್ಕಾರದ ಅವಧಿಯ ಪಾಠಗಳಿಗೆ ಕೊಕ್; ಅದಕ್ಕೂ ಹಿಂದಿನ ಸಿದ್ದರಾಮಯ್ಯ ಅವಧಿಯ ಪಾಠಗಳು ಪುನರ್ ಜಾರಿ



ಬೆಂಗಳೂರು: ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಪಠ್ಯಪುಸ್ತಕ ಪರಿಷ್ಕರಣೆ ವಿಚಾರ ಸಾಕಷ್ಟು ಚರ್ಚೆಯಾಗುತ್ತಿದೆ. ಪಠ್ಯಪುಸ್ತಕ ಪರಿಷ್ಕರಣೆ ಕುರಿತ ನಿರ್ಧಾರಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತ ನಂತರ ಇದೀಗ ರಾಜ್ಯ ಸರ್ಕಾರ ಪರಿಷ್ಕರಣೆ ಮಾಡಿ ಆದೇಶ ಹೊರಡಿಸಿದೆ.

ಯಾವೆಲ್ಲ ಪಾಠಗಳನ್ನು ಕೈಬಿಡಲಾಗಿದೆ: ಸಮಾಜ ವಿಜ್ಞಾನ ಪಠ್ಯಪುಸ್ತಕದ 9 ಪಾಠಗಳನ್ನು ಕೈ ಬಿಡಲಾಗಿದೆ. ಕನ್ನಡ ಭಾಷಾ ಪುಸ್ತಕದಲ್ಲಿ 9 ಪಾಠಗಳಿಗೆ ಕೋಕ್ ನೀಡಲಾಗಿದೆ. ಆರ್‌ಎಸ್‌ಎಸ್ ಸ್ಥಾಪಕ ಕೇಶವ್ ಹೆಡಗೇವಾರ್ ಅವರು ಬರೆದಿದ್ದ 'ನಿಜವಾದ ಆದರ್ಶಪುರುಷ ಯಾರಾಗಬೇಕು' ಪಠ್ಯ, ಚಕ್ರವರ್ತಿ ಸೂಲಿಬೆಲೆಯವರು ಬರೆದಿದ್ದ 'ತಾಯಿ ಭಾರತಿಯ ಅಮರ ಪುತ್ರರು' ಪಾಠವನ್ನು ಕೈ ಬಿಡಲಾಗಿದೆ.

ಇನ್ನು ಶತಾವಧಾನಿ ಆರ್.ಗಣೇಶ್ ಅವರ 'ಶ್ರೇಷ್ಠ ಭಾರತೀಯ ಚಿಂತನೆಗಳು' ನಿರ್ಮಲಾ ಸುರತ್ಕಲ್, ರಮಾನಂದ ಆಚಾರ್ಯರ, ಪಾರಂಪಳ್ಳಿ ನರಸಿಂಹ ಐತಾಳ, ಲಕ್ಷ್ಮೀಶ, ಕೆಟಿ ಗಟ್ಟಿ ಪಾಠ ಮತ್ತು ಪಿ.ಸತ್ಯ ನಾರಾಯಣ ಭಟ್ಟರ ಗದ್ಯಕ್ಕೂ ಕತ್ತರಿ ಹಾಕಲಾಗಿದೆ.

ಯಾವೆಲ್ಲ ಪಾಠಗಳ ಸೇರ್ಪಡೆ: ಸಾವಿತ್ರಿಬಾಯಿ ಫುಲೆ, ಜವಹರಲಾಲ್ ನೆಹರು, ಡಾ.ಬಿಆರ್ ಅಂಬೇಡ್ಕರ್, ಸುಕುಮಾರಸ್ವಾಮಿ, ಸಾರಾ ಅಬೂಬ್ಕರ್, ವಿಜಯಮಾಲಾ ರಂಗನಾಥ್ ಅವರ ಪಾಠಗಳನ್ನು ಸೇರಿಸಲಾಗಿದೆ. ವಾಲ್ಮೀಕಿ ಮಹರ್ಷಿ, ಉರುಸ್‌ಗಳಲ್ಲಿ ಭಾವೈಕ್ಯತೆ ಪಾಠಗಳನ್ನು ಸೇರಿಸಲಾಗಿದೆ.

ಸಮಾಜ ವಿಜ್ಞಾನ ವಿಷಯದ ಪಠ್ಯದಲ್ಲೂ ಹಲವು ಅಧ್ಯಾಯಗಳನ್ನು ಸೇರ್ಪಡೆ ಮಾಡಲಾಗಿದೆ. ವೇದ ಕಾಲದ ಸಂಸ್ಕೃತಿ, ಹೊಸ ಧರ್ಮಗಳ ಉದಯ, ಮಿರ್ಜಾ ಇಸ್ಮಾಯಿಲ್, ಸರ್ ಎಂ ವಿಶ್ವೇಶ್ವರಯ್ಯ, ಒಡೆಯರ್ ಕುರಿತ ಪಾಠಗಳನ್ನು ಸೇರಿಸಲಾಗಿದೆ.

ಗೃಹಜ್ಯೋತಿ ಅರ್ಜಿ ಸಲ್ಲಿಕೆ ಇಂದಿನಿಂದ ಆರಂಭ

ಬೆಂಗಳೂರು, ಜೂ.17– ಜುಲೈ 1ರಿಂದ ಜಾರಿಯಾಗಲಿರುವ ಸರ್ಕಾರದ 2ನೇ ಗ್ಯಾರಂಟಿ ಗೃಹ ಜ್ಯೋತಿ ಯೋಜನೆಗೆ ಭಾನುವಾರದಿಂದ ಅರ್ಜಿ ಸಲ್ಲಿಕೆ ಆರಂಭಗೊಳ್ಳಲಿದೆ. ಸೇವಾ ಸಿಂಧು ಪೋರ್ಟಲ್‌ನಲ್ಲಿ ಕೆಲ ಬದಲಾವಣೆಯಿಂದಾಗಿ ಅರ್ಜಿ ಸಲ್ಲಿಕೆಗೆ ವಿಳಂಬವಾಗಿತ್ತು. ಸದ್ಯ ಎಲ್ಲವೂ ಸರಿಯಾಗಿದ್ದು, ಹಾಗಾಗಿ ಭಾನುವಾರದಿಂದ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ.



ಗೃಹಜ್ಯೋತಿಗೆ ಅರ್ಜಿ ಸಲ್ಲಿಸುವುದು ಹೇಗೆ: ಗೃಹಜ್ಯೋತಿ ಯೋಜನೆ ಅಡಿ ಸೇವಾಸಿಂಧು ಪೋರ್ಟಲ್ ಮೂಲಕ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ. https://sevasindhugss.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡುವ ಮೂಲಕ ಮೊಬೈಲ್, ಕಂಪ್ಯೂಟರ್, ಲ್ಯಾಪ್‌ಟಾಪ್‌ನಲ್ಲೂ ಸಹ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 1912 ಸಂಪರ್ಕಿಸಬಹುದಾಗಿದೆ. ಬೆಂಗಳೂರು ಒನ್, ಕರ್ನಾಟಕ ಒನ್, ಗ್ರಾಮ ಒನ್, ನಾಡ ಕಚೇರಿ, ಗ್ರಾ.ಪಂ. ಕಚೇರಿ, ವಿದ್ಯುತ್ ಕಚೇರಿಗಳಲ್ಲಿ ನೋಂದಾಯಿಸಬಹುದು. ಆಧಾರ್ ಕಾರ್ಡ್, ಆರ್‌ಆರ್ ನಂಬರ್, ಮೊಬೈಲ್ ಸಂಖ್ಯೆ, ಮನೆ ಬಾಡಿಗೆ ಕರಾರು ಪತ್ರ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸುವ ದಿನಾಂಕ ಮುಂದೂಡಿಕೆ: ಇತ್ತೀಚೆಗೆ ಗೃಹ ಜ್ಯೋತಿ ಯೋಜನೆಗೆ ಇದೇ ತಿಂಗಳು 15ರಿಂದ ಅರ್ಜಿ ಸಲ್ಲಿಕೆ ಆರಂಭವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ಹೇಳಿದ್ದರು. ಆದರೆ ತಾಂತ್ರಿಕ ದೋಷ ಹಿನ್ನೆಲೆಯಲ್ಲಿ ಸೇವಾಸಿಂಧು ಆ್ಯಪ್ ಮೂಲಕ ಅರ್ಜಿ ಸಲ್ಲಿಸಲು ವಿಳಂಬವಾಗಿತ್ತು. ಇದರಿಂದ ಸರ್ಕಾರ ಅರ್ಜಿ ಸಲ್ಲಿಸುವ ದಿನಾಂಕ ಮುಂದೂಡಿತ್ತು. ಹೀಗಾಗಿ ಗೃಹಜ್ಯೋತಿ ಯೋಜನೆಗೆ ನೋಂದಣಿ ಭಾನುವಾರದಿಂದ ಅರ್ಜಿ ಸಲ್ಲಿಸಲು ಕೋರಲಾಗಿದೆ.

ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಕೆಂಚಪ್ಪಗೌಡ

ಬೆಂಗಳೂರು,ಜೂ.17–ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ಬಿ.ಕೆಂಚಪ್ಪಗೌಡ ಆಯ್ಕೆಯಾಗಿದ್ದಾರೆ.



ಬಿ.ಕೆಂಚಪ್ಪಗೌಡ

ಇಂದು ನಡೆದ ಚುನಾವಣೆಯಲ್ಲಿ ಸಂಘದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.



ಸಿ.ಜಿ.ಗಂಗಾಧರ್

ಉಪಾಧ್ಯಕ್ಷರಾಗಿ ಎಲ್.ಶ್ರೀನಿವಾಸ್, ಸಿ.ದೇವರಾಜು, ಪ್ರಧಾನ ಕಾರ್ಯದರ್ಶಿಯಾಗಿ ಹೆಚ್.ಸಿ. ಜಯಮುತ್ತು, ಸಹ ಕಾರ್ಯದರ್ಶಿಯಾಗಿ ಸಿ.ಜೆ. ಗಂಗಾಧರ್ ಮತ್ತು ಖಜಾಂಚಿಯಾಗಿ ಸಿ.ಎಂ.ಮಾರೇಗೌಡ ಆಯ್ಕೆಯಾಗಿದ್ದಾರೆ.

ಬ್ರ್ಯಾಂಡ್ ಬೆಂಗಳೂರು, ಬೆಟರ್ ಬೆಂಗಳೂರು ನಿರ್ಮಾಣಕ್ಕೆ ಸಮಿತಿ ರಚನೆ

ಬೆಂಗಳೂರು: ಬ್ರ್ಯಾಂಡ್ ಬೆಂಗಳೂರು ಹಾಗೂ ಬೆಟರ್ ಬೆಂಗಳೂರು ಮೂಲಕ ಗ್ಲೋಬಲ್ ಬೆಂಗಳೂರು ನಿರ್ಮಾಣ ಮಾಡುವುದೇ ನಮ್ಮ ಧ್ಯೇಯವಾಗಿದ್ದು, ಅಧಿಕಾರಿಗಳು ಹಾಗೂ ಬೆಂಗಳೂರಿನ ಪ್ರಮುಖರನ್ನು ಒಳಗೊಂಡ ಒಂದು ಸಮಿತಿ ರಚಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶನಿವಾರ ಹೇಳಿದ್ದಾರೆ.



ಇಂದು ವಿಧಾನಸೌಧದಲ್ಲಿ'ಬ್ರ್ಯಾಂಡ್ ಬೆಂಗಳೂರು' ಹೆಸರಿನಡಿ ಮಹತ್ವದ ಸಭೆ ನಡೆಸಿದ ಡಿಸಿಎಂ, ಬೆಂಗಳೂರಿನ ಅಭಿವೃದ್ಧಿಗೆ 6 ತಿಂಗಳಲ್ಲಿ ನೀಲನಕ್ಷೆ ಮಾಸ್ಟರ್ ಪ್ಲಾನ್ ಸಿದ್ಧಪಡಿಸಲಾಗುವುದು ಎಂದು ಹೇಳಿದ್ದಾರೆ.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆಶಿ, ಬೆಂಗಳೂರಿನ ವೈಭವವನ್ನು ಮರಳಿ ತರುವ ಪ್ರಯತ್ನದಲ್ಲಿ ಮಹತ್ವದ ಹೆಜ್ಜೆ ಇಟ್ಟಿದ್ದು, ವಿಧಾನಸೌಧದಲ್ಲಿ ಬ್ರ್ಯಾಂಡ್ ಬೆಂಗಳೂರು ಕುರಿತು ಸಂಬಂಧಪಟ್ಟ ಅಧಿಕಾರಿ ಗಳೊಂದಿಗೆ ಸಭೆ ನಡೆಸಲಾಯಿತು. ಈ ವೇಳೆ ಬೆಂಗಳೂರನ್ನು ಅಭಿವೃದ್ಧಿಪಡಿಸುವ ಯೋಜನೆಗಳ ಬಗ್ಗೆ ಚರ್ಚಿಸಲಾಯಿತು ಎಂದರು. ಮೊದಲು ಎಲ್ಲಾ ಪಕ್ಷಗಳ ಶಾಸಕರ ಅಭಿಪ್ರಾಯ ಪಡೆದಿದ್ದೆ. ಈಗ ಕೈಗಾರಿಕೆ, ಬಂಡವಾಳ ಹೂಡಿಕೆದಾರರ ಅಭಿಪ್ರಾಯ ಪಡೆದಿದ್ದೇನೆ. ಮುಂದೆ ಮತ್ತೊಂದು ಹಂತದ ಸಭೆ ಮಾಡುತ್ತೇನೆ. ಮುಂದಿನ ವಾರ ಸಾರ್ವಜನಿಕರ ಅಭಿಪ್ರಾಯ ಪಡೆಯಲಾಗುವುದು ಎಂದರು.

ಕಸ ಹಾಗೂ ಕೊಳಚೆ ನೀರು ನಿರ್ವಹಣೆ, ಕೊಳಚೆ ನೀರು ಪರಿಷ್ಕರಣೆ ಮತ್ತು ಮರುಬಳಕೆ, ಕಾವೇರಿ ನೀರು ಪೂರೈಕೆ, ಮೆಟ್ರೋ ಸಂಪರ್ಕ ವಿಸ್ತರಣೆ, ಮೋನೊ ರೈಲು, ಉಪನಗರ ರೈಲು, ಉತ್ತಮ ಗುಣಮಟ್ಟದ ಶಿಕ್ಷಣ, ಕೊಳಗೇರಿ ಪ್ರದೇಶ ಅಭಿವೃದ್ಧಿ, ರಸ್ತೆ ಅಗಲೀಕರಣ, ಎಲಿವೇಟೆಡ್ ರಸ್ತೆ, 20 ಪ್ರಮುಖ ಜಕ್ಷನ್ ರಸ್ತೆಗಳ ಬಗ್ಗೆ ಗಮನ, ನೈಸ್ ರಸ್ತೆಯನ್ನು ವರ್ತುಲ ರಸ್ತೆ ಆಗಿ ಮಾರ್ಪಾಡು, ಪಾದಚಾರಿ ಮಾರ್ಗ ಸುಧಾರಣೆ, ನಗರದಲ್ಲಿ ಸುರಂಗ ರಸ್ತೆಗಳ ನಿರ್ಮಾಣ, ಕೆಲವು ಪ್ರದೇಶ 24/7 ತೆರೆಯಲು ಅವಕಾಶ, ವಾಹನ ನಿಲುಗಡೆ, ಭ್ರಷ್ಟಾಚಾರ ನಿಯಂತ್ರಣ ಸೇರಿದಂತೆ ಅನೇಕ ಸಲಹೆಗಳನ್ನು ನೀಡಿದ್ದಾರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಸಭೆಯಲ್ಲಿ ಸಚಿವರಾದ ಕೃಷ್ಣಬೈರೇಗೌಡ, ಬೈರತಿ ಸುರೇಶ್, ಮಾಜಿ ಸಿಎಂ ಡಿ.ವಿ.ಸದಾನಂದಗೌಡ, ಉದ್ಯಮಿಗಳಾದ ಆರ್.ಕೆ.ಮಿಶ್ರಾ, ಕಿರಣ್ ಮುಜುಂದಾರ್ ಷಾ, ಪ್ರಶಾಂತ್, ಗೀತಾಂಜಲಿ ಕಿರ್ಲೋಸ್ಕರ್ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವಿದ್ಯುತ್ ದರ ಹೆಚ್ಚಳ ರದ್ದು ಮಾಡದಿದ್ದರೆ ಕೈ ವರ್ಚಸ್ಸಿಗೆ ಧಕ್ಕೆ

● ಶಾಸಕ ತನ್ವೀರ್ ಸೇಠ್ ಎಚ್ಚರಿಕೆ ● ಸಂಸದ ಪ್ರತಾಪ್ ಸಿಂಹ ಮತ್ತೊಂದು ಮದುವೆಯಾಗಲಿ!



ಮೈಸೂರು,ಜೂ.17(ಬಿಎಲ್‌ಯು)– ವಿದ್ಯುತ್ ದರ ಹೆಚ್ಚಳ ಆದೇಶವನ್ನು ರದ್ದು ಮಾಡದಿದ್ದರೆ ಕಾಂಗ್ರೆಸ್ ವರ್ಚಸ್ಸಿಗೆ ಧಕ್ಕೆ ಆಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರದ ಮುಖೇನ ಮನವರಿಕೆ ಮಾಡಿಕೊಟ್ಟಿದ್ದೇನೆ ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ವಿದ್ಯುತ್ ದರ ಹೆಚ್ಚಳದಲ್ಲಿ ಲೋಪವಾಗಿದ್ದು, ವಿದ್ಯುತ್ ದರ ಹೆಚ್ಚಳ ಮಾಡಿದರೆ ಜನರಿಗೆ ತೊಂದರೆ ಆಗಲಿದೆ ಈ ಹಿನ್ನೆಲೆಯಲ್ಲಿ ಇದನ್ನು ಪುನರ್ ಪರಿಶೀಲನೆ ಮಾಡುವಂತೆ ಮನವಿ ಮಾಡಿದ್ದೇನೆ ಎಂದರು.

ವಿದ್ಯುತ್ ದರ ಹೆಚ್ಚಳಕ್ಕೆ ಹಿಂದಿನ ಬಿಜೆಪಿ ಸರ್ಕಾರವೇ ಕಾರಣ. ದರ ಹೆಚ್ಚಳ ಮಾಡುವ ಕೆಇಆರ್‌ಸಿ ಶಿಫಾರಸ್ಸಿಗೆ ಹಿಂದಿನ ಬಿಜೆಪಿ ಸರ್ಕಾರವೇ ಒಪ್ಪಿಗೆ ಸೂಚಿಸಿದೆ. ಚುನಾವಣೆಯಲ್ಲಿ ತಾವು ಸೋಲುವುದು ಖಚಿತ ಎಂದು ಮನವರಿಕೆ ಆಗಿದ್ದ ಕಾರಣ ಅವರು ಅಂದೇ ವಿದ್ಯುತ್ ದರ ಹೆಚ್ಚಳ ಪ್ರಸ್ತಾಪಕ್ಕೆ ಒಪ್ಪಿಗೆ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ವಿದ್ಯುತ್ ದರ ಹೆಚ್ಚಳ ಆದೇಶವನ್ನು ಪುನರ್ ಪರಿಶೀಲನೆ ಮಾಡುವಂತೆ ಕೋರಿದ್ದೇನೆ ಎಂದರು.

ಪ್ರತಾಪ್ ಸಿಂಹಗೆ ಸಲಹೆ: ಸಂಸದ ಪ್ರತಾಪ್ ಸಿಂಹ ಅವರು ಮತ್ತೊಂದು ಮದುವೆ ಆಗಲಿ ಎಂದು ಇದೇ ವೇಳೆ ತನ್ವೀರ್ ಸೇಠ್ ಸಲಹೆ ನೀಡಿದರು.

ಮುಸ್ಲಿಂ ಸಮುದಾಯದಲ್ಲಿ ಒಬ್ಬರಿಗೆ ಇಬ್ಬರು, ಮೂವರು ಹೆಂಡತಿಯರು ಇರುತ್ತಾರೆ. ಹೀಗಿರುವಾಗ ಗೃಹ ಲಕ್ಷ್ಮಿ ಯೋಜನೆಯ ಸೌಲಭ್ಯವನ್ನು ಯಾರಿಗೆ ಎಂದು ನಿರ್ಧರಿಸುತ್ತೀರಿ ಎಂಬ ಪ್ರತಾಪ್ ಸಿಂಹ ಅವರ ಪ್ರಶ್ನೆಗೆ ಶಾಸಕ ತನ್ವೀರ್ ಸೇಠ್ ಟಾಂಗ್ ಕೊಟ್ಟರು.

ಅವರು ಮತ್ತೊಂದು ಮದುವೆ ಆಗಲಿ. ಆ ಅನುಭವ ಪಡೆದ ನಂತರ ಮಾತನಾಡಲಿ ಎಂದು ಸೇಠ್ ತಿರುಗೇಟು ಕೊಟ್ಟರು. ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಸ್ಕೀಂ ಬಗ್ಗೆ ಕೇಸರಿ ಹಾಗೂ ಕೈ ಪಾಳಯದ ನಡುವೆ ಮಾತಿನ ಜುಗಲ್ ಬಂಧಿ ಮುಂದುವರೆದಿದ್ದು, ಇದು ಈಗ ವೈಯಕ್ತಿಕ ವಿಚಾರಗಳ ಮಟ್ಟಕ್ಕೂ ಇಳಿದಿದೆ.

ಕುಕ್ಕರಹಳ್ಳಿ ಕೆರೆ ಅಂಗಳದಲ್ಲಿ ಶಕ್ತಿಧಾಮದ ಮಕ್ಕಳ ಸ್ವಚ್ಛಂದ ವಿಹಾರ

● ಮಕ್ಕಳಿಗೆ ಪಕ್ಷಿ ವೈವಿಧ್ಯತೆ ಪಾಠ ಮಾಡಿದ ಪಕ್ಷಿತಜ್ಞ ದಿನೇಶ್
● ಮಕ್ಕಳ ಸಂಭ್ರಮಕ್ಕೆ ಸಾಕ್ಷಿಯಾದ ಗೀತಾ ಶಿವರಾಜ್‌ಕುಮಾರ್



ಮೈಸೂರು, ಜೂ. 17(ಬಿಎಲ್‌ಯು)– ದೇಶ ವಿದೇಶಗಳ ಪಕ್ಷಿ ಸಂಕುಲದ ನೆಲೆವೀಡು ಆಗಿರುವ ಮೈಸೂರಿನ ಕುಕ್ಕರಹಳ್ಳಿ ಕೆರೆ ಅಂಗಳದಲ್ಲಿ ಶನಿವಾರ ಶಕ್ತಿಧಾಮದ ಮಕ್ಕಳಿಗೆ ಪಕ್ಷಿ ಪ್ರಪಂಚದ ಹಾಗೂ ಪರಿಸರದ ಪಾಠ ಮಾಡಲಾಯಿತು.

ಶಕ್ತಿಧಾಮ ಟ್ರಸ್ಟ್ ಅಧ್ಯಕ್ಷರೂ ಆದ ಚಿತ್ರ ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್ ಅವರು ಮಕ್ಕಳೊಂದಿಗೆ ಬೆರೆತು ಪಕ್ಷಿ ಸಂಕುಲದ ವೈಶಿಷ್ಟತೆಯನ್ನು ಮನವರಿಕೆ ಮಾಡಿಕೊಂಡರು. ಮೈಸೂರಿನ ಶಕ್ತಿಧಾಮದ ಮಕ್ಕಳು ಓದಿನಲ್ಲಿ ಮುಂದು. ಆದರೆ ಹಾಸ್ಟೆಲ್‌ನಲ್ಲಿ ಇರಬೇಕಾದ ಕಾರಣ ಇತರ ಮಕ್ಕಳಂತೆ ಹೊರಗೆ ಹೋಗುವ ಅವಕಾಶ ಕಮ್ಮಿ. ಪಠ್ಯದಲ್ಲೇ ತಲ್ಲೀನರಾಗಿರುವ ಈ ಮಕ್ಕಳಿಗೆ ಕುಕ್ಕರಹಳ್ಳಿ ಕೆರೆ ಅಂಗಳದಲ್ಲಿ ಪ್ರಕೃತಿ ಸೌಂದರ್ಯ ವೀಕ್ಷಿಸುವ ಅವಕಾಶ ಕಲ್ಪಿಸಲಾಗಿತ್ತು.

ಶನಿವಾರ ಬೆಳಿಗ್ಗೆ 6.30 ಗಂಟೆಗೆ ಕುಕ್ಕರಹಳ್ಳಿ ಕೆರೆಗೆ ಬಂದ ಮಕ್ಕಳಿಗೆ ಪಕ್ಷಿ ತಜ್ಞ ದಿನೇಶ್ ಅವರು, ಕುಕ್ಕರಹಳ್ಳಿ ಕೆರೆಯ ಸೌಂದರ್ಯ, ದೇಶ ವಿದೇಶಗಳಿಂದ ಬರುವ ಪಕ್ಷಿ ಸಂಕುಲಗಳ ವೈಶಿಷ್ಟತೆ, ಮರಗಳು, ಔಷಧಿಗಿಡಗಳು ಸೇರಿದಂತೆ ಹಲವು ವಿಚಾರಗಳನ್ನು ಮನವರಿಕೆ ಮಾಡಿಕೊಟ್ಟರು.

ಪೆಲಿಕಾನ್, ಬ್ಲಾಕ್ ಹೆಡೆಡ್ ಐಬಿಸ್, ನಾಮದ ಕೋಳಿಗಳು ಕೆರೆಯ ಅಂಗಳದ ನಾನಾ ಗಿಡ ಮರಗಳಲ್ಲಿ ಗೂಡು ಕಟ್ಟಿ ಮರಿ ಮಾಡುವ ಬಗ್ಗೆ ವಿವರಿಸಿದರು. ಹಿಮಾಲಯದಿಂದ ಪಿಟ್ಟಾ ಎಂಬ ಪಕ್ಷಿ ಇಲ್ಲಿಗೆ ಬರುವ ಬಗ್ಗೆಯೂ ಮಾಹಿತಿ ನೀಡಿದರು.

ಅಕ್ಟೋಬರ್‌ನಿಂದ ಮಾರ್ಚ್ ಸಮಯದಲ್ಲಿ ವಿದೇಶಿ ಪಕ್ಷಿಗಳು ಬಂದು ಸಂತಾನೋತ್ಪತ್ತಿಯಲ್ಲಿ ತೊಡಗುವ ಬಗ್ಗೆಯೂ ದಿನೇಶ್ ವಿವರಿಸಿದರು. ಕಿಂಗ್ ಫಿಶರ್, ಹೆಜ್ಜಾರ್ಲೆ, ಪೇಯಿಂಟೆಡ್ ಸ್ಟಾರ್ಕ್, ಕೊಕ್ಕರೆ ಸೇರಿದಂತೆ ಇತರೆ ಪಕ್ಷಿಗಳನ್ನು ವೀಕ್ಷಿಸಿದ ಶಕ್ತಿ ಧಾಮದ ಮಕ್ಕಳು, ಸಂತಸಪಟ್ಟರು. ಸುಮಾರು 2 ಗಂಟೆಗಳ ಕಾಲ ಇಡೀ ಕುಕ್ಕರ ಹಳ್ಳಿ ಕೆರೆ ಆವರಣದಲ್ಲಿ ವಿಹರಿಸಿ, ಮಕ್ಕಳು ವಿಶಿಷ್ಟ ಅನುಭವ ಪಡೆದರು.

ಪಠ್ಯ ಪರಿಷ್ಕರಣೆ ಸರಿಯಾದ ಕ್ರಮ
ಗೀತಾ ಶಿವರಾಜ್‌ಕುಮಾರ್ ಸಮರ್ಥನೆ

ಮೈಸೂರು,ಜೂ.17(ಬಿಎಲ್‌ಯು)– ಪಠ್ಯಪುಸ್ತಕ ಪುನರ್ ಪರಿಷ್ಕರಣೆ ಮಾಡುವ ರಾಜ್ಯ ಕಾಂಗ್ರೆಸ್ ಸರ್ಕಾರದ ತೀರ್ಮಾನವನ್ನು ಚಿತ್ರ ನಟ ಶಿವರಾಜ್‌ಕುಮಾರ್ ಪತ್ನಿ ಹಾಗೂ ಕಾಂಗ್ರೆಸ್ ಮುಖಂಡರಾದ ಗೀತಾ ಶಿವರಾಜ್‌ಕುಮಾರ್ ಸಮರ್ಥಿಸಿಕೊಂಡಿದ್ದಾರೆ.

ಮಾಧ್ಯಮದವರ ಜೊತೆ ಮಾತನಾಡಿದ ಅವರು, ಪಠ್ಯ ಪುಸ್ತಕದಲ್ಲಿ ಸಾವರ್ಕರ್ ಸೇರಿದಂತೆ ಕೆಲವು ಪಠ್ಯಗಳನ್ನು ಬಿಜೆಪಿ ಸರ್ಕಾರ ಅಳವಡಿಸಿತ್ತು. ಅದಕ್ಕೆ ಕೊಕ್ ಕೊಟ್ಟಿರುವ ಕಾಂಗ್ರೆಸ್ ಸರ್ಕಾರದ ತೀರ್ಮಾನದಲ್ಲಿ ತಪ್ಪೇನಿಲ್ಲ ಎಂದು ಅಭಿಪ್ರಾಯಪಟ್ಟರು.

ಮಕ್ಕಳ ಅನುಕೂಲಕ್ಕೆ ಪಠ್ಯ ಬದಲಾಯಿಸಿದರೆ ತಪ್ಪೇನು ಎಂದು ಕಾಂಗ್ರೆಸ್ ಸರ್ಕಾರದ ನಿರ್ಧಾರವನ್ನು ಸಮರ್ಥಿಸಿಕೊಂಡ ಅವರು, ಪಠ್ಯಪುಸ್ತಕಗಳಲ್ಲಿ ಒಳ್ಳೆಯ ವಿಚಾರಗಳು ಮಾತ್ರ ಇರಬೇಕು. ಈ ಕಾರಣಕ್ಕಾಗಿ ಪಠ್ಯ ಪುಸ್ತಕ ಪುನರ್ ಪರಿಷ್ಕರಣೆ ಒಳ್ಳೆಯದು ಎಂದರು.

ಪ್ರತಿ ಸರ್ಕಾರದ ಅವಧಿಯಲ್ಲೂ ಪಠ್ಯ ಪರಿಷ್ಕರಣೆ ಬದಲಾವಣೆ ಮಕ್ಕಳಲ್ಲಿ ಗೊಂದಲ ಉಂಟು ಮಾಡುವುದಿಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸಲು ಗೀತಾ ನಿರಾಕರಿಸಿದರು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಗೀತಾ ಶಿವರಾಜ್‌ಕುಮಾರ್ ಅವರ ಸಹೋದರರೂ ಆಗಿರುವ ಹಿನ್ನೆಲೆಯಲ್ಲಿ ಸರ್ಕಾರದ ತೀರ್ಮಾನವನ್ನು ಸಮರ್ಥಿಸಿಕೊಂಡ ಅವರ ನಿಲುವು ಸಹಜವಾಗಿದೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡುವ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡದ ಅವರು, ಈ ಬಗ್ಗೆ ಮುಂದಿನ ದಿನದಲ್ಲಿ ಮಾತನಾಡುವುದಿಲ್ಲ. ಇದು ಸೂಕ್ತ ಸ್ಥಳವೂ ಅಲ್ಲ ಎಂದರು.

ಇತ್ತೀಚಿನ ಸಿಎಂ ಸಿದ್ದರಾಮಯ್ಯ ಅವರ ಭೇಟಿ ಸೌಜನ್ಯಯುತವಾಗಿತ್ತು. ಚುನಾವಣಾ ಪ್ರಚಾರದ ನಂತರ ಅವರನ್ನು ಭೇಟಿ ಮಾಡಿರಲಿಲ್ಲ ಹಾಗಾಗಿ ಅವರನ್ನು ಭೇಟಿಯಾಗಿದ್ದೆ ಎಂದು ಸ್ಪಷ್ಟಪಡಿಸಿದರು.

ಕನಕದಾಸ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಿರ್ದೇಶಕ ಸ್ಥಾನದಿಂದ ವಜಾ



ಜೆ.ಮಹೇಶ್

ಮೈಸೂರು, ಜೂ. 17(ಬಿಎಲ್‌ಯು) –ಅಪೂರ್ಣ ಕಾಂಪೌಂಡ್ ಕಟ್ಟಡ ಕಾಮಗಾರಿಗೆ ಗುತ್ತಿಗೆದಾರನಿಗೆ 4.80 ಲಕ್ಷ ರೂ. ದುಡಿಯುವ ಬಂಡವಾಳವನ್ನು ಪಾವತಿಸುವ ಮೂಲಕ ಸಂಘಕ್ಕೆ ನಷ್ಟವನ್ನುಂಟು ಮಾಡಲಾಗಿದೆ ಎಂಬ ಆರೋಪದ ಮೇರೆಗೆ ಮೈಸೂರಿನ ಶ್ರೀ ಕನಕದಾಸ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿರುವ ಜೆ. ಮಹೇಶ್ ಅವರನ್ನು ಸಂಘದ ನಿರ್ದೇಶಕ ಸ್ಥಾನದಿಂದ ವಜಾಗೊಳಿಸಿ ಸಹಕಾರ ಸಂಘಗಳ ಜಂಟಿ ನಿಬಂಧಕರು (ಕಟ್ಟಡ ಬ್ಯಾಂಕ್‌ಗಳ ವಿಭಾಗ) ಆದೇಶ ಹೊರಡಿಸಿದ್ದಾರೆ.

ಸಂಘದ ಅಧ್ಯಕ್ಷರಾಗಿರುವ ಜೆ.ಮಹೇಶ್, ಸಂಘದ ಆಡಳಿತ ಮಂಡಳಿ ಮತ್ತು ಕಟ್ಟಡ ಉಪಸಮಿತಿಗೆ ವಸ್ತುಸ್ಥಿತಿಯನ್ನು ಮರೆಮಾಚಿ, ಕಾಂಪೌಂಡ್ ಕಾಮಗಾರಿ ನಡೆಸುವಾಗ ಪಾರದರ್ಶಕ ನಿಯಮಗಳನ್ನು ಪಾಲನೆ ಮಾಡದೆ, ಇಲಾಖಾ ಅನುಮತಿಯನ್ನೂ ಪಡೆಯದೆ, ಅಪೂರ್ಣ ಕಾಂಪೌಂಡ್ ಕಾಮಗಾರಿಗೆ ಗುತ್ತಿಗೆದಾರನಿಗೆ 4,80,259 ರೂ. ದುಡಿಯುವ ಬಂಡವಾಳದಿಂದ ಪಾವತಿಸಿ ಸಂಘಕ್ಕೆ ನಷ್ಟವನ್ನುಂಟು ಮಾಡಿದ್ದಾರೆ ಎಂದು ಸಂಘದ ಸದಸ್ಯ ಎನ್.ಕೆ.ಗೋಪಾಲಯ್ಯ ಅವರು, ಬೆಂಗಳೂರಿನ ಸಹಕಾರ ಸಂಘಗಳ ಜಂಟಿ ನಿಬಂಧಕರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಜಂಟಿ ನಿಬಂಧಕರು ಸಹಕಾರ ಸಂಘಗಳ ಉಪನಿಬಂಧಕರಿಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದರು. ಅವರು ಸಲ್ಲಿಸಿದ ವರದಿಯನ್ವಯ ಆರೋಪ ದೃಢಪಟ್ಟ ಹಿನ್ನೆಲೆಯಲ್ಲಿ ಜೆ.ಮಹೇಶ್ ಅವರನ್ನು ಸಂಘದ ನಿರ್ದೇಶಕ ಸ್ಥಾನದಿಂದ 3 ವರ್ಷಗಳ ಅವಧಿಗೆ ಅನರ್ಹಗೊಳಿಸಿ ಆದೇಶಿಸಿದ್ದಾರೆ. ಈ ಅವಧಿಯಲ್ಲಿ ಮಹೇಶ್ ಸಹಕಾರ ಸಂಘದ ಪ್ರತಿನಿಧಿಯಾಗಿ ಚುನಾಯಿತರಾಗಲು ಅಥವಾ ನೇಮಕ ಗೊಳ್ಳಲು ಇಲ್ಲವೇ ನಿರ್ದೇಶಕರಾಗಿ ಮುಂದುವರೆಯಲು ಅರ್ಹರಾಗಿರುವುದಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ತೆಲಂಗಾಣ ಸಿಎಂ ರಾತ್ರೋರಾತ್ರಿ ನಿಲುವು ಬದಲು; ಅಕ್ಕಿ ನೀಡಲು ನಕಾರ

ಛತ್ತೀಸ್‌ಘಡದಲ್ಲಿ ಲಭ್ಯವಿದ್ದರೂ ಅಧಿಕ ಸಾಗಾಣೆ ವೆಚ್ಚದ್ದೇ ಸಮಸ್ಯೆ



ಬೆಂಗಳೂರು, ಜೂ.17 (ಕೆಎಂಶಿ) – ಅನ್ನಭಾಗ್ಯ ಯೋಜನೆಗೆ ಅಗತ್ಯವಿರುವ ಅಕ್ಕಿ ಪೂರೈಸಲು ಮುಂದಾಗಿದ್ದ ತೆಲಂಗಾಣ ಸರ್ಕಾರ, ರಾತ್ರೋರಾತ್ರಿ ತನ್ನ ನಿಲುವನ್ನು ಬದಲಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಅಲ್ಲಿನ ಮುಖ್ಯಮಂತ್ರಿ ಚಂದ್ರಶೇಖರರಾವ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಚರ್ಚೆ ನಡೆಸಿದ ಸಂದರ್ಭದಲ್ಲಿ ನಮ್ಮಿಂದ ಕರ್ನಾಟಕಕ್ಕೆ ಅಕ್ಕಿ ಪೂರೈಕೆ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಇದಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅನ್ನಭಾಗ್ಯ ಯೋಜನೆಗೆ ಛತ್ತೀಸ್‌ಘಡದಲ್ಲಿ 1.50 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಲಭ್ಯವಿದೆ. ಆದರೆ ಸಾರಿಗೆ ವೆಚ್ಚ ಹೆಚ್ಚಾಗಲಿದೆ ಇದರ ಬಗ್ಗೆ ತೀರ್ಮಾನ ಕೈಗೊಳ್ಳುತ್ತೇವೆ ಎಂದರು. ತೆಲಂಗಾಣದ ಮುಖ್ಯಮಂತ್ರಿಗಳೊಂದಿಗೆ ಖುದ್ದಾಗಿ ಮಾತನಾಡಿದ್ದು, ಅಲ್ಲಿ ಅಕ್ಕಿ ಲಭ್ಯವಿಲ್ಲ ಎಂದು ತಿಳಿಸಿದ್ದಾರೆ ಎಂದರು. ಆಂಧ್ರಪ್ರದೇಶದವರೊಂದಿಗೆ ನಮ್ಮ ಮುಖ್ಯ ಕಾರ್ಯದರ್ಶಿಗಳು ಮಾತನಾಡುತ್ತಿದ್ದಾರೆ ಎಂದು ತಿಳಿಸಿದರು.

ರಾಜ್ಯದಲ್ಲಿಯೇ ಅಕ್ಕಿ ಲಭ್ಯವಿದೆ. ಕಮಿಷನ್ ಆಮಿಷಕ್ಕೆ ಹೊರರಾಜ್ಯಗಳಿಂದ ಅಕ್ಕಿ ಖರೀದಿಸಲಾಗುತ್ತಿದೆ ಎಂದು ಬಿಜೆಪಿ ಶಾಸಕ ಬಿ.ವೈ.ವಿಜಯೇಂದ್ರ ಅವರು ಮಾಡಿರುವ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು ರಾಜ್ಯದಲ್ಲಿಯೇ ದೊರೆಯುವುದಾದರೆ ಕೊಡಿಸಲಿ ಎಂದರು.

ಮಣಿಪುರದಲ್ಲಿ ಮತ್ತೆ ಭುಗಿಲೆದ್ದ ಹಿಂಸಾಚಾರ
ಬಿಜೆಪಿ ನಾಯಕರ ಮನೆಗಳಿಗೆ ಬೆಂಕಿ ಹಚ್ಚಲು ಯತ್ನ; ಇಬ್ಬರಿಗೆ ಗಾಯ



ಇಂಫಾಲ,ಜೂ.17–ಮಣಿಪುರದ ಇಂಫಾಲದಲ್ಲಿ ಹಿಂಸಾಚಾರ ಮತ್ತೆ ಭುಗಿಲೆದ್ದಿದೆ. ಬಿಜೆಪಿ ನಾಯಕರ ಮನೆಗಳನ್ನು ಗುರಿಯಾಗಿಸಿಕೊಂಡ ಗುಂಪೊಂದು ಬೆಂಕಿ ಹಚ್ಚಲು ಯತ್ನ ನಡೆಸಿದೆ. ಈ ವೇಳೆ ಭದ್ರತಾ ಪಡೆ ಹಾಗೂ ಗುಂಪಿನ ನಡುವೆ ಘರ್ಷಣೆ ಏರ್ಪಟ್ಟಿದ್ದು, ಘಟನೆಯಲ್ಲಿ ಇಬ್ಬರಿಗೆ ಗಾಯಗಳಾಗಿವೆ ಎಂದು ತಿಳಿದು ಬಂದಿದೆ.

ಕ್ವಾಥಾ ಮತ್ತು ಕಾಂಗ್ವೈ ಪ್ರದೇಶಗಳಲ್ಲಿ ನಿನ್ನೆ ರಾತ್ರಿ ಸ್ವಯಂಚಾಲಿತ ಶಸ್ತ್ರಾಸ್ತ್ರಗಳಿಂದ ಗುಂಡು ಹಾರಿಸಲಾಗಿದ್ದು,ಇಂದು ಬೆಳಗಿನ ಜಾವದವರೆಗೂ ನಿರಂತರ ಗುಂಡಿನ ದಾಳಿಗಳು ನಡೆದಿವೆ ಎಂದು ವರದಿಗಳು ತಿಳಿಸಿವೆ.

ಸೇನೆ, ಅಸ್ಸಾಂ ರೈಫಲ್ಸ್, ರ್‍ಯಾಪಿಡ್ ಆಕ್ಷನ್ ಫೋರ್ಸ್ ಮತ್ತು ರಾಜ್ಯ ಪೊಲೀಸರ ಜಂಟಿ ಪಡೆಗಳು ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಮಧ್ಯರಾತ್ರಿಯವರೆಗೆ ಧ್ವಜ ಮೆರವಣಿಗೆಯನ್ನು ಕೈಗೊಂಡವು.

ಈ ನಡುವೆ ಅಡ್ವಾನ್ಸ್ ಆಸ್ಪತ್ರೆ ಬಳಿಯ ಅರಮನೆ ಕಾಂಪೌಂಡ್‌ನಲ್ಲಿ ಬೆಂಕಿ ಹಚ್ಚುವ ಯತ್ನ ನಡೆದಿದೆ. ಸುಮಾರು 1,000 ಜನರ ಗುಂಪು ನಿನ್ನೆ ಸಂಜೆ ಒಟ್ಟುಗೂಡಿದ್ದು, ಬೆಂಕಿ ಮತ್ತು ವಿಧ್ವಂಸಕ ಕೃತ್ಯಕ್ಕೆ ಪ್ರಯತ್ನ ನಡೆಸಿದೆ.

ಈ ವೇಳೆ ಗುಂಪನ್ನು ಚದುರಿಸಲು ಆರ್‌ಎಎಫ್ ಅಶ್ರುವಾಯು ಮತ್ತು ರಬ್ಬರ್ ಬುಲೆಟ್‌ಗಳನ್ನು ಹಾರಿಸಿದ್ದು, ಇದರಲ್ಲಿ ಇಬ್ಬರು ಗಾಯಗೊಂಡಿದ್ದಾರೆಂದು ತಿಳಿದು ಬಂದಿದೆ. ಇದರ ಜೊತೆಗೆ ಮಣಿಪುರ ವಿಶ್ವವಿದ್ಯಾನಿಲಯದ ಬಳಿಯೂ ಜನರು ಗುಂಪು ಸೇರಿದ್ದಾರೆ. ರಾತ್ರಿ 10.40ಕ್ಕೆ ತೊಂಗ್ಜು ಬಳಿ ಜಮಾಯಿಸಿದ 200ರಿಂದ 300 ಮಂದಿ, ಸ್ಥಳೀಯ ಶಾಸಕರ ನಿವಾಸವನ್ನು ಧ್ವಂಸಗೊಳಿಸಲು ಯತ್ನ ನಡೆಸಿದ್ದಾರೆ.

ಈ ವೇಳೆ ಆರ್‌ಎಎಫ್ ಗುಂಪನ್ನು ಚದುರಿಸಿತು. ಮಧ್ಯರಾತ್ರಿ ಇಂಫಾಲ್ ವೆಸ್ಟ್‌ನಲ್ಲಿರುವ ರಾಜ್ಯ ಬಿಜೆಪಿ ಅಧ್ಯಕ್ಷ ಅಧಿಕಾರಿ ಮಯುಮ್ ಶಾರದಾ ದೇವಿ ಅವರ ನಿವಾಸವನ್ನು ಧ್ವಂಸ ಮಾಡಲು ಗುಂಪು ಪ್ರಯತ್ನಿಸಿತು, ಆದರೆ, ಈ ಪ್ರಯತ್ನವನ್ನು ಸೇನೆ ಮತ್ತು ಆರ್‌ಎಎಫ್ ವಿಫಲಗೊಳ್ಳುವಂತೆ ಮಾಡಿದೆ. ಈ ನಡುವೆ ಉದ್ರಿಕ್ತ ಗುಂಪೊಂದು ಮಣಿಪುರದ ತೊಂಗ್ಜುನಲ್ಲಿರುವ ಬಿಜೆಪಿ ಕಚೇರಿಯನ್ನು ಧ್ವಂಸಗೊಳಿಸಿದೆ.

ಮೈಸೂರು ಕ್ಲಬ್ ಮೇಲೆ ಸಿಸಿಬಿ ದಾಳಿ: 50ಕ್ಕೂ ಅಧಿಕ ಮಂದಿ ಬಂಧನ; 1.50 ಲಕ್ಷ ವಶ

ಮೈಸೂರು, ಜೂ.17– ಅಶೋಕಪುರಂನಲ್ಲಿರುವ 'ಮೈಸೂರು ಕ್ಲಬ್' ಮೇಲೆ ಶನಿವಾರ ಮಧ್ಯಾಹ್ನ ದಾಳಿ ನಡೆಸಿದ ಸಿಸಿಬಿ ಪೊಲೀಸರು 50ಕ್ಕೂ ಹೆಚ್ಚು ಜೂಜುಕೋರರನ್ನು ಬಂಧಿಸಿ, ಪಣಕ್ಕಿಟ್ಟಿದ್ದ 1.50 ಲಕ್ಷ ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರು ಕ್ಲಬ್‌ನಲ್ಲಿ ಅನಧಿಕೃತವಾಗಿ ಜೂಜಾಟ ನಡೆಯುತ್ತಿದೆ ಎಂಬ ಮಾಹಿತಿ ಪಡೆದ ಸಿಸಿಬಿ ಎಸಿಪಿ ಸಂದೇಶ್‌ಕುಮಾರ್ ಸದರಿ ಕ್ಲಬ್‌ಗೆ ಪರವಾನಗಿ ಇದೆಯೇ ಎಂಬುದನ್ನು ಪರಿಶೀಲಿಸಿದಾಗ ಕ್ಲಬ್‌ನ ಪರವಾನಗಿ 3 ವರ್ಷದ ಹಿಂದೆಯೇ ಲ್ಯಾಪ್ಸ್ ಆಗಿದ್ದು, ಮತ್ತೆ ನವೀಕರಣವಾಗಿಲ್ಲ. ಈ ಕ್ಲಬ್‌ಗೆ ಕೇವಲ ಐವರು ಸದಸ್ಯರಿದ್ದಾರೆ ಎಂಬ ವಿವರಗಳು ಲಭ್ಯವಾಯಿತು ಎನ್ನಲಾಗಿದೆ.

ವಿಷಯ ತಿಳಿದ ತಕ್ಷಣ ಕಾರ್ಯ ಪ್ರವೃತ್ತರಾದ ಸಂದೇಶ್‌ಕುಮಾರ್, ಸಿಸಿಬಿ ಇನ್ಸ್‌ಪೆಕ್ಟರ್ ಮಲ್ಲೇಶ್, ಸಬ್‌ಇನ್ಸ್‌ಪೆಕ್ಟರ್ ಪ್ರತಿಭಾ, ಎಎಸ್‌ಐಗಳಾದ ಸತೀಶ್, ರಾಜು, ಸಿಬ್ಬಂದಿಗಳಾದ ಮಂಜುನಾಥ್, ಮಹೇಶ್, ಅರುಣ್‌ಕುಮಾರ್, ರಾಘವೇಂದ್ರ ಇನ್ನಿತರರೊಂದಿಗೆ ಕ್ಲಬ್ ಮೇಲೆ ದಾಳಿ ನಡೆಸಿದಾಗ 50ಕ್ಕೂ ಹೆಚ್ಚು ಮಂದಿ ಜೂಜಾಟದಲ್ಲಿ ತೊಡಗಿದ್ದುದು ಕಂಡು ಬಂದಿದೆ. ಅವರೆಲ್ಲರನ್ನೂ ಬಂಧಿಸಿ, ಸುಮಾರು 1.50 ಲಕ್ಷ ರೂ. ವಶಪಡಿಸಿಕೊಂಡು ಸಿಸಿಬಿ ವತಿಯಿಂದ ಅಶೋಕಪುರಂ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ವಿದ್ಯುತ್ ದರ ಏರಿಕೆ ವಿರುದ್ಧ ಮುಂದುವರಿದ ಪ್ರತಿಭಟನಾ ಅಭಿಯಾನ



ಮೈಸೂರು, ಜೂ.17(ಎಸ್‌ಪಿಎನ್)–ವಿದ್ಯುತ್ ದರವನ್ನು ಏಕಾಏಕಿ ಏರಿಕೆ ಮಾಡಿರುವ ಸೆಸ್ಕ್ ನಿರ್ಧಾರವನ್ನು ವಿರೋಧಿಸಿ, ಮೈಸೂರು ನಗರಪಾಲಿಕೆಯ ವಿವಿಧ ವಾರ್ಡ್‌ಗಳಲ್ಲಿ ಭಿತ್ತಿಫಲಕಗಳನ್ನು ಗ್ರಾಹಕರು ಮನೆ ಮನೆಗಳಲ್ಲಿ ಪ್ರದರ್ಶಿಸುವ ಪ್ರತಿಭಟನಾ ಅಭಿಯಾನ 2ನೇ ದಿನವೂ (ಶನಿವಾರ) ಮುಂದುವರೆಯಿತು.

'ವಿದ್ಯುತ್ ದರ ಇಳಿಸಿ ಜನರನ್ನು ಉಳಿಸಿ', 'ಗ್ಯಾರಂಟಿ ನಿಶ್ಚಿತ, ಕರೆಂಟ್ ಶಾಕ್ ಉಚಿತ', 'ಸೆಸ್ಕ್ ಅಧಿಕಾರಿಗಳ ಚೆಲ್ಲಾಟ, ಗ್ರಾಹಕರಿಗೆ ಪರದಾಟ' ಎಂಬ ಘೋಷಣೆಗಳುಳ್ಳ ಫಲಕಗಳನ್ನು ಮೈಸೂರು ನಗರಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.43,45,47,48ರಲ್ಲಿ ಪ್ರದರ್ಶಿಸಿದರು. ನಂತರ ಸಿದ್ಧಾರ್ಥ ಬಡಾವಣೆಯಲ್ಲಿರುವ ನೂತನ ಡಿಸಿ ಕಚೇರಿ ಬಳಿ ವಿದ್ಯುತ್ ದರ ಹೆಚ್ಚಳ ವಿರೋಧಿಸಿ ಗ್ರಾಹಕರು ಭಿತ್ತಿಫಲಕ ಪ್ರದರ್ಶಿಸಿ ತಮ್ಮ ಆಕ್ರೋಶ ಹಾಕಿದರು.

ಸೆಸ್ಕ್ ಅಧಿಕಾರಿಗಳು ವಿದ್ಯುತ್ ದರವನ್ನು ಏಕಾಏಕಿ ಶೇ.50ರಷ್ಟು ಹೆಚ್ಚಿಸಿ, ಗ್ರಾಹಕರ ಜೇಬಿಗೆ ಸದ್ದಿಲ್ಲದೆ ಕೈ ಹಾಕಿದ್ದಾರೆ. ಸೆಸ್ಕಾ ನಿರ್ಧಾರದಿಂದ ಬಡ, ಮಧ್ಯಮ ಹಾಗೂ ಇತರೆ ವರ್ಗಗಳ ಬದುಕಿಗೆ ಪೆಟ್ಟು ಬೀಳಲಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಸೆಸ್ಕ್ ಅಧಿಕಾರಿಗಳು ವಿದ್ಯುತ್ ದರ ಏರಿಕೆ ನಿರ್ಧಾರವನ್ನು ಮರು ಪರಿಶೀಲನೆ ಮಾಡುವಂತೆ ಮನವಿ ಮಾಡಿದ್ದು, ಈ ನಿರ್ಧಾರ ಮರು ಪರಿಶೀಲನೆ ಆಗುವವರೆಗೂ ವಾರ್ಡ್ ಮಟ್ಟದಲ್ಲಿ ಫಲಕ ಪ್ರದರ್ಶನ ಅಭಿಯಾನ ನಿರಂತರವಾಗಿ ಮುಂದುವರೆಯಲಿದ್ದು, ಈ ಕೂಡಲೇ ರಾಜ್ಯ ಸರ್ಕಾರ ಎಚ್ಚೆತ್ತು ಜನಸಾಮಾನ್ಯರ ಬೇಡಿಕೆಗೆ ಸ್ಪಂದಿಸುವಂತೆ ಮನವಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಗ್ರಾಹಕರಾದ ಜೆ.ಎಸ್.ಜಗದೀಶ್, ಶೇಖರ್, ಸುಧಾ, ವಿದ್ಯಾ, ಲಕ್ಷ್ಮಿ, ಕುಂದನ್, ವಿಜಯಕುಮಾರ್, ಶಶಿಧರ್, ಎಂ.ಎಸ್.ಸತ್ಯಾನಂದ ವಿಟ್ಟು, ಭಾಗ್ಯಶ್ರೀ ಭಟ್ ಸೇರಿದಂತೆ ಅನೇಕರು ಹಾಜರಿದ್ದರು.

ನೋಟಿನ ಕಂತೆಯಲ್ಲಿ ಬಿಳಿ ಹಾಳೆ ಸೇರಿಸಿದ ಪ್ರಕರಣ; ಠಾಣೆ ಡೈರಿಯಲ್ಲಿ ನಮೂದು

ಪಾರ್ಟಿಗಳು ರಾಜೀ ಮಾಡಿಕೊಳ್ಳುವ ನಿರ್ಧಾರ

ಮಂಡ್ಯ,ಜೂ.17–ಜಮೀನು ಖರೀದಿಸಿ ಹಣ ನೀಡುವಾಗ ಅಸಲಿ ನೋಟುಗಳ ಮಧ್ಯೆ ಬಿಳಿ ಹಾಳೆಗಳನ್ನಿಟ್ಟು ರೈತನಿಗೆ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ಯಾವುದೇ ರೀತಿಯ ಕೇಸ್ ದಾಖಲಾಗಿಲ್ಲ ಎಂದು ಮಂಡ್ಯ ಜಿಲ್ಲಾ ಎಸ್ಪಿ ಯತೀಶ್ ಸ್ಪಷ್ಟಪಡಿಸಿದ್ದಾರೆ.

ಮಂಡ್ಯ ತಾಲೂಕು ಕಾಳೇನಹಳ್ಳಿ ಗ್ರಾಮದ ಉಮೇಶ್ ಎಂಬುವರು ಸಯ್ಯದ್ ಅಮೀನ್ ಎಂಬುವರಿಗೆ ತಮ್ಮ ಜಮೀನನ್ನು ಮಾರಾಟ ಮಾಡಿದ್ದರು. ಇದಕ್ಕೆ ಸಂಬಂಧಪಟ್ಟ ಹಣ ನೀಡುವಾಗ ಅಸಲಿ ನೋಟುಗಳ ಬಗ್ಗೆ ಬಿಳಿ ಹಾಳೆಗಳನ್ನಿಟ್ಟು ಉಮೇಶ್ ಅವರಿಗೆ ಸಯ್ಯದ್ ಅಮೀರ್ ನೀಡಿದ್ದರು. ಸ್ಥಳದಲ್ಲೇ ಹಣ ಎಣಿಸಲು ಮುಂದಾದಾಗ ಇದು ಬಯಲಾಗಿತ್ತು. ಇದನ್ನು ಕಂಡ ಜನರು ಸಯ್ಯದ್ ಅಮೀನ್ ಮೇಲೆ ಹರಿ ಹಾಯ್ದರು. ಅಲ್ಲದೆ ಮಂಡ್ಯ ಪಶ್ಚಿಮ ಠಾಣೆ ಪೊಲೀಸರ ವಶಕ್ಕೆ ಆತನನ್ನು ಒಪ್ಪಿಸಿದ್ದರು.

ಆದರೆ ಈ ಸಂಬಂಧ ಉಮೇಶ್ ಪೊಲೀಸ್ ಠಾಣೆಗೆ ದೂರು ಸಲ್ಲಿಸಲು ನಿರಾಕರಿಸಿ ತಾವಿಬ್ಬರೂ ರಾಜೀ ಮಾಡಿಕೊಳ್ಳುವುದಾಗಿ ತಿಳಿಸಿದ ಹಿನ್ನೆಲೆಯಲ್ಲಿ ಪೊಲೀಸರು ಯಾವುದೇ ರೀತಿಯ ಕೇಸ್ ದಾಖಲಿಸಿಕೊಂಡಿಲ್ಲ. ಆದರೆ ಈ ಪ್ರಕರಣದ ಬಗ್ಗೆ ಠಾಣೆಯ ದೈನಂದಿನ ಡೈರಿಯಲ್ಲಿ ನಮೂದಿಸಲಾಗಿದೆ ಎಂದು ಎಸ್.ಪಿ.ಯತೀಶ್ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದರು.

ವಿಜಯನಗರದಲ್ಲಿ ಯುವಕನ ಬರ್ಬರ ಹತ್ಯೆ ಪ್ರಕರಣ
ಮೂವರು ಆರೋಪಿಗಳ ಸೆರೆ: 2 ದಿನ ಪೊಲೀಸ್ ವಶಕ್ಕೆ

ಮೈಸೂರು,ಜೂ.17(ಆರ್‌ಕೆ)–ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ಯುವಕನನ್ನು ಹತ್ಯೆಗೈದು ತಲೆಮರೆಸಿಕೊಂಡಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರು ತಾಲೂಕು ಬೆಳವಾಡಿ ಗ್ರಾಮದ ಸಾಗರ್, ಮಂಜು ಹಾಗೂ ಪ್ರತಾಪ್ ಬಂಧಿತ ಕೊಲೆ ಆರೋಪಿಗಳು. ಶುಕ್ರವಾರ ರಾತ್ರಿ ಹಾಸನ ಜಿಲ್ಲೆ ಚೆನ್ನರಾಯಪಟ್ಟಣದ ಗ್ರಾಮವೊಂದರ ರೇಷ್ಮೆ ಸಾಕಾಣಿಕಾ ಶೆಡ್‌ವೊಂದರಲ್ಲಿ ಅಡಗಿದ್ದ ಈ ಮೂವರು ಕೊಲೆ ಆರೋಪಿಗಳನ್ನು, ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ರವಿಶಂಕರ್ ಮತ್ತು ಸಿಬ್ಬಂದಿ ಪತ್ತೆ ಮಾಡಿ, ಬಂಧಿಸಿದ್ದಾರೆ.

ಪ್ರಾಥಮಿಕ ವಿಚಾರಣೆ ನಡೆಸಿದ ಬಳಿಕ ಶನಿವಾರ ಬೆಳಗ್ಗೆ ಆರೋಪಿಗಳನ್ನು ಮೈಸೂರಿನ ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ 2 ದಿನಗಳವರೆಗೆ ಪೊಲೀಸ್ ವಶಕ್ಕೆ ಪಡೆಯಲಾಗಿದೆ. ಸ್ಥಳ ಮಹಜರು ನಡೆಸಿ ಅಗತ್ಯ ಮಾಹಿತಿ ಕಲೆ ಹಾಕಿದ ಬಳಿಕ ಮಂಗಳವಾರ ಬೆಳಗ್ಗೆ ಆರೋಪಿಗಳನ್ನು ಮತ್ತೆ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇವೆ ಎಂದು ಇನ್ಸ್‌ಪೆಕ್ಟರ್ ರವಿಶಂಕರ್ ತಿಳಿಸಿದ್ದಾರೆ.

ಶುಕ್ರವಾರ ರಾತ್ರಿ ಸುಮಾರು 7.30 ಗಂಟೆಯಲ್ಲಿ ಬೆಳವಾಡಿ ಹೇಮಂತ ಅಲಿಯಾಸ್ ಸ್ವಾಮಿ, ಆತನ ಸಹೋದರಿಯನ್ನು ಪ್ರೀತಿಸುವುದಕ್ಕೆ ಅಡ್ಡಿಯಾದ ಕಾರಣಕ್ಕಾಗಿ ಸ್ಕೂಟರ್‌ನಲ್ಲಿ ಬಂದು ಚಾಕುವಿನಿಂದ ಇರಿದು, ಮಚ್ಚಿನಿಂದ ಹಲ್ಲೆ ನಡೆಸಿದ್ದಲ್ಲದೆ, ಸಿಮೆಂಟ್ ಇಟ್ಟಿಗೆಯಿಂದ ತಲೆ ಜಜ್ಜಿ ಬರ್ಬರವಾಗಿ ಹತ್ಯೆ ಮಾಡಿ ಪರಾರಿಯಾಗಿದ್ದರು. ಸ್ಥಳಕ್ಕೆ ಧಾವಿಸಿದ ವಿಜಯನಗರ ಠಾಣೆ ಪೊಲೀಸರು, ಮಹಜರು ನಡೆಸಿ ಸ್ಥಳದಲ್ಲಿ ದೊರೆತ ಮಾರಕಾಸ್ತ್ರ ಹಾಗೂ ಹೇಮಂತನ ಹೀರೋ ಹೊಂಡಾ ಸ್ಪ್ಲೆಂಡರ್ ಬೈಕ್ ಅನ್ನು ವಶಪಡಿಸಿಕೊಂಡು ಪರಾರಿಯಾಗಿದ್ದ ಬೆಳವಾಡಿ ಸಾಗರ್, ಮಂಜು ಮತ್ತು ಪ್ರತಾಪ್ ಪತ್ತೆಗೆ ಶೋಧ ಕಾರ್ಯಾಚರಣೆ ಆರಂಭಿಸಿದ್ದರು. ಕೊಲೆಯಾದ ಹೇಮಂತ ಹಾಗೂ ಹತ್ಯೆಗೈದ ಮೂವರು ಯುವಕರೂ ಸಂಬಂಧಿಗಳೇ ಆಗಿದ್ದು, ಒಂದೇ ಊರಿನವರು. ಪೇಂಟಿಂಗ್ ಕೆಲಸ ಮಾಡುತ್ತಿದ್ದ ಎಲ್ಲರೂ ನಿತ್ಯ ಸಂಪರ್ಕದಲ್ಲಿದ್ದರು. ಇಂಜಿನಿಯರಿಂಗ್ ಓದುತ್ತಿದ್ದ ಹೇಮಂತ್ ಸಹೋದರಿ ಪ್ರೀತಿಸುವ ವಿಷಯದಿಂದ ಈ ಕೃತ್ಯ ನಡೆದಿತ್ತು ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರವೇ ಸ್ವಾಭಿಮಾನಿ ಸೇನೆಗೆ ಲಿಂಗರಾಜು ಮೈಸೂರು ಜಿಲ್ಲಾಧ್ಯಕ್ಷ



ಮೈಸೂರು, ಜೂ.17– ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ಜಿಲ್ಲಾಧ್ಯಕ್ಷರಾಗಿ ಲಿಂಗರಾಜು ನೇಮಕಗೊಂಡಿದ್ದಾರೆ. ಇತ್ತೀಚೆಗೆ ನೂತನ ಪದಾಧಿಕಾರಿಗಳ ನೇಮಕ ಸಂಬಂಧ ರಾಜ್ಯಾಧ್ಯಕ್ಷ ನಿಂಗರಾಜುಗೌಡ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೈಸೂರು ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಲಿಂಗರಾಜು ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಶುದ್ಧ ಕುಡಿಯುವ ನೀರಿನ ಘಟಕದ ಸುತ್ತ ಅಶುದ್ಧ ಪರಿಸ್ಥಿತಿ





ಮೈಸೂರು, ಜೂ.17(ಎಂಕೆ)– ಮೈಸೂರಿನ ಕೇಂದ್ರ ಭಾಗದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕವೊಂದು ಕೊಚ್ಚೆಗುಂಡಿಯಂತಾಗಿದೆ...!

ಮೈಸೂರು ನಗರಪಾಲಿಕೆ ಮುಖ್ಯ ಕಚೇರಿ ಹಿಂಭಾಗ, ವಾರ್ಡ್ ನಂ.51ರ ವ್ಯಾಪ್ತಿಯ ಕೆಂಪನಂಜಾಂಬ ಅಗ್ರಹಾರದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕವು ಗುಟ್ಕಾ ಜಗಿದು ಉಗಿಯುವವರ, ಧೂಮಪಾನಿಗಳ ಸ್ಥಳವಾಗಿ ಮಾರ್ಪಟ್ಟಿದೆ.

ಶುದ್ಧ ಕುಡಿಯುವ ನೀರಿನ ಘಟಕದ ಸುತ್ತಲೂ ಅನೈರ್ಮಲ್ಯ ತಾಂಡವವಾಡುತ್ತಿದ್ದು, ಮದ್ಯದ ಬಾಟಲ್‌ಗಳು, ವಾಟರ್ ಬಾಟಲ್‌ಗಳು, ಬೀಡಿ–ಸಿಗರೇಟ್ ಚೂರುಗಳು, ಕಾಫಿ–ಟೀ ಕಪ್‌ಗಳಿಂದ ಆವೃತ್ತವಾಗಿದೆ. ಅಷ್ಟೇ ಅಲ್ಲದೆ ಕಸ ಬಿಸಾಡುವವರ ಜಾಗವೂ ಆಗಿದೆ.

ಸ್ಥಳೀಯ ನಿವಾಸಿಗಳ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ 2019–20ನೇ ಸಾಲಿನ 14ನೇ ಹಣಕಾಸು ಯೋಜನೆಯಲ್ಲಿ ಲಕ್ಷಾಂತರ ರೂ. ಖರ್ಚು ಮಾಡಿ ನಿರ್ಮಿಸಿರುವ ಈ ಶುದ್ಧ ನೀರಿನ ಘಟಕ ಹಾಳಾಗುತ್ತಿದೆ. ಘಟಕದ ಎದುರು, ಅಕ್ಕ–ಪಕ್ಕದಲ್ಲಿರುವ ಬಾರ್, ಟೀ ಅಂಗಡಿಗಳಿಂದ ಬೀಡಿ, ಸಿಗರೇಟ್, ಮದ್ಯ ಖರೀದಿಸಿ ಇಲ್ಲಿಗೆ ಬರುವ ಹಲವರು ನೀರಿನ ಘಟಕದಲ್ಲಿ ವಾಟರ್ ಕ್ಯಾನ್‌ಗಳನ್ನು ಇಟ್ಟುಕೊಳ್ಳಲು ಮಾಡಿರುವ ಜಾಗದಲ್ಲಿ ಕುಳಿತು ಸೇವನೆ ಮಾಡುತ್ತಾರೆ. ಕಡೆಗೆ ಉಳಿದ ತ್ಯಾಜ್ಯಗಳನ್ನು ಅಲ್ಲೇ ಬಿಸಾಡುತ್ತಿದ್ದಾರೆ.

ಇರಿಸು–ಮುರಿಸು: ಸ್ಥಳೀಯ ನಿವಾಸಿಗಳು, ಮಹಿಳೆಯರು ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಬರಲು ಹಿಂದೇಟು ಹಾಕುವಂತಾಗಿದೆ ಮಹಿಳೆಯರು ಮೂಗು–ಬಾಯಿ ಮುಚ್ಚಿಕೊಂಡು ನೀರನ್ನು ತುಂಬಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗೆಯೇ ಘಟಕದ ಸುತ್ತಲೂ ದ್ವಿಚಕ್ರ ವಾಹನಗಳು, ಆಟೋಗಳನ್ನು ಪಾರ್ಕಿಂಗ್ ಮಾಡುತ್ತಿದ್ದು, ನೀರಿಗಾಗಿ ಬರುವವರು ನಿಲ್ಲುವುದಕ್ಕೂ ಪರದಾಡುವಂತಾಗಿದೆ.

ಗಲಾಟೆಗಳು ನಡೆಯುತ್ತವೆ: ಶುದ್ಧ ನೀರಿನ ಘಟಕದ ಎದುರು ಪ್ರತಿನಿತ್ಯ ಗಲಾಟೆಗಳು ನಡೆಯುತ್ತವೆ. ಸಂಜೆ ವೇಳೆ ಇಲ್ಲಿ ವ್ಯಾಪಾರ ನಡೆಸುವವರು ಘಟಕದ ಸಮೀಪದ ಮಳಿಗೆಯೊಂದರಲ್ಲಿ ಕೆಲಸ ಮಾಡುವ ಮಹಿಳೆಯೊಬ್ಬರು 'ಮೈಸೂರು ಮಿತ್ರ'ನ ಜೊತೆ ಮಾತನಾಡಿ ಆತಂಕ ವ್ಯಕ್ತಪಡಿಸಿದರು.

ಎಷ್ಟೇ ಹೇಳಿದರೂ ಕೇಳುವುದಿಲ್ಲ: ನೀರಿನ ಘಟಕದ ಬಳಿ ಕುಳಿತುಕೊಳ್ಳಬೇಡಿ ಎಂದು ಎಷ್ಟೇ ಹೇಳಿದರೂ ಕೇಳುವುದಿಲ್ಲ. ನಮ್ಮ ಮೇಲೆಯೇ ಜೋರು ಮಾಡುತ್ತಾರೆ. ಇಲ್ಲಿಯೇ ಕುಡಿದು ಬಿದ್ದು ಒದ್ದಾಡುತ್ತಾರೆ. ನಾವೇನು ಮಾಡೋಣ ಸಾರ್. ಬೇಕಿದ್ದರೆ ಸಿಸಿ ಕ್ಯಾಮರಾ ಅಳವಡಿಸಿದ್ದೇವೆ ನೋಡಿ ಎಂದು ಘಟಕದ ಎದುರಿನ ಬಾರ್‌ನಲ್ಲಿದ್ದವರೊಬ್ಬರು ತಿಳಿಸಿದರು.

ಕೆ.ಆರ್.ಪೇಟೆ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಮೀಸಲು ಪ್ರಕಟ



ಕೆಆರ್.ಪೇಟೆ, ಜೂ.17– ಪಟ್ಟಣದ ಬಸವೇಶ್ವರ ಚಿತ್ರಮಂದಿರದಲ್ಲಿ ಶನಿವಾರ ಮಧ್ಯಾಹ್ನ ತಾಲೂಕಿನ 34 ಗ್ರಾಪಂಗಳ 2ನೇ ಅವಧಿಯ ಬಾಕಿ 30 ತಿಂಗಳ ಅಧಿಕಾರವಧಿಗಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳ ಮೀಸಲು ಪ್ರಕ್ರಿಯೆ ಯಶಸ್ವಿಯಾಗಿ ನಡೆಯಿತು.

ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು, ಪಾಂಡವಪುರ ಉಪವಿಭಾಗಾಧಿಕಾರಿ ನಂದೀಶ್, ತಹಸೀಲ್ದಾರ್ ನಿಸರ್ಗ ಪ್ರಿಯ, ತಾಪಂ ಇಓ ಸತೀಶ್, ಚುನಾವಣಾ ಶಿರಸ್ತೇದಾರ್ ಹರೀಶ್ ನೇತೃತ್ವದಲ್ಲಿ ಮೀಸಲಾತಿ ನಿಗದಿ ಕಾರ್ಯಕ್ರಮದಲ್ಲಿ ತಾಲೂಕಿನ 34 ಗ್ರಾಪಂಗಳ ಪೈಕಿ ಶೇ.50ರಷ್ಟು ಮಹಿಳೆಯರಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನ ಮೀಸಲಿರಿಸಿ, ಗ್ರಾಪಂ ಸದಸ್ಯರ ಸಮಕ್ಷಮದಲ್ಲಿ ಮೀಸಲಾತಿ ನಿಗದಿ ಪಡಿಸಲಾಯಿತು.

ರಾಜ್ಯ ಚುನಾವಣಾ ಆಯೋಗ ಅಭಿವೃದ್ಧಿ ಪಡಿಸಿರುವ ಜಿಪಿಪಿವಿಪಿ ಅಪ್ಲಿಕೇಷನ್ ತಂತ್ರಾಂಶದಲ್ಲಿ ಜಿಪಂ ರಾಷ್ಟ್ರೀಯ ಮಾಹಿತಿ ಕೇಂದ್ರ ಮೂಲಕ 1993ರ ರಿಂದ 2020ರವರೆಗಿನ 9 ಅವಧಿಗಳಲ್ಲಿ ನಿಗದಿಪಡಿರುವ ಮೀಸಲು ವಿವರಗಳನ್ನು ಅಪ್‌ಲೋಡ್ ಮಾಡಿ ರೋಸ್ಟರ್ ಪದ್ಧತಿ ಅಡಿ ಮೀಸಲಾತಿ ಪ್ರಕಟಿಸಲಾಯಿತು.

ಮೀಸಲಾತಿ ಪ್ರಕ್ರಿಯೆಯಲ್ಲಿ ಹೆಚ್ಚಿನ ಗ್ರಾಪಂ ನಿಗದಿಯಾಗದ ಹಿನ್ನೆಲೆಯಲ್ಲಿ ಅಂತಹ ಗ್ರಾಪಂಗಳ ಮೀಸಲಾತಿಯನ್ನು ಲಾಟರಿ ಮೂಲಕ ಆಯ್ಕೆ ಮಾಡಲಾಯಿತು. ಲಾಟರಿ ಮೂಲಕ ಆಯ್ಕೆ ಮಾಡಲು ಗ್ರಾಪಂ ಸದಸ್ಯರನ್ನು ಕರೆದು ಅವರ ಸಮಕ್ಷಮ ಚೀಟಿ ಬರೆದು ಖಾಲಿ ಬಾಕ್ಸ್‌ಗೆ ಹಾಕಿ ಸದಸ್ಯರಿಂದ ಚೀಟಿ ತೆಗೆಸುವ ಮೂಲಕ ಮೀಸಲಾತಿ ನಿಗದಿಪಡಿಸಲಾಯಿತು.

ಈ ವೇಳೆ ಉಪ ತಹಸೀಲ್ದಾರ್ ಲಕ್ಷ್ಮಿಕಾಂತ್, ಚುನಾವಣಾ ಶಿರಸ್ತೇದಾರ್ ಹರೀಶ್, ರಾಜಸ್ವ ನಿರೀಕ್ಷಕಿ ಚಂದ್ರಕಲಾ ಪ್ರಕಾಶ್, ಹರೀಶ್, ಡಾ.ನರಸಿಂಹರಾಜು ಸೇರಿದಂತೆ ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಗ್ರಾಪಂ ಸದಸ್ಯರು, ಪಿಡಿಓಗಳು, ಕಾರ್ಯದರ್ಶಿಗಳು ಹಾಜರಿದ್ದರು.

ಗ್ರಾಮ ಪಂಚಾಯಿತಿ ಮೀಸಲಾತಿ ವಿವರ

ಅಗ್ರಹಾರಬಾಚಹಳ್ಳಿ ಅಧ್ಯಕ್ಷ(ಸಾಮಾನ್ಯ), ಉಪಾಧ್ಯಕ್ಷ (ಎಸ್‌ಸಿ ಮಹಿಳೆ), ಅಘಲಯ ಅಧ್ಯಕ್ಷ (ಎಸ್‌ಸಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಅಕ್ಕಿಹೆಬ್ಬಾಳು ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಆಲಂಬಾಡಿಕಾವಲು ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಆನೆಗೊಳ ಅಧ್ಯಕ್ಷ (ಬಿಸಿಎಂ ಎ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಬಳ್ಳೇಕೆರೆ ಅಧ್ಯಕ್ಷ (ಬಿಸಿಎಂ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಬಲ್ಲೇನಹಳ್ಳಿ ಅಧ್ಯಕ್ಷ (ಬಿಸಿಎಂ ಎ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಬಂಡಿಹೊಳೆ ಅಧ್ಯಕ್ಷ (ಪ್ರವರ್ಗ–ಎ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಭಾರತೀಪುರ ಕ್ರಾಸ್ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ(ಸಾಮಾನ್ಯ ಮಹಿಳೆ), ಬೀರುವಳ್ಳಿ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಬಿಸಿಎಂಎ), ಬೂಕನಕೆರೆ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಚೌಡೇನಹಳ್ಳಿ ಅಧ್ಯಕ್ಷ (ಪ್ರವರ್ಗ–ಎ ಮಹಿಳೆ), ಉಪಾಧ್ಯಕ್ಷ (ಬಿಸಿಎಂ–ಬಿ), ದಬ್ಬೇಘಟ್ಟ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಬಿಸಿಎಂ ಮಹಿಳೆ), ಗಂಜಿಗೆರೆ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಪ್ರವರ್ಗ–ಎ ಮಹಿಳೆ), ಹರಳಹಳ್ಳಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್‌ಸಿ ಮಹಿಳೆ), ಹರಿಹರಪುರ ಅಧ್ಯಕ್ಷ(ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಬಿಸಿಎಂಎ), ಹಿರೀಕಳಲೆ ಅಧ್ಯಕ್ಷ (ಪ್ರವರ್ಗ–ಎ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಐಚನಹಳ್ಳಿ ಅಧ್ಯಕ್ಷ (ಎಸ್‌ಸಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಐಕನಹಳ್ಳಿ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಕಿಕ್ಕೇರಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಬಿಸಿಎಂ ಮಹಿಳೆ), ಲಕ್ಷ್ಮಿಪುರ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಪಜಾ), ಮಾಕವಳ್ಳಿ ಅಧ್ಯಕ್ಷ (ಎಸ್‌ಸಿ), ಉಪಾಧ್ಯಕ್ಷ(ಸಾಮಾನ್ಯ ಮಹಿಳೆ), ಮಾದಾಪುರ ಅಧ್ಯಕ್ಷ(ಸಾಮಾನ್ಯ), ಉಪಾಧ್ಯಕ್ಷ(ಬಿಎಂ ಮಹಿಳೆ), ಮಡುವಿನಕೋಡಿ ಅಧ್ಯಕ್ಷ (ಎಸ್‌ಟಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಮಂದಗೆರೆ ಅಧ್ಯಕ್ಷ (ಬಿಸಿಎಂಎ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಮುರುಕನಹಳ್ಳಿ ಅಧ್ಯಕ್ಷ (ಬಿಸಿಎಂ ಬಿ), ಉಪಾಧ್ಯಕ್ಷ (ಬಿಸಿಎಂ ಎ), ರಂಗನಾಥಪುರ ಕ್ರಾಸ್ ಅಧ್ಯಕ್ಷ (ಪಜಾ ಮಹಿಳೆ), ಉಪಾಧ್ಯಕ್ಷ (ಬಿಸಿಎಂ ಬಿ ಮಹಿಳೆ), ಸಂತೇಬಾಚಹಳ್ಳಿ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ(ಎಸ್‌ಟಿ ಮಹಿಳೆ), ಸಾರಂಗಿ ಅಧ್ಯಕ್ಷ(ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಶೀಳನೆರೆ ಅಧ್ಯಕ್ಷ (ಎಸ್‌ಸಿ), ಉಪಾಧ್ಯಕ್ಷ (ಬಿಸಿಎಂ ಎ ಮಹಿಳೆ), ಸಿಂಧುಘಟ್ಟ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ(ಸಾಮಾನ್ಯ), ಸೋಮನಹಳ್ಳಿ ಅಧ್ಯಕ್ಷ (ಬಿಸಿಎಂ ಬಿ ಮಹಿಳೆ), ಉಪಾಧ್ಯಕ್ಷ (ಬಿಸಿಎಂ ಎ), ತೆಂಡೇಕೆರೆ ಅಧ್ಯಕ್ಷ (ಬಿಸಿಎಂ ಎ), ಉಪಾಧ್ಯಕ್ಷ (ಎಸ್‌ಸಿ ಮಹಿಳೆ), ವಿಠಲಾಪುರ ಅಧ್ಯಕ್ಷ (ಬಿಸಿಎಂ ಎ), ಉಪಾಧ್ಯಕ್ಷ (ಎಸ್‌ಸಿ) ವರ್ಗಗಳಿಗೆ ಮೀಸಲಾತಿ ನಿಗದಿಪಡಿಸಲಾಯಿತು.

2.9 ಕೋಟಿ ಮೌಲ್ಯದ ಅಕ್ರಮ ಮದ್ಯ ವಶ



ಮಂಡ್ಯ, ಜೂ.17– ಕಳೆದ 3 ತಿಂಗಳಲ್ಲಿ ಜಿಲ್ಲೆಯಲ್ಲಿ ಒಟ್ಟು 2,09,68,042 ರೂ. ಮೌಲ್ಯದ ಅಕ್ರಮ ಮದ್ಯ ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಅಬಕಾರಿ ಉಪ ಆಯುಕ್ತೆ ಡಾ.ಮಹಾದೇವಿಬಾಯಿ ತಿಳಿಸಿದರು.

ಶನಿವಾರ ಜಿಲ್ಲಾ ಅಬಕಾರಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಏಪ್ರಿಲ್‌ನಿಂದ ಜೂ.16ರ ವರೆಗೆ ನಡೆದ ದಾಳಿಯಲ್ಲಿ ಒಟ್ಟು 14,420.895 ಲೀ. ಮದ್ಯ ಹಾಗೂ 85,445.585 ಲೀ. ಬಿಯರ್, 0.50 ಗ್ರಾಂ ಗಾಂಜಾ, 12 ಗ್ರಾಂ ಗಾಂಜಾ ಗಿಡಗಳನ್ನು ವಶಕ್ಕೆ ಪಡೆದು ಈ ಸಂಬಂಧ 1330 ಪ್ರಕರಣ ದಾಖಲಿಸಲಾಗಿದೆ. ಈ ಪೈಕಿ 168 ಗಂಭೀರ ಪ್ರಕರಣದಲ್ಲಿ ಹಲವರನ್ನು ಬಂಧಿಸಿದ್ದು, 1060 ಪ್ರಕರಣದಲ್ಲಿ ವೈನ್‌ಸ್ಟೋರ್‌ಗಳ ಮೇಲೆ ಪ್ರಕರಣ ದಾಖಲಿಸಲಾಗಿದೆ. ಜೊತೆಗೆ 100 ಸನ್ನದು ಷರತ್ತು ಉಲ್ಲಂಘನೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಗಾಂಜಾ ಪ್ರಕರಣದಲ್ಲಿ 2 ಕೇಸು ದಾಖಲಿಸಿದ್ದು, ಒಟ್ಟು ಕಳೆದ ಮೂರು ತಿಂಗಳ ಅವಧಿಯಲ್ಲಿ 1330 ಮಂದಿಯನ್ನು ಬಂಧಿಸಲಾಗಿದೆ. ಈ ಪೈಕಿ ಮದ್ಯ ಸಾಗಾಣಿಕೆಗೆ ಬಳಸಿದ್ದ 129 ವಾಹನಗಳನ್ನು ವಶಕ್ಕೆ ಪಡೆದಿದ್ದು, ಇದರ ಮೌಲ್ಯ 66,23,500 ರೂ. ಎಂದು ವಿವರಿಸಿದರು.

ಕಳೆದ ವರ್ಷಕ್ಕೆ ಹೋಲಿಸಿದರೆ ಜಿಲ್ಲೆಯಲ್ಲಿ ಈ ವರ್ಷ ಮದ್ಯ ಮಾರಾಟ ಹೆಚ್ಚಳವಾಗಿದೆ. ಕಳೆದ ವರ್ಷ ಏಪ್ರಿಲ್, ಮೇ, ಜೂ.15ರವರೆಗೆ 4,01,899 ಕೇಸ್ ಮದ್ಯ ಮಾರಾಟವಾಗಿದ್ದರೆ, ಈ ವರ್ಷ 4,30,266 ಕೇಸ್ ಮದ್ಯ ಮಾರಾಟವಾಗಿವೆ. ಕಳೆದ ಬಾರಿಗಿಂತ ಈ ಬಾರಿ 28367 ಕೇಸುಗಳು ಹೆಚ್ಚಾಗಿ ಮಾರಾಟವಾಗಿವೆ ಎಂದರು.

ಬಿಯರ್ ಸಹ ಕಳೆದ ವರ್ಷ 2,12,534 ಕೇಸುಗಳು ಮಾರಾಟವಾಗಿದ್ದರೆ, ಈ ವರ್ಷದ ಏಪ್ರಿಲ್, ಮೇ, ಜೂನ್ ಅರ್ಧ ಅವಧಿಗೆ 2,48,516 ಕೇಸುಗಳು ಮಾರಾಟವಾಗಿವೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ 35982 ಕೇಸುಗಳು ಹೆಚ್ಚು ಮಾರಾಟವಾಗಿವೆ ಎಂದರು.

ಗೂಡ್ಸ್ ಆಟೋ ಡಿಕ್ಕಿ: ಪಾದಚಾರಿ ಸಾವು



ಹಲಗೂರು, ಜೂ.17– ಗೂಡ್ಸ್ ಆಟೋ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ದಳವಾಯಿ ಕೋಡಿಹಳ್ಳಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದೆ.

ಗ್ರಾಮದ ನಿವಾಸಿ ಮರಿಲಿಂಗಯ್ಯ(65) ಸಾವನ್ನಪ್ಪಿದವರು. ಹಲಗೂರಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ. ಶುಕ್ರವಾರ ರಾತ್ರಿ ಹಲಗೂರಿನಿಂದ ಸ್ವಗ್ರಾಮಕ್ಕೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಆಗಮಿಸಿದ ಮರಿಲಿಂಗಯ್ಯ ರಸ್ತೆ ದಾಟುತ್ತಿದ್ದ ವೇಳೆ ಕನಕಪುರ ಕಡೆಯಿಂದ ಬಂದ ಗೂಡ್ಸ್ ಆಟೋ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮರಿಲಿಂಗಯ್ಯ ಅವರಿಗೆ ಹಲಗೂರಿನ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ನಂತರ ಮಂಡ್ಯ ಜಿಲ್ಲಾಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯ ಸಾವನ್ನಪ್ಪಿದ್ದಾರೆ. ಶನಿವಾರ ಬೆಳಗ್ಗೆ ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುಟ್ಟೇಗೌಡನದೊಡ್ಡಿಯಲ್ಲಿ ಡೈರಿ ಕಟ್ಟಡ ಉದ್ಘಾಟನೆ



ಭಾರತೀನಗರ, ಜೂ.17– ಹಾಲು ಉತ್ಪಾದಕರು ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಮನ್‌ಮುಲ್ ನಿರ್ದೇಶಕಿ ಎಂ.ರೂಪಾ ತಿಳಿಸಿದರು.

ಇಲ್ಲಿಗೆ ಸಮೀಪದ ಪುಟ್ಟೇಗೌಡನದೊಡ್ಡಿಯಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ನಾಮಫಲಕ ಅನಾವಣರಣಗೊಳಿಸಿ ಮಾತನಾಡಿ, ಗುಣಮಟ್ಟದ ಹಾಲು ಸರಬರಾಜು ಮಾಡಿದರೆ ಸಂಘ ಲಾಭಗಳಿಸಿ ಅಭಿವೃದ್ಧಿಯಾಗಲಿದೆ ಆ ಮೂಲಕ ಹಾಲು ಉತ್ಪಾದಕರ ಬದುಕು ಹಸನಾಗಲಿದೆ ಎಂದರು.

ಹಾಲು ಉತ್ಪಾದಕರು ದುರಾಸೆ, ಹಾಲಿಗೆ ಸ್ವಲ್ಪ ನೀರು ಬೆರೆಸಬೇಕೆಂಬ ಮೂಢನಂಬಿಕೆಯಿಂದ ಹಾಲು ಕರೆಯುವ ವೇಳೆ ಪಾತ್ರೆಯಲ್ಲಿರುವ ನೀರನ್ನು ಚೆಲ್ಲದೆ ನೀರಿಗೆ ಹಾಲು ಕರೆದು ಹಾಲನ್ನು ಸಂಘಗಳಿಗೆ ಪೂರೈಸುತ್ತಿದ್ದಾರೆ. ಇದರಿಂದ ಸಂಘದಲ್ಲಿ ಸಂಗ್ರಹವಾಗುವ ಎಲ್ಲಾ ಹಾಲು ಕಲಬೆರಕೆಯಾಗುತ್ತದೆ. ಹೀಗಾಗಿ ಸರ್ಕಾರ ಪ್ರತಿ ಲೀಟರ್ ಹಾಲಿಗೆ ನೀಡುವ 5 ರೂ. ಪ್ರೋತ್ಸಾಹ ನೀಡುವುದಿಲ್ಲ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮನ್‌ಮುಲ್ ಪ್ರಭಾರ ಅಧ್ಯಕ್ಷ ಎಂ.ಎಸ್.ರಘುನಂದನ್, ಹಾಲು ಉತ್ಪಾದಕರು ಗುಣಮಟ್ಟದ ಹಾಲನ್ನು ಸಂಘಕ್ಕೆ ಪೂರೈಕೆ ಮಾಡಿದರೆ 5 ರೂ. ಬೋನಸ್ ಹಣ ಸಿಗಲಿದೆ.

ಸಂಘಕ್ಕೂ ಗುಣಮಟ್ಟದ ಹಾಲಿನಿಂದ ಹೆಚ್ಚು ದರ ಸಿಗಲಿದೆ. ಇದರಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳು ಅಭಿವೃದ್ಧಿ ಹೊಂದಲಿವೆ ಎಂದರು.

ಈ ವೇಳೆ ಸಂಘದ ಅಧ್ಯಕ್ಷೆ ಶಿವಮ್ಮ, ಮನ್‌ಮುಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಪಿ.ಆರ್.ಮಂಜೇಗೌಡ, ವ್ಯವಸ್ಥಾಪಕ ಎಸ್.ಪ್ರಭಾಕರ್, ಪ್ರಭಾರ ಉಪ ವ್ಯವಸ್ಥಾಪಕಿ ದಿವ್ಯಶ್ರೀ, ಸಹಕಾರ ಸಂಘಗಳ ಉಪ ನಿಬಂಧಕರಾದ ಜೆ.ವಿಕ್ರಮರಾಜೇ ಅರಸ್, ಎಸ್. ಮಂಜುನಾಥ್, ಅಭಿವೃದ್ಧಿ ಅಧಿಕಾರಿ ಯು.ಕೆ.ಪಾರ್ವತಮ್ಮ, ಕಾರ್ಯದರ್ಶಿ ವಿದ್ಯಾಮಣಿ, ವಿಸ್ತರಣಾಧಿಕಾರಿಗಳಾದ ರುಮಾನ, ಶಶಿಕುಮಾರ್, ಗ್ರಾಪಂ ಸದಸ್ಯರಾದ ಸುಶೀಲಮ್ಮ, ದೇವರಾಜ್ ಆಚಾರ್ ಸೇರಿದಂತೆ ಮತ್ತಿತರರಿದ್ದರು.

ಪ್ರತಿಯೊಬ್ಬರೂ ರಕ್ತದಾನಕ್ಕೆ ಮುಂದಾಗಿ



ಶ್ರೀರಂಗಪಟ್ಟಣ, ಜೂ.17– ಪ್ರತಿಯೊಬ್ಬರೂ ಎಲ್ಲಾ ದಾನಗಳಿಗೂ ಶ್ರೇಷ್ಠವಾದ ರಕ್ತದಾನ ಮಾಡಲು ಮುಂದಾಗಬೇಕು ಎಂದು ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಹಾಗೂ ವಿಶ್ವ ರಕ್ತದಾನಿಗಳ ದಿನದ ಪ್ರಯುಕ್ತ ಓಂ ಶ್ರೀನಿಕೇತನ ಪರಿವರ್ತನಾ ಶಾಲೆ ಸಮೂಹ, ಉದ್ಯೋಗದಾತ ಸಂಸ್ಥೆ ಶ್ರೀರಂಗಪಟ್ಟಣ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಸ್ವಯಂಪ್ರೇರಿತ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯರಾಗಿ ಹುಟ್ಟಿದ ಮೇಲೆ ಪ್ರತಿಯೊಬ್ಬರೂ ನೇತ್ರ, ರಕ್ತ ಸೇರಿದಂತೆ ಅಂಗಾಂಗ ದಾನವನ್ನು ಸ್ವಯಂಪ್ರೇರಿತವಾಗಿ ಮಾಡಬೇಕು ಎಂದರು.

ಓಂ ಶ್ರೀನಿಕೇತನ ಟ್ರಸ್ಟ್ ಅಧ್ಯಕ್ಷ ಎಂ. ಪುಟ್ಟೇಗೌಡ ಮಾತನಾಡಿ, ವಿಜ್ಞಾನ ಎಷ್ಟೇ ಮುಂದುವರೆದಿದ್ದರೂ, ರಕ್ತವನ್ನು ಪ್ರಯೋಗಾಲಯದಲ್ಲಿ ತಯಾರಿಸಲು ಸಾಧ್ಯವಿಲ್ಲ. ಹೀಗಾಗಿ ಪ್ರತಿಯೊಬ್ಬರೂ ರಕ್ತದಾನ ಮಾಡುವ ಮೂಲಕ ಮತ್ತೊಂದು ಜೀವ ಉಳಿಸಲು ನೆರವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯಾಧಿಕಾರಿಕಾರಿ ಡಾ.ಎನ್.ಕೆ.ವೆಂಕಟೇಶ್, ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಪಿ.ಮಾರುತಿ, ಸಿಪಿಐ ಪುನೀತ್, ಉದ್ಯೋಗದಾತ ಸಂಸ್ಥೆ ಸಂಸ್ಥಾಪಕ ಡಿ.ಬಿ.ರುಕ್ಮಾಂಗದ, ನಾರಾಯಣಗೌಡ, ಚಂದ್ರನಾಗು, ರಂಗನಾಯಕಿ ಸ್ತ್ರೀ ಸಮಾಜದ ಅಧ್ಯಕ್ಷ ವಿಶಾಲ ಹಾಗೂ ನಳಿನಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ.ಬೆನ್ನೂರ, ಸೋಮಶೇಖರ, ತಾಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಜಿ.ಮೋಹನ್, ಪ್ರಯೋಗ ಶಾಲಾ ತಂತ್ರಜ್ಞೆ ಭಾನುಮತಿ, ಆರೋಗ್ಯ ನಿರೀಕ್ಷಣಾಧಿಕಾರಿ ಚಂದನ್ ಹಾಗೂ ಆಸ್ಪತ್ರೆ ಸಿಬ್ಬಂದಿ, ಸಾರ್ವಜನಿಕರು, ದಾನಿಗಳು ಹಾಜರಿದ್ದರು.

ಜನ ಸುರಕ್ಷಾ ಸ್ಕೀಂಗಳ ಜಾಗೃತಿ ಕಾರ್ಯಕ್ರಮ

ಪಾಂಡವಪುರ, ಜೂ.17– ತಾಲೂಕಿನ ಗಾಣದ ಹೊಸೂರು ಗ್ರಾಮದಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ಪಾಂಡವಪುರ ಶಾಖೆ ವತಿಯಿಂದ ಜನ ಸುರಕ್ಷಾ ಸ್ಕೀಂಗಳ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು.

ಪ್ರಾದೇಶಿಕ ಕಚೇರಿ ಸೀನಿಯರ್ ಮ್ಯಾನೇಜರ್ ಸಂದೀಪ್ ಮತ್ತು ನಾಗರಾಜು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಗ್ರಾಮೀಣ ಬ್ಯಾಂಕುಗಳ ಹುಟ್ಟು, ಬೆಳವಣಿಗೆ ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮೀಣ ಬ್ಯಾಂಕುಗಳ ಮಹತ್ತರ ಪಾತ್ರದ ಬಗ್ಗೆ ಮಾಹಿತಿ ನೀಡಿದರು.

ಶಾಖಾ ನಿರ್ವಾಹಕ ಅನಿಕೇತನ ಮಾತನಾಡಿ, ಬ್ಯಾಂಕಿನಿಂದ ದೊರಕುವ ಸಾಲ ಸೌಲಭ್ಯಗಳ ಮತ್ತು ಡೆಪಾಸಿಟ್ ಸ್ಕೀಮ್‌ಗಳ ಮಾಹಿತಿ ನೀಡಿದರು.

ಬ್ಯಾಂಕ್ ಆರ್ಥಿಕ ಸಾಕ್ಷರ ಸಲಹೆಗಾರ ಬಿ.ಜಯರಾಮು ಮಾತನಾಡಿ, ಸಾಮಾಜಿಕ ಭದ್ರತಾ ಸ್ಕೀಮ್‌ಗಳಾದ ಪ್ರಧಾನಮಂತ್ರಿ ಜೀವನ್ ಜ್ಯೋತಿ, ಸುರಕ್ಷಾ ಭೀಮಾ, ಅಟಲ್ ಪಿಂಚಣಿ ಯೋಜನೆಗಳು, ಡಿಜಿಟಲ್ ಬ್ಯಾಂಕಿನ ಸದುಪಯೋಗದ ಜೊತೆಗೆ ಸೈಬರ್ ಕ್ರೈಂ ಬಗ್ಗೆ ಸವಿವರವಾಗಿ ವಿವರಿಸಿ, ಜನರಿಗೆ ಮನದಟ್ಟು ಮಾಡಿಕೊಟ್ಟರು.

ಸ್ಥಳದಲ್ಲಿಯೇ ಗ್ರಾಮದ ನೂರಾರು ಜನರಿಗೆ ಜನಧನ್ ಖಾತೆಗಳು, ಪ್ರಧಾನಮಂತ್ರಿ ಜೀವನ್ ಜ್ಯೋತಿ, ಸುರಕ್ಷಾ ಭೀಮಾ ಮತ್ತು ಅಟಲ್ ಪೆಂಕ್ಷನ್ ಯೋಜನೆಗಳ ನೂರಾರು ಖಾತೆಗಳನ್ನು ತೆರೆಯಲಾಯಿತು.

ಸಭೆಯಲ್ಲಿ ಮುಖಂಡರಾದ ಗುಣಶೇಖರ್, ಮಧುಕುಮಾರ್, ಪಾಪಣ್ಣ, ನಾಗಣ್ಣ, ಲೋಕೇಶ್, ಮಂಜು ಮತ್ತು ಲಕ್ಷ್ಮಿಸಾಗರ ಜಯರಾಮು, ಬ್ಯಾಂಕಿನ ಸಿಬ್ಬಂದಿ ವರ್ಗದವರಾದ ಚೇತನ್, ರಾಜಶೇಖರ್, ಗಿರೀಶ್, ಸವಿತಾ, ಪವಿತ್ರ ಸೇರಿದಂತೆ ಇತರರಿದ್ದರು.

ಮೂರನೇ ಪುಟದಿಂದ

ಖಾತೆಗೆ ಹಣ

ಅಧಿಕಾರಿಗಳಿಗೆ ಕೆಲ ಬದಲಾವಣೆಗಳ ಸೂಚನೆ ನೀಡಿದ್ದೇವೆ. ಗ್ರಾಮ 1 ಕರ್ನಾಟಕ, ಬೆಂಗಳೂರು 1ನಲ್ಲಿ ಇದರ ಸೇವೆ ಲಾಭ ಪಡೆಯಬಹುದಾಗಿತ್ತು. ಈಗ ಬಾಪೂಜಿ ಸೇವಾ ಕೇಂದ್ರವನ್ನು ಸೇರಿಸಿದ್ದೇವೆ ಎಂದು ತಿಳಿಸಿದರು. ಗ್ರಾಮ ಪಂಚಾಯಿತಿಗಳಲ್ಲಿ ಬಾಪೂಜಿ ಸೇವಾ ಕೇಂದ್ರ ಇದೆ. ಸರ್ಕಾರದ ಯೋಜನೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಆಸಕ್ತಿ ಇರೋರಿಗೆ ಪ್ರಜಾಪ್ರತಿನಿಧಿ ಮಾಡುತ್ತೇವೆ. ಅವರಿಗೆ ಯಾವ ಖಾತೆಗೆ ಬೇಕೋ ಅದೇ ಅಕೌಂಟ್ ಗೆ ಹಣ ನೀಡುತ್ತೇವೆ. ಶುಕ್ರವಾರ ಕೆಲವು ಬದಲಾವಣೆ ಮಾಡಿದ್ದೇವೆ, ಅಧಿಕಾರಿಗಳು ಈಗಾಗಲೇ ಸಾಫ್ಟ್‌ವೇರ್ ರೆಡಿ ಮಾಡುತ್ತಿದ್ದಾರೆ. ಅತಿ ಶೀಘ್ರದಲ್ಲಿ ಅಪ್ಲಿಕೇಶನ್ ಡೌನ್ಲೋಡ್ ಮಾಡುವ ಯೋಜನೆಗೆ ಚಾಲನೆ ನೀಡುತ್ತೇವೆ ಎಂದು ಅವರು ಹೇಳಿದರು.

ಕೊಡುಗೆ ಅಪಾರ

ಇರಿಸಿ ಗುರಿ ಇಟ್ಟಿರುವುದು ರಾಜ್ಯದ ಜನ ಗಮನಿಸುತ್ತಿದ್ದಾರೆ. ಕರ್ನಾಟಕದ ಇತ್ತೀಚಿನ ರಾಜಕಾರಣವನ್ನು ಒಂದೇ ವಾಕ್ಯ ದಲ್ಲಿ ಹೇಳುವುದಾದರೆ ಅತ್ಯಂತ ದುಃಖಕ್ಕೆ ಕಾರಣ.

ಲಿಂಗಾಯತರ ನಂತರ ಒಕ್ಕಲಿಗ ಹಾಗೂ ದಲಿತ ನಾಯಕರನ್ನು ತುಳಿಯಲು ನೀವು ಯೋಜನೆ ರೂಪಿಸುತ್ತಿರಬಹುದು ಎಂದು ವ್ಯಂಗ್ಯವಾಡಿದ್ದಾರೆ.

ಪಾಟೀಲ್‌ಗೆ ಟಾಂಗ್ ಕೊಟ್ಟಿದ್ದ ಸಂತೋಷ್ : ಇದಕ್ಕೂ ಮುನ್ನ ಸಂತೋಷ್ ಕರ್ನಾಟಕದಲ್ಲಿ ಅದಾನಿ ಬಂಡವಾಳ ಹೂಡಲು ಅವಕಾಶ ನೀಡುತ್ತೇವೆ ಎಂದು ಪಾಟೀಲ್ ನೀಡಿದ್ದ ಹೇಳಿಕೆಯನ್ನು ವ್ಯಂಗ್ಯವಾಡಿದ್ದರು. ಈ ಸಂಬಂಧ ಟ್ವೀಟ್ ಮಾಡಿದ್ದ ಅವರು, ಅದಾನಿ ಹೂಡಿಕೆ ಪರವಾದ ಪಾಟೀಲ್ ಹೇಳಿಕೆಯನ್ನು ಶ್ಲಾಘಿಸಿ, ಅದನ್ನು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿಗೆ ಟ್ಯಾಗ್ ಮಾಡಿದ್ದರು. ರಾಹುಲ್ ಗಾಂಧಿಗೆ ಟ್ಯಾಗ್ ಮಾಡಿ, ವೆಲ್ ಡನ್ ಎಂಬಿ ಪಾಟೀಲ್ ಸರ್ ಎಂದಿದ್ದರು. ಅದಾನಿ ವಿರುದ್ಧ ಹೋರಾಟ ನಡೆಸುತ್ತಿರುವ ರಾಹುಲ್‌ಗಾಂಧಿಗೆ ಕರ್ನಾಟಕದಲ್ಲಿ ಉದ್ಯಮಿ ಅದಾನಿ ಹೂಡಿಕೆ ಪರವಾಗಿ ಮಾತನಾಡಿದ ಪಾಟೀಲರನ್ನು ಶ್ಲಾಘಿಸಿದ್ದರು. ಅದಾನಿ ವಿರುದ್ಧ ದೆಹಲಿಯ ಕಾಂಗ್ರೆಸ್ ನಾಯಕರು ಹೋರಾಟ ನಡೆಸುತ್ತಿದ್ದರೆ, ಕರ್ನಾಟಕದಲ್ಲಿ ಅವರಿಂದ ಹೂಡಿಕೆ ಮಾಡಿಸಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ವ್ಯಂಗ್ಯವಾಡಿದ್ದರು.

ಕೈ ಕೊಟ್ಟ ಮುಂಗಾರು; ಮೈಸೂರಲ್ಲಿ ತರಕಾರಿ, ಹಣ್ಣು, ದಿನಸಿ, ಮಾಂಸದ ಬೆಲೆ ಗಗನಕ್ಕೆ

■ ಚೇತನ್ ನರಸಿಂಹ ವಿ.

ಮೈಸೂರು, ಜೂ.17–ರಾಜ್ಯಕ್ಕೆ ಮುಂಗಾರು ಪ್ರವೇಶ ವಿಳಂಬವಾಗಿದೆ. ಇದರಿಂದ ಮಳೆ ಅಭಾವ ಎದುರಾಗಿದ್ದು ಕೃಷಿ ಚಟುವಟಿಕೆ ಆರಂಭಿಸಲು ತೊಡಕುಂಟಾಗಿದೆ. ಇದರ ಪರಿಣಾಮವಾಗಿ ತರಕಾರಿ, ಹಣ್ಣು, ದಿನಸಿ, ಮಾಂಸದ ಬೆಲೆ ಗಗನಕ್ಕೇರಿದೆ. ಇರುವ ದಾಸ್ತಾನು ಸಹ ಕರಗುತ್ತಿದೆ.

ಇತ್ತ ತರಕಾರಿಗಳು ಯಥೇಚ್ಛವಾಗಿ ಮಾರಾಟವಾಗುತ್ತಿದ್ದು, ತರಕಾರಿ ಕೊರತೆಯಾಗಲು ಇದು ಸಹ ಕಾರಣವಾಗಿದೆ. ದಿನಸಿ, ಹಣ್ಣು, ಮಾಂಸದ ದರವೂ ಏರಿಕೆಯಾಗಿದ್ದು, ಜನಸಾಮಾನ್ಯರ ಜೇಬನ್ನು ಸುಡುತ್ತಿದೆ. ನಗರದ ದೇವರಾಜ, ವಾಣಿ ವಿಲಾಸ, ಎಪಿಎಂಸಿ, ಮಂಡಿ, ನಂಜುಮಳಿಗೆ ಮಾರುಕಟ್ಟೆಗಳಲ್ಲಿ ತರಕಾರಿ ದರ ದುಪ್ಪಟ್ಟು ಆಗಿದೆ. ದಿನನಿತ್ಯ ಈ ಎಲ್ಲಾ ಸ್ಥಳಗಳಲ್ಲಿ ಹೆಚ್ಚು ವಹಿವಾಟು ನಡೆಯಲಿದ್ದು, ಕಳೆದ 1 ವಾರದಿಂದಲೂ ಸಹ ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ.

ತರಕಾರಿ ಬೆಲೆ ಗಣನೀಯ ಹೆಚ್ಚಳ: ಕ್ಯಾರೆಟ್, ಬೀನ್ಸ್, ಟಮೋಟ, ಮೆಣಸಿನಕಾಯಿ, ಶುಂಠಿ ಬೆಲೆ ಹೆಚ್ಚಳವಾಗಿದೆ. 1 ಕೆಜಿ ಕ್ಯಾರೆಟ್‌ಗೆ 60 ರೂ, ಬೀನ್ಸ್ 100 ರೂ. ಹಸಿಮೆಣಸಿನ ಕಾಯಿ 60 ರೂ. ಶುಂಠಿ ಕೆಜಿಗೆ 200 ರೂ, ಟಮೋಟ 50, ದೊಡ್ಡ ಮೆಣಸಿನಕಾಯಿ 60 ರೂಪಾಯಿ ಆಗಿದೆ. ಬಹುತೇಕ ತರಕಾರಿಗಳ ಬೆಲೆ ಏರಿಕೆ ಕಂಡಿದ್ದು, ಆಷಾಢ ಮಾಸ ಆರಂಭದ ಬಳಿಕ ತರಕಾರಿ ಬೆಲೆ ಕಡಿಮೆಯಾಗುವ ಸಾಧ್ಯತೆಯಿದೆ. ಬೀಟ್ರೂಟ್ 60, ಎಲೆಕೋಸು 50 , ಈರುಳ್ಳಿ 30, ಆಲೂಗೆಡ್ಡೆ 40, ಬೆಂಡೆಕಾಯಿ 40, ತೊಂಡೆಕಾಯಿ 35 ರೂಪಾಯಿ ಆಗಿದೆ. ಬೆಲೆ ಕೇಳಿದ ಗ್ರಾಹಕರು ಖರೀದಿಸಲು ಹಿಂದೇಟು ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸರಬರಾಜು ಆತಂಕ: ಮೈಸೂರು ಭಾಗಕ್ಕೆ ಕೇರಳ, ತಮಿಳುನಾಡು, ಆಂಧ್ರ ಭಾಗದಿಂದಲೂ ತರಕಾರಿ ಸರಬರಾಜು ಆಗುತ್ತಿದೆ. ಸದ್ಯಕ್ಕೆ ನಿರೀಕ್ಷಿತ ಪ್ರಮಾಣದಲ್ಲಿ ತರಕಾರಿ ಮಾರುಕಟ್ಟೆಗೆ ಬರುತ್ತಿದೆ. ಯಾವುದೇ ಕೊರತೆ ಇಲ್ಲ. ಆದರೆ ಮುಂದಿನ 15 ದಿನಗಳಲ್ಲಿ ಮಳೆ ಆಗದಿದ್ರೆ, ಜುಲೈ ಮೊದಲ ವಾರದಲ್ಲಿ ಮೈಸೂರು ಜಿಲ್ಲೆಯಲ್ಲಿ ತರಕಾರಿ ಕೊರತೆ ಸೃಷ್ಟಿಯಾಗಲಿದೆ.

ಹಣ್ಣುಗಳ ಬೆಲೆ ಮುಗಿಲೆತ್ತರಕ್ಕೆ: ತರಕಾರಿ ಮಾತ್ರವಲ್ಲ ಹಣ್ಣುಗಳ ಬೆಲೆಯೂ ಗಣನೀಯವಾಗಿ ಏರಿಕೆಯಾಗಿದ್ದು, ಸೇಬು ಕೆಜಿಗೆ 200 ರಿಂದ 240 ರೂ, ಕಿತ್ತಳೆಹಣ್ಣು 160 ರಿಂದ 200 ರೂ. ಮೊಸಂಬಿ, ಸಪೋಟಾ ಸೇರಿದಂತೆ ಬಹುತೇಕ ಹಣ್ಣುಗಳ ಬೆಲೆಯೂ ಏರಿಕೆಯಾಗಿದೆ.

ದಿನಸಿ ಪದಾರ್ಥಗಳ ಏರಿಕೆ: ತೊಗರಿಬೇಳೆ ಕೆಜಿಗೆ 180 ರೂ, ಉದ್ದಿನಬೇಳೆ 140 ರೂ, ಒಣ ಮೆಣಸಿಕಾಯಿ ಕೆಜಿಗೆ 650 ರೂ, ಜೀರಿಗೆ ಕೆಜಿಗೆ 700 ರೂ, 26 ಕೆಜಿ ಅಕ್ಕಿ ಮೂಟೆಗೆ ತಲಾ 200 ರೂ ಜಾಸ್ತಿ ಆಗಿದೆ ಎನ್ನುತ್ತಾರೆ ವರ್ತಕರು.

ಕೋಳಿ, ಮೊಟ್ಟೆ, ಮಟನ್ ರೇಟ್ ಜಾಸ್ತಿ: ಕೋಳಿ ಸಾಕಾಣಿಕೆ, ಸಮರ್ಪಕ ನಿರ್ವಹಣೆ ಕೊರತೆ ಎದುರಾಗಿದೆ. ರೈತರು ಕಂಗೆಟ್ಟಿದ್ದು, ಮೈಸೂರಿನಲ್ಲಿ ಅನೇಕ ಫಾರಂಗಳು ಬಾಗಿಲು ಮುಚ್ಚಿವೆ. ಹಾಗಾಗಿ ಕೋಳಿ, ಮೊಟ್ಟೆ, ಮಾಂಸ ಪೂರೈಕೆ ಕಡಿಮೆಯಾಗಿದೆ. ಇನ್ನು ಬ್ರಾಯ್ಲರ್ ಚಿಕನ್ ಕೆಜಿಗೆ 180 ರಿಂದ 255ಕ್ಕೇರಿಕೆಯಾದರೆ, ಫಾರಂ ಕೋಳಿ 120 ರಿಂದ 180 ರೂಪಾಯಿಗೆ ಏರಿಕೆಯಾಗಿದೆ. 1 ಮೊಟ್ಟೆ ದರ 4.50 ರೂ ಇತ್ತು, ಈಗ 5.85 ರೂಪಾಯಿ ಆಗಿದೆ. 1 ಕೆಜಿ ಮಟನ್ 50 ರೂ. ಜಾಸ್ತಿಯಾಗಿ, 650ಕ್ಕೆ ತಲುಪಿದೆ.

ಬೆಲೆ ಏರಿಕೆ ಗ್ರಾಹಕರು, ವರ್ತಕರು ಗರಂ: ಒಂದು ಕೆಜಿ ತೆಗೆದುಕೊಳ್ಳುವ ಬದಲು ಅರ್ಧ ಕೆಜಿ ತಗೆದುಕೊಳ್ಳುತ್ತೇವೆ. ಈ ರೀತಿ ಬೆಲೆ ಏರುತ್ತಿದ್ದರೆ ನಮ್ಮಂತ ಬಡ ಜನ ಜೀವನ ಮಾಡೋದಾದರೂ ಹೇಗೆ.? ಜೀವನ ಬಹಳ ಕಷ್ಟವಾಗುತ್ತಿದೆ ಎಂದು ಗ್ರಾಹಕರು ಅಳಲು ತೋಡಿಕೊಂಡಿದ್ದಾರೆ. ಬೆಲೆ ಏರಿಕೆಯಿಂದ ತರಕಾರಿ, ದಿನಸಿ, ಹಣ್ಣು ಹಂಪಲು ಖರೀದಿಗೆ ಗ್ರಾಹಕರು ಯೋಚಿಸುವ ಹಾಗೇ ಹಾಗಿದೆ ಎಂದು ತಮ್ಮ ಅಸಾಯಕತೆಯನ್ನು ವರ್ತಕರು 'ಮೈಸೂರು ಮಿತ್ರ'ನಲ್ಲಿ ವಿವರಿಸಿದ್ದಾರೆ.



> ಈಗ ಅನ್‌ಸೀಸನ್ ಹಾಗೂ ಮಳೆ ಕೈಕೊಟ್ಟ ಕಾರಣದಿಂದ ಹಣ್ಣುಗಳ ಬೆಲೆ ಜಾಸ್ತಿಯಾಗಿದೆ. ಆಷಾಢ ಬಳಿಕ ವರಮಹಾಲಕ್ಷ್ಮಿ ಹಬ್ಬದ ಹೊತ್ತಿಗೆ ವ್ಯಾಪಾರ ಯಥಾಸ್ಥಿತಿಗೆ ಮರಳಬಹುದು. ಇನ್ನೂ ಮಳೆ ಬಾರದೇ ಇದ್ದರೆ ಮತ್ತಷ್ಟು ಬೆಲೆ ಹೆಚ್ಚುವ ಸಾಧ್ಯತೆ ಇದೆ. ಬೆಲೆ ಹೆಚ್ಚಿದರೆ ಗ್ರಾಹಕರು ಖರೀದಿಗೆ ಮುಂದಾಗುವುದಿಲ್ಲ.
> –ಕೆ.ಪಿ.ಸಮೀರ್, ಹಣ್ಣಿನ ವ್ಯಾಪಾರಿ.

> ಪ್ರತಿವರ್ಷವು ಇದೇ ಪರಿಸ್ಥಿತಿ ಎದುರಾಗುತ್ತೆ. ಇನ್ನೂ 2 ತಿಂಗಳವರೆಗೂ ಇದೆ ಸ್ಥಿತಿ ಮುಂದುವರಿಯಲಿದೆ. ಬಳಿಕ ಉತ್ತಮ ರೀತಿ ಮಳೆಯಾದರೇ ಮಾತ್ರ ದರ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಇಲ್ಲವಾದಲ್ಲಿ ಮತ್ತಷ್ಟು ದರ ಹೆಚ್ಚಿ ಗ್ರಾಹಕರಿಗೆ ಹಾಗೂ ನಮಗೆ ತೊಂದರೆ ಉಂಟಾಗಲಿದೆ.
> –ಸುರೇಶ್, ತರಕಾರಿ ವ್ಯಾಪಾರಿ.

> ನಮಗೆ ಉತ್ತರ ಕರ್ನಾಟಕ ಭಾಗಗಳಿಂದ ದಿನಸಿ ಪದಾರ್ಥಗಳು ಪೂರೈಕೆ ಆಗುತ್ತಿದ್ದವು. ಆದರೆ ಮಳೆ ಕೈ ಕೊಟ್ಟ ಕಾರಣ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ಕೆಲ ದಿನಸಿ ಪದಾರ್ಥಗಳ ಬೆಲೆ ಜಾಸ್ತಿಯಾಗಿದೆ. ಅಲ್ಲದೇ ದರ ಕೇಳಿದ ಗ್ರಾಹಕರು ಖರೀದಿಗೆ ಮುಂದಾಗುತ್ತಿಲ್ಲ. ಮಳೆ ಬಿದ್ದರಷ್ಟೇ ಬೆಲೆ ಏರಿಕೆ ತಗ್ಗಬಹುದು.
> –ಮಂಜುನಾಥ್, ದಿನಸಿ ವ್ಯಾಪಾರಿ.






> ನಮ್ಮಲ್ಲಿ ಕೋಳಿ ಸಾಕಾಣಿಕೆ ಕಡಿಮೆಯಾಗಿದೆ, ಕೋಳಿಫಾರಂ ಮಾಡಿ ರೈತರು ಕೈ ಸುಟ್ಟುಕೊಂಡಿದ್ದಾರೆ. ಹಾಗಾಗಿ ಮೈಸೂರಿನಲ್ಲಿ ಸುಮಾರು ಹಲವು ಫಾರಂ ಶಾಶ್ವತವಾಗಿ ಬಾಗಿಲು ಮುಚ್ಚಿವೆ. ಅತಿಯಾದ ಬಿಸಿಲು, ರೋಗ ಬಾಧೆ, ಔಷಧಿ ದರ ಹೆಚ್ಚಳದಿಂದಾಗಿ ನಿರ್ವಹಣೆ ಮಾಡಲಾಗದೇ ಕೋಳಿಗಳು ಮಾರುಕಟ್ಟೆಗೆ ನಿರೀಕ್ಷಿತ ಮಟ್ಟದಲ್ಲಿ ಬರುತ್ತಿಲ್ಲ. ಕೋಳಿ ಮೊಟ್ಟೆ ನಮ್ಮಲ್ಲಿ 25 ಲಕ್ಷ ಪೂರೈಕೆಯಾಗುತ್ತಿತ್ತು ಅದು ಕೂಡ ಕಡಿಮೆಯಾಗಿದ್ದು, ತಮಿಳುನಾಡಿನ ರಾಗಿಪುರ, ನಾಮಕ್ಕಲ್, ಈರೋಡ್ ಪ್ರದೇಶಗಳಿಂದ ಬರೋಬ್ಬರಿ ಸುಮಾರು 7 ಕೋಟಿಯಷ್ಟು ಮೊಟ್ಟೆಗಳು ಮಾರುಕಟ್ಟೆಗೆ ಬರುತ್ತಿವೆ. ಈಗ ಪ್ರಮಾಣ ಕಡಿಮೆಯಾಗಿದ್ದರಿಂದ ಮಾಂಸ, ಮೊಟ್ಟೆಗಳ ಬೆಲೆಯೂ ಏರಿಕೆ ಕಂಡಿದೆ.
> –ಅಬ್ದುಲ್ ಕಲಾಂ ಆಜಾದ್
> ಸ್ಟಾರ್ ಎಗ್ ಸೆಂಟರ್ ಮಾಲೀಕ

ತರಕಾರಿ, ಹಣ್ಣು, ಮೊಟ್ಟೆ, ಮಾಂಸದ ದರ ಪಟ್ಟಿ

ತರಕಾರಿ	ದರ(ಕೆಜಿಗೆ)
ಬೀನ್ಸ್	100
ಕ್ಯಾರೆಟ್	60
ಶುಂಠಿ	200
ಟಮೋಟ	50
ಹಣ್ಣುಗಳು	**ದರ(ಕೆಜಿಗೆ)**
ಸೇಬು	200–240
ಕಿತ್ತಳೆ	160–200
ದ್ರಾಕ್ಷಿ	160
ದಾಳಿಂಬೆ	180–200
ಮಾಂಸ	**ದರ(ಕೆಜಿಗೆ)**
ಚಿಕನ್	180–250 ರೂ.
ಮೊಟ್ಟೆ(ಒಂದಕ್ಕೆ)	5.80 ರೂ
ಮಟನ್	600–650
ದಿನಸಿ	**ದರ(ಕೆಜಿಗೆ)**
ತೊಗರಿಬೇಳೆ	180
ಅಕ್ಕಿ(26 ಕೆಜಿ)	1500
ಒಣ ಮೆಣಸಿನಕಾಯಿ	650

ಕಾಡಿನಿಂದ ನಾಡಿಗೆ ಬಂದು ಬೀಡುಬಿಟ್ಟಿದ್ದ ಹೆಣ್ಣಾನೆ ಸಾವು



ಗುಂಡ್ಲುಪೇಟೆ, ಜೂ.17–ತಾಲೂಕಿನ ಚಿರಕನಹಳ್ಳಿ ಬಳಿ ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯಾಚರಣೆಗೂ ಜಗ್ಗದೆ ಬೀಳುಬಿದ್ದ ಜಮೀನಿನಲ್ಲಿ ಬೀಡುಬಿಟ್ಟಿದೆ.

ಗ್ರಾಮದ ಚಿಕ್ಕತೋಟದಕಟ್ಟೆ ಶನೇಶ್ವರ ತೋಪಿನ ಬಳಿ ಸುಮಾರು 65 ವರ್ಷದ ಹೆಣ್ಣಾನೆ ಮೃತಪಟ್ಟಿದೆ. ಇದು ವಯೋಸಹಜ ಸಾವು ಎಂದು ಅಂದಾಜಿಸಲಾಗಿದೆಯಾದರೂ ಆನೆಯ ಅಂಗಾಂಗ ಮಾದರಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳಹಿಸಲಾಗಿದೆ. ಬಿಳಿಗಿರಿ ರಂಗನಬೆಟ್ಟ ದೇವಸ್ಥಾನ ಹುಲಿ ಸಂರಕ್ಷಿತ ಪ್ರದೇಶದ ಗಡಿಯಿಂದ ಬಂಡೀಪುರ ಹುಲಿ ಯೋಜನೆ ಕುಂದುಕೆರೆ ವಲಯ ವ್ಯಾಪ್ತಿಗೆ ಜೂ.15ರಂದು ಬಂದಿದ್ದ ಈ ಹೆಣ್ಣಾನೆ, ಇಲ್ಲಿನ ಕಡಬೂರು ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ಕಾಣಿಸಿಕೊಂಡಿತ್ತು. ಮರುದಿನ(ಜೂ.16) ಬೆಳಗ್ಗೆಯಿಂದಲೇ ಅರಣ್ಯ ಇಲಾಖೆ ತಂಡ, ಆನೆಯನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯಾಚರಣೆ ಆರಂಭಿಸಿದ್ದರು. ಪೋತರಾಜು ಎಂಬುವರಿಗೆ ಸೇರಿದ ಸುಮಾರು 100 ಎಕರೆ ಬೀಳುಬಿದ್ದ ಜಮೀನಿನಲ್ಲಿ ಬೀಡುಬಿಟ್ಟಿದ್ದ ಆನೆ, ನಿರಂತರ ಕಾರ್ಯಾಚರಣೆ ನಡೆಸಿದರೂ ಕಾಡಿನ ಹಾದಿ ಹಿಡಿಯದೆ ಅಲ್ಲೇ ಉಳಿದಿತ್ತು. ಆದರೆ ಶನಿವಾರ ಮಧ್ಯಾಹ್ನ ಚಿರಕನಹಳ್ಳಿಯ ಚಿಕ್ಕತೋಟದಕಟ್ಟೆ ತೋಪಿನ ಬಳಿ ಆನೆ ಸಾವನ್ನಪ್ಪಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಗುಂಡ್ಲುಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಿ.ರವೀಂದ್ರ ಇಲಾಖೆಯ ಪಶುವೈದ್ಯ ಡಾ.ಮಿರ್ಜಾ ವಾಸೀಂ, ಕುಂದುಕೆರೆ ವಲಯದ ವಲಯ ಅರಣ್ಯಾಧಿಕಾರಿ ಡಿ.ಶ್ರೀನಿವಾಸ ಹಾಗೂ ಸರ್ಕಾರೇತರ ಸಂಸ್ಥೆ ಸದಸ್ಯ ರಘುರಾಂ, ಉಪ ವಲಯ ಅರಣ್ಯಾಧಿಕಾರಿ ಭರಮಪ್ಪ ಎಂಟೆತ್ತ, ಗಸ್ತು ವನಪಾಲಕ ಮೋನ್ಯ ಪರಿಶೀಲನೆ ನಡೆಸಿದರು. ಬಳಿಕ ಬಂಡೀಪುರ ಹುಲಿ ಯೋಜನೆ ಕ್ಷೇತ್ರ ನಿರ್ದೇಶಕರೂ ಆದ ಅರಣ್ಯ ಸಂರಕ್ಷಣಾಧಿಕಾರಿ ಪಿ.ರಮೇಶ್‌ಕುಮಾರ್ ಮಾರ್ಗದರ್ಶನದಂತೆ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಹೆಣ್ಣಾನೆಗೆ 62–65 ವರ್ಷ ವಯಸ್ಸಾಗಿದ್ದು, ವಯೋ ಸಹಜವಾಗಿ ಸಾವನ್ನಪ್ಪಿರಬಹುದು ಎಂದು ಪಶುವೈದ್ಯರು ತಿಳಿಸಿದರಾದರೂ ನಿಖರ ಕಾರಣ ತಿಳಿಯಲು ಅದರ ಅಂಗಾಂಗಳ ಮಾದರಿಯನ್ನು ಸಂಗ್ರಹಿಸಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಯಿತು. ಪ್ರಯೋಗಾಲಯದಿಂದ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಯಾನಗಳಲ್ಲಿ ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಾಣ; ರಸ್ತೆಯನ್ನೇ ನಿವೇಶನ ಮಾಡಿ ಮಾರಾಟ; ಪ್ಲಾನ್ ನೀಡಲು ಹಣ ಕೇಳ್ತಾರೆ; ತೆರಿಗೆ ಕಟ್ಟಿಸಿಕೊಂಡು ಕಸವನ್ನೇ ಎತ್ತುತ್ತಿಲ್ಲ!

ಮೈಸೂರು,ಜೂ.17(ಎಂಟಿವೈ)– ಮೈಸೂರಿನ ಉದ್ಯಾನಗಳಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳ ತೆರವು, ಇ–ಖಾತೆ, ಹಕ್ಕುಪತ್ರ ನೀಡಲು ಮೀನಾಮೇಷ, ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಿವೇಶನ ನೀಡದೆ ವಂಚಿಸುತ್ತಿರುವುದೂ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ 200ಕ್ಕೂ ಹೆಚ್ಚು ಮಂದಿ ಉಪಲೋಕಾಯುಕ್ತರಿಗೆ ದೂರು ನೀಡಿ, ನ್ಯಾಯಕ್ಕಾಗಿ ಮನವಿ ಸಲ್ಲಿಸಿದರು.

ಮೈಸೂರಿನ ಜಿ.ಪಂ ಸಭಾಂಗಣದಲ್ಲಿ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ ನೇತೃತ್ವದಲ್ಲಿ ಶನಿವಾರ ಆರಂಭವಾದ ಮೂರು ದಿನಗಳ ಸಾರ್ವಜನಿಕರ ಕುಂದುಕೊರತೆ ಹಾಗೂ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ದೂರು ಸ್ವೀಕರಿಸಿದರು.

ಮೂರು ದಿನಗಳ ಕಾರ್ಯಕ್ರಮದಲ್ಲಿ ಮೊದಲ ದಿನ ಶನಿವಾರ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರೆ, ಎರಡನೇ ದಿನ ನಾಳೆ(ಜೂ.18) ವಿವಿಧ ಕಚೇರಿಗಳಿಗೆ ದಿಢೀರ್ ಭೇಟಿ ನೀಡಿ, ಅಧಿಕಾರಿಗಳೊಂದಿಗೆ ಸಭೆ, ಮೂರನೇ ದಿನ ಸೋಮವಾರ(ಜೂ.19) ವೈಯಕ್ತಿಕ ಸಮಸ್ಯೆ ಕುರಿತಂತೆ ದೂರು ಸಲ್ಲಿಸಿರುವ ಸುಮಾರು 200ಕ್ಕೂ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಪಡಿಸಲು ಉದ್ದೇಶಿಸಲಾಗಿದೆ.

ಅಕ್ರಮ ಕಟ್ಟಡಗಳು: ಮೈಸೂರಿನ ಕಿರಣ್ ಎಂಬುವವರು ದೂರು ನೀಡಿ, ಉದ್ಯಾನವನಗಳಲ್ಲಿ ಯಾವುದೇ ಕಟ್ಟಡ ನಿರ್ಮಿಸದಂತೆ ನ್ಯಾಯಾಲಯದ ಆದೇಶವಿದ್ದರೂ, ಮೈಸೂರು ಮಹಾನಗರ ಪಾಲಿಕೆಯೇ 65 ವಾರ್ಡ್‌ಗಳಲ್ಲಿರುವ ಎಲ್ಲಾ ಉದ್ಯಾನವನಗಳಲ್ಲಿ ಕಟ್ಟಡ ನಿರ್ಮಿಸಿ, ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸುತ್ತಿದೆ. ಇದರಿಂದ ಉದ್ಯಾನವನದಲ್ಲಿ ವಾಯುವಿಹಾರ ಮಾಡುವ ಜನರಿಗೆ ತೊಂದರೆಯಾಗುತ್ತಿದೆ ಎಂದು ದೂರಿದರು.

ವಿಜಯನಗರ 1, 2, 3ನೇ ಹಂತದ ಉದ್ಯಾನದಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಿಸಲಾಗಿದೆ. ಇದೇ ರೀತಿ ನಗರದ ಬಹುತೇಕ ಪಾರ್ಕ್‌ನಲ್ಲಿ ಅನಾಥಾಶ್ರಮ, ಮನೆಗಳು ಸೇರಿದಂತೆ ಇನ್ನಿತರ ಕಟ್ಟಡ ನಿರ್ಮಿಸಿ ಅನ್ಯ ಉದ್ದೇಶಕ್ಕೆ ಬಳಕೆಗೆ ಅವಕಾಶ ನೀಡಲಾಗಿದೆ. ಈ ಸಂಬಂಧ ಪಾಲಿಕೆ ಆಯುಕ್ತರು, ವಲಯದ ಅಧಿಕಾರಿಗಳಿಗೆ ದೂರು ನೀಡಲಾಗಿದೆ. ಆದರೂ ಯಾವುದೇ ಕ್ರಮ ವಹಿಸಿಲ್ಲ ಎಂದು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಉಪ ಲೋಕಾಯುಕ್ತರು, ಈ ಪ್ರಕರಣವನ್ನು ವಿಚಾರಣೆ ನಡೆಸಲು ನೋಂದಣಿ ಮಾಡಿಕೊಳ್ಳಲಾಗುವುದು. ಲೋಕಾಯುಕ್ತರಿಗೆ ಈ ಪ್ರಕರಣವನ್ನು ವರ್ಗಾವಣೆ ಮಾಡಲಾಗುವುದು ಎಂದು ತಿಳಿಸಿದರು.



ತೆರಿಗೆ ಪಡೆದು, ಕಸ ಸಂಗ್ರಹಿಸುತ್ತಿಲ್ಲ

ಮೈಸೂರಿನ ಬೋಗಾದಿ ನಿವಾಸಿಯೊಬ್ಬರು ದೂರು ಸಲ್ಲಿಸಿ, ಕಳೆದ 20 ವರ್ಷದಿಂದ ತ್ಯಾಜ್ಯ ಸಂಗ್ರಹ ತೆರಿಗೆ ವಸೂಲಿ ಮಾಡುತ್ತಿದ್ದರೂ ಕಸ ಮಾತ್ರ ಸಂಗ್ರಹಿಸುತ್ತಿಲ್ಲ. ಇದರಿಂದ ಬಡಾವಣೆಯಲ್ಲಿ ಕಸದ ಸಮಸ್ಯೆ ಸೃಷ್ಟಿಯಾಗಿದೆ. ಎಲ್ಲೆಂದರಲ್ಲಿ ಕಸ ಬಿಸಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು. ಇದಕ್ಕೆ ಆಕ್ಷೇಪಿಸಿದ ಉಪಲೋಕಾಯುಕ್ತರು ಕಸ ಸಂಗ್ರಹಕ್ಕೆ ಕ್ರಮ ಕೈಗೊಳ್ಳುವಂತೆಯೂ ಸೂಚನೆ ನೀಡಿದರು.

ರಿಂಗ್ ರಸ್ತೆ ಒಳಗೆ ಕಾವೇರಿ ನೀರು, ಹೊರಗೆ ಬೋರ್‌ವೆಲ್ ನೀರು

ಸಾತಗಳ್ಳಿಯ ಎಸ್.ಆರ್.ವಿಜಯಕುಮಾರ್ ಎಂಬುವರು ದೂರು ನೀಡಿ, ರಿಂಗ್ ರಸ್ತೆ ಒಳಭಾಗದಲ್ಲಿರುವ ಬಡಾವಣೆಗಳಿಗೆ ಕುಡಿಯಲು ಕಾವೇರಿ ನೀರನ್ನು ಪೂರೈಕೆ ಮಾಡಲಾಗುತ್ತಿದೆ. ಆದರೆ, ರಿಂಗ್ ರಸ್ತೆಯ ಹೊರಗೆ ಇರುವ ಬಡಾವಣೆಗಳಿಗೆ ಬೋರ್‌ವೆಲ್ ನೀರು ಪೂರೈಸಲಾಗುತ್ತಿದೆ. ಇದುವರೆಗೂ ಸಾಕಷ್ಟು ಬಾರಿ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ಹಸ್ತಾಂತರದ ಸಮಸ್ಯೆ

ರಿಂಗ್ ರಸ್ತೆ ಹೊರಗೆ ಇರುವ ಕೆಲ ಬಡಾವಣೆಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಪಾಲಿಕೆ ಹಿಂದೇಟು ಹಾಕುತ್ತಿದೆ. ಮುಡಾ ವ್ಯಾಪ್ತಿಯ ಬಡಾವಣೆಗಳನ್ನು ಪಾಲಿಕೆಗೆ ಹಸ್ತಾಂತರ ಮಾಡದ ಕಾರಣ ಸಮಸ್ಯೆ ಉದ್ಭವಿಸಿದೆ ಎಂದು ಕೆಲವರು ದೂರಿದರು. ಇದಕ್ಕೆ ಮುಡಾ ಆಯುಕ್ತ ಜಿ.ಟಿ.ದಿನೇಶ್ ಹಾಗೂ ಪಾಲಿಕೆಯ ಹೆಚ್ಚುವರಿ ಆಯುಕ್ತರಾದ ರೂಪ ಅವರಿಂದ ಉಪಲೋಕಾಯುಕ್ತರು ಮಾಹಿತಿ ಪಡೆದು, ಜನರಿಗೆ ನೆರವಾಗುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

ತನಿಖೆಗೆ ಸೂಚನೆ : ಮೈಸೂರಿನ ಕನಕ ಗೃಹ ನಿರ್ಮಾಣ ಸಂಸ್ಥೆ ನಿರ್ಮಿಸಿರುವ ಬಡಾವಣೆಯಲ್ಲಿ ರಸ್ತೆ ಜಾಗದಲ್ಲಿ ನಿವೇಶನ ನಿರ್ಮಿಸಿ ಮಾರಾಟ ಮಾಡಲಾಗಿದೆ. ಈಗ ರಸ್ತೆ ವಿಸ್ತೀರ್ಣವನ್ನು ಕಡಿಮೆ ಮಾಡಿ ಜನ, ವಾಹನ ಸಂಚಾರಕ್ಕೆ ತೊಂದರೆ ಉಂಟು ಮಾಡಲಾಗಿದೆ. ಇದನ್ನು ಪ್ರಶ್ನಿಸುವ ನಿವಾಸಿಗಳ ಮೇಲೆ ಗೂಂಡಾಗಳನ್ನು ಬಿಟ್ಟು ಹಲ್ಲೆ ಮಾಡಿಸಲಾಗಿದೆ. ಈ ಕುರಿತು ಪೊಲೀಸರಿಗೆ ದೂರು ನೀಡಿದರೂ ಪ್ರಕರಣ ದಾಖಲಿಸಿಕೊಳ್ಳಲಿಲ್ಲ ಎಂದು ಬಡಾವಣೆಯ ನಿವಾಸಿಗಳಾದ ಸಿ.ರಾಜು, ಜಿ.ಸಿ.ದಾಸಶೆಟ್ಟಿ, ಹೆಚ್.ಸಿ. ಭಾಗ್ಯಮ್ಮ ಸೇರಿದಂತೆ ಇನ್ನಿತರ ನಿವಾಸಿಗಳು, ವಿಡಿಯೋ ತುಣುಕನ್ನು ಪ್ರದರ್ಶಿಸಿ, ನ್ಯಾಯ ಕೋರಿದರು.

ಇದಕ್ಕೆ ಸ್ಪಂದಿಸಿದ ಉಪಲೋಕಾಯುಕ್ತರು, ಹಲ್ಲೆ ನಡೆಸಿರುವ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಕ್ರಮ ವಹಿಸಬೇಕು. ಈ ವಿಷಯದಲ್ಲಿ ಕರ್ತವ್ಯ ಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಲು ಪ್ರಕರಣವನ್ನು ನೋಂದಾಯಿಸಿಕೊಳ್ಳಲಾಗುವುದು. ನಿರ್ಲಕ್ಷ್ಯ ಪ್ರದರ್ಶಿಸಿರುವ ಮುಡಾ ವಿರುದ್ಧವೂ ತನಿಖೆಗೆ ಆದೇಶಿಸಲಾಗುವುದು ಎಂದು ತಿಳಿಸಿದರು.

ಇನ್ನಷ್ಟು ದೂರು: ನಿವೇಶನ ಮಂಜೂರಾಗಿದ್ದರೂ ಸ್ಥಳ ತೋರಿಸುತ್ತಿಲ್ಲ. ಮನೆ ಕಟ್ಟಲು ಪಿಡಿಒ ಹಾಗೂ ಗ್ರಾ.ಪಂ ಅಧಿಕಾರಿಗಳು ನಕ್ಷೆ ನೀಡುತ್ತಿಲ್ಲ ಎಂದು ಶಿವಕುಮಾರ್ ದೂರು ನೀಡಿದರು. ಚಾಮರಾಜನಗರ ಜಿಲ್ಲೆಯ ಅಂಕನಹಳ್ಳಿಯ ನಟರಾಜ್ ನಿವೃತ್ತಿ ಸೌಲಭ್ಯ ನೀಡಿಲ್ಲ ಎಂದು ದೂರಿದರು.

ನೀರಿನ ಬಿಲ್ ಪರಿಷ್ಕರಣೆ ಮಾಡಿಸಿಕೊಡುವಂತೆ ಎ.ಎನ್. ಪ್ರಭಾಕರ್ ದೂರು ನೀಡಿದರೆ, ಇ–ಸ್ವತ್ತು ನೀಡುತ್ತಿಲ್ಲ ಎಂದು ಕೆ.ಆರ್.ನಗರದ ತಿಮ್ಮೇಗೌಡ ದೂರು ನೀಡಿದರು. ಸಾರ್ವಜನಿಕರಿಂದ ದೂರು ಸ್ವೀಕರಿಸಿದ ಉಪಲೋಕಾಯುಕ್ತರು, ಸಂಬಂಧಿಸಿದ ಅಧಿಕಾರಿಗಳಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಲೋಕಾಯುಕ್ತ ಉಪ ನಿಬಂಧಕ ಚನ್ನಕೇಶವ ರೆಡ್ಡಿ, ಅಪರ ನಿಬಂಧಕ ಬಿ.ಶಿವಕುಮಾರ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿನೇಶ್, ಮೈಸೂರು ಜಿಲ್ಲಾ ಲೋಕಾಯುಕ್ತ ಎಸ್‌ಪಿ ಸುರೇಶ್ ಬಾಬು, ಜಿಪಂ ಸಿಇಒ ಕೆ.ಎಂ ಗಾಯತ್ರಿ, ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಮ್ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

ಪ್ಲಾನ್ ಅಪ್ರೂವಲ್‌ಗೆ ಹಣ ಫಿಕ್ಸ್ ಮಾಡಿದ್ದಾರೆ

ಕೆಆರ್‌ಎಸ್ ಪಕ್ಷದ ಎಂ.ಎಸ್.ಪ್ರವೀಣ್ ದೂರು ನೀಡಿ, ಮುಡಾದಲ್ಲಿ ನಕ್ಷೆ ಸೇರಿದಂತೆ ಇನ್ನಿತರ ಭೂ ವ್ಯವಹಾರದ ಪ್ರತಿ ಕೆಲಸಕ್ಕೂ ಮುಡಾ ಸಹಾಯಕ ಇಂಜಿನಿಯರ್ ಲಂಚ ಕೇಳುತ್ತಾರೆ. ಒಂದೊಂದು ಪ್ರಕರಣಕ್ಕೂ ಇಂತಿಷ್ಟೇ ಹಣ ನೀಡಬೇಕು ಎಂದು ಫಿಕ್ಸ್ ಮಾಡಿದ್ದಾರೆ. ನಾನು ಪ್ಲಾನ್ ಅಪ್ರೂವಲ್‌ಗಾಗಿ ಅರ್ಜಿ ಸಲ್ಲಿಸಿದ್ದೇನೆ. ಲಂಚ ಕೊಡದಿದ್ದಕ್ಕೆ ಅನಗತ್ಯವಾಗಿ ವಿಳಂಬ ಮಾಡುತ್ತಾರೆ ಎಂದು ಆರೋಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಉಪಲೋಕಾಯುಕ್ತರು, ನಿರ್ದಿಷ್ಟ ಪ್ರಕರಣ ಹಾಗೂ ಹಣಕ್ಕಾಗಿ ಡಿಮ್ಯಾಂಡ್ ಮಾಡಿದ ಸಹಾಯಕ ಇಂಜಿನಿಯರ್ ಹೆಸರು ನಮೂದಿಸಿ ದೂರು ನೀಡುವಂತೆ ಸಲಹೆ ನೀಡಿದರು.

ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ: ಕೇಂದ್ರ ಸಚಿವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ



ಬೆಂಗಳೂರು, ಜೂನ್ 17– ರಾಯಚೂರಿನಲ್ಲಿ ಏಮ್ಸ್ (All India Institute of Medical Sciences) ಸ್ಥಾಪಿಸುವಂತೆ ಒತ್ತಾಯಿಸಿ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರ ಬರೆದಿದ್ದಾರೆ. ರಾಯಚೂರಿನಲ್ಲಿ ಆರೋಗ್ಯ, ಶಿಕ್ಷಣದ ಮಟ್ಟ ಮತ್ತು ತಲಾ ಆದಾಯವು ಇತರ ಪ್ರದೇಶಗಳಿಗಿಂತ ಕಡಿಮೆ ಇದೆ. ವಿಪರೀತ ಹವಾಗುಣದಿಂದಾಗಿ ಭೌಗೋಳಿಕವಾಗಿಯೂ ಪ್ರತಿಕೂಲ ವಾತಾವರಣ ಹೊಂದಿದೆ. ಈ ಎಲ್ಲ ಕಾರಣಗಳಿಂದಾಗಿ ರಾಯಚೂರಿನಲ್ಲಿ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳ ಅಗತ್ಯವಿದೆ. ಏಮ್ಸ್ ಸ್ಥಾಪನೆಯಿಂದ ಈ ಭಾಗದಲ್ಲಿ ವಿಶ್ವದರ್ಜೆಯ ವೈದ್ಯಕೀಯ ಸೌಲಭ್ಯ ಒದಗಿಸಿದಂತಾಗುತ್ತದೆ ಎಂದು ಮುಖ್ಯಮಂತ್ರಿಗಳು ಪ್ರತಿಪಾದಿಸಿದ್ದಾರೆ. ಏಮ್ಸ್ ಸ್ಥಾಪನೆಗೆ ಈ ಭಾಗದ ಜನತೆ ಹಾಗೂ ಜನಪ್ರತಿನಿಧಿಗಳ ಬೇಡಿಕೆ ಹೆಚ್ಚುತ್ತಿದೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿ ನಮ್ಮ ಅತ್ಯಾದ್ಯತೆಯ ವಿಷಯವಾಗಿದೆ. ಆದ್ದರಿಂದ ಸಂಬಂಧಿಸಿದವರಿಗೆ ಈ ಕುರಿತು ಕ್ರಮ ವಹಿಸಲು ಸೂಚನೆ ನೀಡುವಂತೆ ಮುಖ್ಯಮಂತ್ರಿಗಳು ಕೇಂದ್ರ ಸಚಿವರನ್ನು ಕೋರಿದ್ದಾರೆ.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರೂ ಆದ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಎನ್.ಎಸ್. ಭೋಸರಾಜು ಅವರು ರಾಯಚೂರಿನಲ್ಲಿ ಏಮ್ಸ್ ಸ್ಥಾಪಿಸುವ ಬಗ್ಗೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಇತ್ತೀಚೆಗೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದರು. ಅದರಂತೆ ಮುಖ್ಯಮಂತ್ರಿಯವರು ಕೇಂದ್ರ ಸಚಿವರಿಗೆ ಪತ್ರ ಬರೆದಿದ್ದಾರೆ.

ಆರು ತಿಂಗಳ ಉಚಿತ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

ಮೈಸೂರು,ಜೂ.17– ಬೆಂಗಳೂರಿನ ಎಲೆಕ್ಟ್ರಾನಿಕ್ಸ್ ಸಿಟಿಯಲ್ಲಿನ ಅಡ್ವಾನ್ಸ್ ಕಂಪ್ಯೂಟಿಂಗ್ ಅಭಿವೃದ್ಧಿ ಕೇಂದ್ರ ಸಂಸ್ಥೆಯವರು ಪರಿಶಿಷ್ಟ ಜಾತಿ, ವರ್ಗದ BE/B.Tech/B.Sc/BCA ಹಾಗೂ (MCA/MSC) ಪದವೀಧರರಿಗೆ 6 ತಿಂಗಳ ಡಿಪ್ಲೋಮಾ ಕೋರ್ಸ್ ಅನ್ನು ಉಚಿತವಾಗಿ ನೀಡುತ್ತಿದ್ದಾರೆ ಹಾಗೂ ಸದರಿ ಕೋರ್ಸ್ ಅವಧಿಯಲ್ಲಿ ಮಾಸಿಕ 10 ಸಾವಿರ ಶಿಷ್ಯವೇತನ ನೀಡುವುದಲ್ಲದೇ ವಿಫುಲ ಉದ್ಯೋಗಾವಕಾಶಗಳನ್ನು ಸಹ ನೀಡಲಾಗುವುದು ಎಂದು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ Coordinator c-HUK c-huk@cdac,in: ಅಥವಾ ದೂ.+91–80–28523300 ನ್ನು ಸಂಪರ್ಕಿಸಬಹುದು.

ನೀರಾವರಿ ಪಂಪ್‌ಸೆಟ್‌ಗೆ 7 ತಾಸು ನಿರಂತರ ವಿದ್ಯುತ್ ಪೂರೈಸಿ

ಗ್ರಾಹಕರ ಸಂಪರ್ಕ ಸಭೆಯಲ್ಲಿ ಸೆಸ್ಕ್ ಅಧಿಕಾರಿಗಳಿಗೆ ವರುಣ ಗ್ರಾಮಸ್ಥರ ಆಗ್ರಹ





ಮೈಸೂರು, ಜೂ.17(ಆರ್‌ಕೆ)–ನೀರಾವರಿ ಪಂಪ್‌ಸೆಟ್‌ಗಳಿಗೆ ದಿನದ 7 ಗಂಟೆ ನಿರಂತರ ವಿದ್ಯುತ್ ಸರಬರಾಜು ಮಾಡಿ ಎಂದು ಮೈಸೂರು ತಾಲೂಕು ವರುಣ ಗ್ರಾಮದ ರೈತರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್)ದ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಸೆಸ್ಕ್ ವತಿಯಿಂದ ವರುಣ ಗ್ರಾಮದ ಡಾ. ಅಂಬೇಡ್ಕರ್ ಭವನದಲ್ಲಿ ಇಂದು ಏರ್ಪಡಿಸಿದ್ದ ವಿದ್ಯುತ್ ಗ್ರಾಹಕರ ಸಂಪರ್ಕ ಸಭೆಯಲ್ಲಿ ಪಾಲ್ಗೊಂಡಿದ್ದ ರೈತರು, ಗ್ರಾಮಸ್ಥರು ತಮ್ಮ ಜಮೀನುಗಳಲ್ಲಿ ಅಳವಡಿಸಿರುವ ಪಂಪ್‌ಸೆಟ್‌ಗಳಿಗೆ ಸಮರ್ಪಕ ಹಾಗೂ ನಿಗದಿತ ಸಮಯದಲ್ಲಿ ವಿದ್ಯುತ್ ಪೂರೈಕೆಯಾಗದಿರುವುದರಿಂದ ಅದನ್ನೇ ನಂಬಿಕೊಂಡು ಮಾಡಿದ ಬೆಳೆ ಒಣಗುತ್ತಿದೆ. ಕಡೆಗೆ ಬೇಸಾಯಕ್ಕೆ ಖರ್ಚು ಮಾಡಿದಷ್ಟು ಹಣವೂ ಸಿಗುವುದಿಲ್ಲ ಎಂದು ತಮ್ಮ ಅಳಲು ತೋಡಿಕೊಂಡರು. ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಜಯವಿಭವ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವರುಣ ಗ್ರಾಮ ಪಂಚಾಯ್ತಿ ಅಧ್ಯಕ್ಷ ಪ್ರಭಾಕರ್, ಉಪಾಧ್ಯಕ್ಷ ದೇವಣ್ಣ ಅವರೂ ರೈತರು ಅನುಭವಿಸುತ್ತಿರುವ ಸಮಸ್ಯೆಯನ್ನು ಅಧಿಕಾರಿಗಳಿಗೆ ಮನವರಿಕೆ ಮಾಡಿಸಿದರು. ನೀರಾವರಿ ಪಂಪ್‌ಸೆಟ್‌ಗಳಿಗೆ ನಿಗದಿತ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡಿದರೆ ರೈತರು ಹೋಗಿ ಜಮೀನಿಗೆ ನೀರು ಹಾಯಿಸುತ್ತಾರೆ. ಈಗ ಬೇಸಿಗೆ ಕಾಲವಾದ್ದರಿಂದ ಸರಿಯಾಗಿ ನೀರು ಕೊಡದಿದ್ದರೆ ಕಷ್ಟಪಟ್ಟು ಬೆಳೆದ ಬೆಳೆ ಒಣಗುತ್ತದೆ ಎಂದರು. ಗ್ರಾಮದ ಬೀದಿ ದೀಪಗಳಿಗೆ ಅಳವಡಿಸಿರುವ ವಿದ್ಯುತ್ ಕಂಬಗಳು ಬೀಳುವ ಹಂತದಲ್ಲಿವೆ. ಅವುಗಳನ್ನು ಬದಲಿಸಬೇಕು. ಜಮೀನುಗಳಲ್ಲಿ ಮಧ್ಯಂತರ ಕಂಬಗಳನ್ನು ಸ್ಥಳಾಂತರಿಸುವ ಅಗತ್ಯವಿದೆ. ಪೂರ್ವ ನಿಗದಿಯಂತೆ ನೀರಾವರಿ ಪಂಪ್‌ಸೆಟ್‌ಗಳಿಗೆ ಪ್ರತೀ ದಿನ 7 ಗಂಟೆ ನಿರಂತರ ವಿದ್ಯುತ್ ಪೂರೈಸಲು ಕ್ರಮ ವಹಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದರು. ಮನೆಗಳ ಈ ತಿಂಗಳ ವಿದ್ಯುತ್ ಬಿಲ್‌ಗಳು ದುಬಾರಿ ಬಂದಿವೆ. ರೈತಾಪಿ ಜನರಿಗೆ ಈ ರೀತಿ ಬರೆ ಹಾಕಿದರೆ ನಾವು ಎಲ್ಲಿಂದ ತಂದು ಕಟ್ಟಬೇಕು ಎಂದು ಪ್ರಶ್ನಿಸಿದ ಗೃಹ ಬಳಕೆದಾರರು, ಈ ಬಗ್ಗೆ ಸರ್ಕಾರದೊಂದಿಗೆ ಮಾತನಾಡಿ, ಕಡಿಮೆ ಮಾಡಿಸಿ ಎಂದು ಕೇಳಿಕೊಂಡರು.

ಅದಕ್ಕೆ ಪ್ರತಿಕ್ರಿಯೆ ನೀಡಿದ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ ಅವರು, ವಿದ್ಯುತ್ ದರ ಪರಿಷ್ಕರಣೆ ಏಪ್ರಿಲ್ ತಿಂಗಳಿಂದಲೇ ಜಾರಿಗೆ ಬರುವಂತೆ ಮೇ 30ರಂದು ಆದೇಶ ಹೊರಡಿಸಲಾಗಿದೆ. ವಿಧಾನಸಭಾ ಚುನಾವಣೆ ಇದ್ದ ಕಾರಣ ಅನುಷ್ಠಾನಗೊಳಿಸದ ಕಾರಣ, ಆ ತಿಂಗಳ ಹೆಚ್ಚುವರಿ ಶುಲ್ಕವನ್ನು ಪ್ರಸಕ್ತ ತಿಂಗಳ ಬಿಲ್‌ನೊಂದಿಗೆ ಸೇರಿಸಿರುವುದರಿಂದ ನಿಮಗೆ ದುಬಾರಿ ವಿದ್ಯುತ್ ಬಿಲ್ ಎನಿಸಿದೆ. ಮುಂದಿನ ತಿಂಗಳಿಂದ ಅದು ಸರಿಹೋಗಲಿದೆ ಎಂದರು.

ಜೊತೆಗೆ ಈಗ 200 ಯೂನಿಟ್ ವಿದ್ಯುತ್ ಉಚಿತವಾಗಿ ಪೂರೈಸುತ್ತಿರುವುದರಿಂದ ನಿಯಮಿತವಾಗಿ ಬಳಸುವ ಗ್ರಾಹಕರು ಬಿಲ್ ಪಾವತಿಸುವ ಅಗತ್ಯವಿರುವುದಿಲ್ಲ. ಗೃಹ ಜ್ಯೋತಿ ಯೋಜನೆಗೆ ನೋಂದಣಿ ಮಾಡಿಸಿಕೊಳ್ಳುವಂತೆಯೂ ಅವರು ಸಾರ್ವಜನಿಕರಿಗೆ ತಿಳಿಸಿದರು. ಸಭೆಯಲ್ಲಿ 150ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರಾದರೂ ದೂರು ನೀಡಿದವರು 27 ಮಂದಿ.

ಸೆಸ್ಕ್ ಚೀಫ್ ಇಂಜಿನಿಯರ್ ಪದ್ಮಾವತಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಸುನಿಲ್ ಕುಮಾರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಪೂರ್ಣಚಂದ್ರ ತೇಜಸ್ವಿ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಜಗದೀಶ್, ವರುಣ ಗ್ರಾಮ ಪಂಚಾಯ್ತಿ ಸದಸ್ಯ ಮಿಲ್ಟ್ರಿ ಮಹದೇವ, ಯಡಕೊಳ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಪ್ರಭಾವತಿ, ಎಪಿಎಂಸಿ ಮಾಜಿ ಸದಸ್ಯ ಚಿಕ್ಕ ಜವರಪ್ಪ, ರೈತ ಮುಖಂಡರಾದ ಕೃಷ್ಣೇಗೌಡ, ರಾಜು ಹಾಗೂ ಇತರರು ಜನ ಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದರು.

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಸಂಸ್ಥಾನದ ಆರೋಗ್ಯ ಪರಿಸ್ಥಿತಿ, ಇಂಗ್ಲೆಂಡ್‌ಗಿಂತಲೂ ಉತ್ತಮವಾಗಿತ್ತು

- ಮೈಸೂರು ರಾಜವಂಶಸ್ಥ ಯದುವೀರ್ ಅಭಿಮತ
- ಮಕ್ಕಳ ಆರೋಗ್ಯ ಸಮಸ್ಯೆ ಸಂಬಂಧಿತ ರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ
- ಸ್ವಾತಂತ್ರ್ಯಕ್ಕೆ ಮುನ್ನವೇ ನಿಮ್ಹಾನ್ಸ್, ಮೈಸೂರು ಮೆಡಿಕಲ್ ಕಾಲೇಜು, ಮಿಂಟೋ, ಚೆಲುವಾಂಬ, ವಿಕ್ಟೋರಿಯಾ ಸ್ಥಾಪನೆ

ಮೈಸೂರು, ಜೂ.17(ಎಂಕೆ)– ಸ್ವಾತಂತ್ರ್ಯ ಪೂರ್ವದಲ್ಲಿ ಇಂಗ್ಲೆಂಡ್‌ಗಿಂತ ಮೈಸೂರು ಸಂಸ್ಥಾನದಲ್ಲಿನ ಆರೋಗ್ಯ ಪರಿಸ್ಥಿತಿ ಉತ್ತಮವಾಗಿತ್ತು. ಇದಕ್ಕೆ ನಿಮ್ಹಾನ್ಸ್, ವಿಕ್ಟೋರಿಯಾ, ಮಿಂಟೋ ಕಣ್ಣಿನ ಆಸ್ಪತ್ರೆ, ಮೈಸೂರು ಮೆಡಿಕಲ್ ಕಾಲೇಜು ಪ್ರಮುಖ ಉದಾಹರಣೆಯಾಗಿವೆ ಎಂದು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸ್ಮರಿಸಿದರು.

ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಇಂಡಿಯನ್ ಸೊಸೈಟಿ ಆಫ್ ಪೀಡಿಯಾಟ್ರಿಕ್ ಗ್ಯಾಸ್ಟ್ರೋಎಂಟರಾಲಜಿ ಹೆಪಟಾಲಜಿ ಮತ್ತು ನ್ಯೂಟ್ರಿಷನ್(ಐಎಸ್‌ಪಿಜಿಹೆಚ್‌ಎಎನ್) ವತಿಯಿಂದ ಆಯೋಜಿಸಿರುವ 2 ದಿನಗಳ ಮಧ್ಯಾವಧಿ ರಾಷ್ಟ್ರೀಯ ಸಮ್ಮೇಳನ (ispghancon-2023 mid-term)ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ಪೂರ್ವದಲ್ಲೇ ಮೈಸೂರು ಸಂಸ್ಥಾನ ಆರೋಗ್ಯ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದೆ ಎಂದರು.

ಆರೋಗ್ಯ ಕ್ಷೇತ್ರಕ್ಕೆ ಮೈಸೂರು ಸಂಸ್ಥಾನದ ಕೊಡುಗೆ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕೊಡುಗೆ ಕುರಿತು ಸಣ್ಣ ಅಧ್ಯಯನ ನಡೆಸಿದಾಗ ಮೊದಲು ತಿಳಿದದ್ದು ಮಾನಸಿಕ ರೋಗಿಗಳಿಗೆ ನಿರ್ಮಿಸಿದ್ದ ನಿಮ್ಹಾನ್ಸ್ ಆಸ್ಪತ್ರೆ. ನಂತರ ಮೈಸೂರು ಮೆಡಿಕಲ್ ಕಾಲೇಜು, ಮಿಂಟೋ ಕಣ್ಣಿನ ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ಇತ್ಯಾದಿಗಳಿವೆ. ಈ ಎಲ್ಲಾ ಸಂಸ್ಥೆಗಳಲ್ಲಿ ಅಧ್ಯಯನ ಮತ್ತು ಅಭ್ಯಾಸ ನಡೆಸಿರುವ ಲಕ್ಷಾಂತರ ಮಂದಿ ದೇಶ–ವಿದೇಶಗಳಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ ಎಂದು ನಾಮಕರಣಗೊಳ್ಳುವುದಕ್ಕೂ ಮೊದಲು ಮೈಸೂರು ಸಂಸ್ಥಾನವೆಂದು ಕರೆಯಲಾಗುತ್ತಿತ್ತು. ಇದರಿಂದ ಮೈಸೂರು ಹಲವು ವಸ್ತುಗಳ ಬ್ರ್ಯಾಂಡ್ ಆಗಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್(ಭಾರತೀಯ ವಿಜ್ಞಾನ ಸಂಸ್ಥೆ) ಸಂಸ್ಥೆ ಸ್ಥಾಪಿಸಿದ್ದ ಮೈಸೂರು ಒಡೆಯರು, ಬನಾರಸ್ ವಿಶ್ವವಿದ್ಯಾನಿಲಯ ಕುಲಪತಿಗಳಾಗಿಯೂ ಕೆಲಸ ಮಾಡಿದ್ದಾರೆ ಎಂದು ತಿಳಿಸಿದರು.

ಯೋಗ ಕೊಡುಗೆ: ಯೋಗಪಟು ಕೃಷ್ಣಮಾಚಾರ್ ಅವರನ್ನು ಮೈಸೂರಿಗೆ ಕರೆತಂದು ಯೋಗಾಭ್ಯಾಸದ ಹಲವಾರು ಭಂಗಿಗಳನ್ನು ಕಲಿಸಲಾಯಿತು. ಮುಖ್ಯವಾಗಿ ಸೂರ್ಯನಮಸ್ಕಾರ ಮೈಸೂರಿನದ್ದಾಗಿದೆ. ಅಂತರರಾಷ್ಟ್ರೀಯ ಯೋಗ ದಿನಾಚರಣೆ ಮೂಲಕ ಮೈಸೂರಿನ ಕೊಡುಗೆ ಪ್ರಪಂಚಕ್ಕೆ ತಿಳಿಯುವಂತಾಗಿದೆ. ಈ ಮೂಲಕ ಆರೋಗ್ಯ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಲಾಗಿದೆ ಎಂದರು.

ಸಾಮಾನ್ಯವಾಗಿ ಆಧುನಿಕ ಔಷಧಿಗಳ ಖರ್ಚು ಜಾಸ್ತಿ ಎಂಬುದನ್ನರಿತು ಆಧುನಿಕತೆಯ ಜೊತೆಗೆ ಪಾರಂಪರಿಕ ಚಿಕಿತ್ಸೆಗೆ ಆದ್ಯತೆ ನೀಡುವ ಸಲುವಾಗಿ ಆಯುರ್ವೇದ ಕಾಲೇಜನ್ನು ಸ್ಥಾಪಿಸಲಾಯಿತು. ಒಂದಾನೊಂದು ಕಾಲದಲ್ಲಿ ಇಂಗ್ಲೆಂಡ್‌ನಲ್ಲಿದ್ದ ಆರೋಗ್ಯ ಪರಿಸ್ಥಿತಿಗಿಂತ, ಮೈಸೂರಿನಲ್ಲಿದ್ದ ಆರೋಗ್ಯ ಪರಿಸ್ಥಿತಿ ಉತ್ತಮವಾಗಿತ್ತು. ಇದಕ್ಕೆಲ್ಲಾ ಕಾರಣ ಮೈಸೂರು ಒಡೆಯರು ಮತ್ತು ಅವರ ಜನಪರ ಆಲೋಚನೆಗಳಾಗಿವೆ ಎಂದು ತಿಳಿಸಿದರು.

ಆರೋಗ್ಯ ಜ್ಞಾನ: ಮುಂದಿನ ಪೀಳಿಗೆಯ ಆರೋಗ್ಯ ದೃಷ್ಟಿಯಿಂದ ಪ್ರತಿಯೊಬ್ಬರು ತಮ್ಮ ಆರೋಗ್ಯ ಕಾಪಾಡಿಕೊಳ್ಳುವ ಕುರಿತು ಜ್ಞಾನ ಪಡೆಯುವುದು ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಇಂಡಿಯನ್ ಸೊಸೈಟಿ ಆಫ್ ಪೀಡಿಯಾಟ್ರಿಕ್ ಗ್ಯಾಸ್ಟ್ರೋಎಂಟರಾಲಜಿ ಹೆಪಟಾಲಜಿ ಮತ್ತು ನ್ಯೂಟ್ರಿಷನ್ ಆಯೋಜಿಸಿರುವ 2 ದಿನಗಳ ಸಮ್ಮೇಳನ ಉಪಯುಕ್ತವಾಗಿದೆ. ಇಂತಹ ಆರೋಗ್ಯ ಸಂಬಂಧಿತ ಸಮ್ಮೇಳನಗಳು ಹೆಚ್ಚೆಚ್ಚು ನಡೆಯಬೇಕು ಎಂದು ಆಶಿಸಿದರು.

ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಮಾಜಿ ಅಧ್ಯಕ್ಷ ಹಾಗೂ ವೈದ್ಯಕೀಯ ಶಿಕ್ಷಣ ತಜ್ಞ ಸಂತೋಷ್ ಸೋನ್ಸ್ ಮಾತನಾಡಿ, ಇಂಡಿಯನ್ ಸೊಸೈಟಿ ಆಫ್ ಪೀಡಿಯಾಟ್ರಿಕ್ ಗ್ಯಾಸ್ಟ್ರೋಎಂಟರಾಲಜಿ ಹೆಪಟಾಲಜಿ ಮತ್ತು ನ್ಯೂಟ್ರಿಷನ್(ಐಎಸ್‌ಪಿಜಿಹೆಚ್‌ಎಎನ್) ವೇಗವಾಗಿ ದೇಶದ ಉದ್ದಗಲಕ್ಕೂ ವ್ಯಾಪಿಸುತ್ತಿದ್ದು, ಪರಿಣಿತಿ ಹೊಂದಿರುವ ಮಕ್ಕಳ ತಜ್ಞ ವೈದ್ಯರನ್ನು ಒಳಗೊಂಡಿದೆ. ಮಕ್ಕಳಲ್ಲಿ ಕರುಳು, ಯಕೃತ್ತು ಮತ್ತು ಮೇದೋಜ್ಜೀರಕ ಗ್ರಂಥಿ ಮತ್ತು ಪೌಷ್ಟಿಕ ಆಹಾರದ ಕೊರತೆಯಿಂದ ಉಂಟಾಗಬಹುದಾದ ಕಾಯಿಲೆಗಳ ಬಗ್ಗೆ ಸಂಶೋಧನೆ ಹಾಗೂ ಸಲಹೆಗಳನ್ನು ನೀಡುತ್ತಿದೆ ಎಂದರು.

ಗುಣಮಟ್ಟದ ಚಿಕಿತ್ಸೆ: ದೇಶದಲ್ಲಿನ ಖಾಸಗಿ ಆಸ್ಪತ್ರೆಗಳಲ್ಲಿ ನೀಡುವಂತಹ ಗುಣಮಟ್ಟದ ಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿಯೂ ನೀಡುವಂತಾಗಬೇಕು. ಇದಕ್ಕಾಗಿ ಬೇಕಾದ ವಾತಾವರಣವನ್ನು ಸರ್ಕಾರ ನಿರ್ಮಿಸಬೇಕು ಎಂದು ಮನವಿ ಮಾಡಿದರಲ್ಲದೆ ಕೊರೊನಾ ಸಂಕಷ್ಟ ಪರಿಸ್ಥಿತಿಯಲ್ಲಿ ದೇಶದ ಮುಂದಿನ ಆಸ್ತಿಯಾದ ಮಕ್ಕಳ ರಕ್ಷಣೆಯಲ್ಲಿ ವೈದ್ಯರ ಪಾತ್ರ ದೊಡ್ಡದು. ಮಕ್ಕಳಲ್ಲಿ ಕೊರೊನಾ ಸೋಂಕು ಹರಡದಂತೆ ಮುಂಜಾಗ್ರತೆಯಿಂದ ಕೆಲಸ ಮಾಡಿದ್ದಾರೆ ಎಂದು ಶ್ಲಾಘಿಸಿದರು. ಐಎಸ್‌ಪಿಜಿಹೆಚ್‌ಎಎನ್ ಅಧ್ಯಕ್ಷೆ ನೀಲಂ ಮೋಹನ್, ಡಾ.ಎಸ್.ಕೆ.ಯಾಚಾ, ಮೈಸೂರಿನ ಐಎಪಿ ಅಧ್ಯಕ್ಷ ಎಸ್.ಆರ್.ರವೀಶ್, ಹಿರಿಯ ಮಕ್ಕಳ ತಜ್ಞ ಡಾ.ಎಸ್.ಎನ್.ಮೋತಿ, ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಅತಿರಾ ರವೀಂದ್ರನಾಥ್ ಮತ್ತಿತರರಿದ್ದರು.



ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಇಂಡಿಯನ್ ಸೊಸೈಟಿ ಆಫ್ ಪೀಡಿಯಾಟ್ರಿಕ್ ಗ್ಯಾಸ್ಟ್ರೋಎಂಟರಾಲಜಿ ಹೆಪಟಾಲಜಿ ಮತ್ತು ನ್ಯೂಟ್ರಿಷನ್(ಐಎಸ್‌ಪಿಜಿಹೆಚ್‌ಎಎನ್) ಆಯೋಜಿಸಿರುವ 2 ದಿನಗಳ ಮಧ್ಯಾವಧಿ ರಾಷ್ಟ್ರೀಯ ಸಮ್ಮೇಳನವನ್ನು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿರುವ ಕಾಯಿಲೆಗಳ ಕುರಿತು ಚರ್ಚೆ, ಸಂವಾದ...

ಉದ್ಘಾಟನಾ ಕಾರ್ಯಕ್ರಮಕ್ಕೂ ಮುನ್ನ ನುರಿತ ಮಕ್ಕಳ ವೈದ್ಯರಿಂದ ಪ್ರಸ್ತುತ ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಸಮಸ್ಯೆಗಳು, ಕಾಯಿಲೆಗಳ ಕುರಿತು ಗಂಭೀರವಾಗಿ ಚರ್ಚಿಸಲಾಯಿತು. ಕರುಳಿನ ಕ್ಷಯರೋಗ, ಅಲರ್ಜಿ, ಯಕೃತ್ತಿನ ರೋಗ, ಜೀರ್ಣಕ್ರಿಯೆಯಲ್ಲಿ ತೊಂದರೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಿ, ಪರಿಹಾರವಾಗಿ ಯಾವ ಬಗೆಯ ಚಿಕಿತ್ಸೆಗಳನ್ನು ನೀಡಿದರೆ ಸೂಕ್ತ ಎಂಬ ಮಾರ್ಗೋಪಾಯಗಳನ್ನು ತಿಳಿಸಲಾಯಿತು.

ಕೊಡಗು ಜಿಲ್ಲೆಯಲ್ಲಿ 108 ಸರ್ಕಾರಿ ಹುದ್ದೆ ಖಾಲಿ

ಜನಸಾಮಾನ್ಯರ ಕೆಲಸಕ್ಕೆ ಅಡ್ಡಿ, ಜಿಲ್ಲೆಯ ಅಭಿವೃದ್ಧಿ ಕುಂಠಿತ



ಮಡಿಕೇರಿ,ಜೂ.17– ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ 104 ಗ್ರಾಮ ಪಂಚಾಯ್ತಿಗಳಿದ್ದು, ಇವುಗಳಲ್ಲಿ ಖಾಲಿ ಹುದ್ದೆಗಳ ಭರ್ತಿಯಾಗದೇ ಶ್ರೀ ಸಾಮಾನ್ಯರ ಕೆಲಸ ಕಾರ್ಯಗಳು ಸೇರಿದಂತೆ ಅಗತ್ಯ ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ನಡೆಯದೆ ಸ್ಥಬ್ಧವಾಗಿದೆ ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯ್ತಿ ನೌಕರರ ಸಂಘದ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ಪಿ.ಆರ್. ಭರತ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಗ್ರಾಮ ಪಂಚಾಯ್ತಿಗಳಲ್ಲಿ ಡಾಟಾ ಎಂಟ್ರಿ ಆಪರೇಟರ್, ಬಿಲ್ ಕಲೆಕ್ಟರ್, ಸ್ವಚ್ಛತಾ ಸಿಬ್ಬಂದಿ, ಅಟೆಂಡರ್, ನೀರು ಗಂಟಿಗರು ಸೇರಿದಂತೆ ಸುಮಾರು 180 ಹುದ್ದೆಗಳು ಖಾಲಿ ಇವೆ. ಇವುಗಳನ್ನು ಶೀಘ್ರ ಭರ್ತಿ ಮಾಡುವ ಮೂಲಕ, ಪಂಚಾಯ್ತಿ ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.

23 ಪಿಡಿಓ ಹುದ್ದೆ ಖಾಲಿ: ಜಿಲ್ಲಾ ವ್ಯಾಪ್ತಿಯ ಗ್ರಾಮ ಪಂಚಾಯ್ತಿಗಳಲ್ಲಿ 23 ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ(ಪಿಡಿಓ) ಹುದ್ದೆಗಳು ಖಾಲಿ ಇವೆ. ಇದರಿಂದ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪಿಡಿಓಗಳ ಹೆಚ್ಚುವರಿಯಾಗಿ ಇತರೆ ಗ್ರಾಮ ಪಂಚಾಯ್ತಿಗಳ ಜವಾಬ್ದಾರಿಯನ್ನು ನಿರ್ವಹಿಸುವ ಪರಿಸ್ಥಿತಿ ಇದೆಯೆಂದು ತಿಳಿಸಿದರು.

ದೊರಕದ ಬಡ್ತಿ: ಕೆಲ ಗ್ರಾಮ ಪಂಚಾಯ್ತಿಗಳಲ್ಲಿ ಹತ್ತರಿಂದ ಇಪ್ಪತ್ತು ವರ್ಷ ಬಿಲ್ ಕಲೆಕ್ಟರ್‌ಗಳಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿದ್ದಾರೆ. ಆದರೆ, ಇದುವರೆಗೂ ಅವರಿಗೆ ಬಡ್ತಿ ದೊರೆತಿಲ್ಲ. ಅದಷ್ಟು ಶೀಘ್ರ ಪಂಚಾಯ್ತಿಗಳಲ್ಲಿ ಹೆಚ್ಚಿನ ಸೇವೆ ಸಲ್ಲಿಸಿದ ಸಿಬ್ಬಂದಿಗಳಿಗೆ ಬಡ್ತಿ ನೀಡುವ ಕೆಲಸ ಆಗಬೇಕೆಂದು ಪಿ.ಆರ್. ಭರತ್ ಒತ್ತಾಯಿಸಿದರು. ಜಿಲ್ಲೆಯ ಗ್ರಾಮ ಪಂಚಾಯ್ತಿಗಳಲ್ಲಿ ಲೆಕ್ಕ ಸಹಾಯಕರ 5 ಹುದ್ದೆ, ಕಾರ್ಯದರ್ಶಿಗಳ 8 ಹುದ್ದೆ ಖಾಲಿ ಇದ್ದಿವೆ ಎಂದು ಮಾಹಿತಿ ನೀಡಿದರು.

ಡಾಟಾ ಸಿಬ್ಬಂದಿ ಇಕ್ಕಟ್ಟು: ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಹಲವಾರು ಕಾರಣಗಳ ಹಿನ್ನೆಲೆ ಇತರೆ ಜಿಲ್ಲೆಗಳಂತೆ ಕೆಲಸಕ್ಕಾಗಿ ಜನರು ಹೆಸರು ನೋಂದಾಯಿಸಿಕೊಳ್ಳುತ್ತಿಲ್ಲ. ಆದರೆ, ಯೋಜನೆ ಅನುಷ್ಠಾನಕ್ಕೆ ಮೇಲಧಿಕಾರಿಗಳ ಒತ್ತಡಗಳ ಹಿನ್ನೆಲೆ, ನಿಯಮಗಳನ್ನು ಮೀರಿ ನಡೆಯುತ್ತದೆ. ಈ ಹಂತದಲ್ಲಿ ಉದ್ಯೋಗ ಖಾತ್ರಿ ಯೋಜನೆ ಕೆಲಸದಲ್ಲಿ ಸಹಿ ಅಥವಾ ತಂಬು ಹಾಕುವ ಅಧಿಕಾರ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮಾತ್ರ ಇದ್ದರೂ, ಇದರ ತನಿಖೆ ಬರುವ ಓಂಬುಡ್ಸ್‌ಮನ್ ಅಧಿಕಾರಿಗಳು ಡಾಟಾ ಎಂಟ್ರಿ ಸಿಬ್ಬಂದಿಗಳಿಗೆ ದಂಡ ವಿಧಿಸುವ ಕಾರ್ಯ ನಡೆಯುತ್ತಿದೆ. ಯಾವುದೇ ಅಧಿಕಾರವಿಲ್ಲದ ಡಾಟಾ ಎಂಟ್ರಿಗಳಿಗೆ ದಂಡ ಹಾಕುವುದು, ತನಿಖೆ ಒಳಪಡಿಸುವುದನ್ನು ಕೂಡಲೇ ನಿಲ್ಲಿಸಬೇಕೆಂದು ಒತ್ತಾಯಿಸಿದರು.

ಸಿಬ್ಬಂದಿಗಳ ಮಾಹಿತಿ ಒದಗಿಸಿ: ಗ್ರಾಮ ಪಂಚಾಯ್ತಿಗಳ ವಿವಿಧ ಹುದ್ದೆಗಳಲ್ಲಿ 2017ರ ಜನವರಿ 31ರ ಒಳಗಿನಿಂದ ದುಡಿಯುತ್ತಿರುವ ಸಿಬ್ಬಂದಿಗಳನ್ನು ಏಕ ಕಾಲದಲ್ಲಿ ಅನುಮೋದನೆ ನೀಡಲು ಸರ್ಕಾರ ಉದ್ದೇಶಿಸಿದೆ. ಇದಕ್ಕಾಗಿ ಪಂಚಾಯ್ತಿಗಳಲ್ಲಿ ಎಷ್ಟು ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ ಎನ್ನುವ ಮಾಹಿತಿ ನೀಡುವಂತೆ ಆರ್‌ಡಿಪಿ ಕಚೇರಿಯಿಂದ ಆದೇಶ ನೀಡಿದ್ದರೂ, ಜಿಲ್ಲೆಯ ಪಂಚಾಯ್ತಿಗಳು ಈ ಬಗ್ಗೆ ಮಾಹಿತಿ ನೀಡಿಲ್ಲ. ತಕ್ಷಣ ಈ ಮಾಹಿತಿಯನ್ನು ಆಯಾ ಪಂಚಾಯ್ತಿಗಳು ನೀಡಬೇಕು, ಇಲ್ಲವಾದಲ್ಲಿ ಅಲ್ಲಿನ ಸಿಬ್ಬಂದಿಗಳು ಅನ್ಯಾಯಕ್ಕೆ ಒಳಗಾಗುತ್ತಾರೆಂದು ಭರತ್ ಕಳವಳ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ನವೀನ್ ಕುಮಾರ್, ಮಡಿಕೇರಿ ತಾಲೂಕು ಪದಾಧಿಕಾರಿ ಬಿ.ಕೆ. ಜತ್ತಪ್ಪ, ಕುಶಾಲನಗರ ತಾಲೂಕು ಪದಾಧಿಕಾರಿ ಹೆಚ್.ಎಂ.ದಿನೇಶ್ ಉಪಸ್ಥಿತರಿದ್ದರು.

ಪ್ರತಿಭಟನೆ ಎಚ್ಚರಿಕೆ

ಈ ಎಲ್ಲಾ ವಿಚಾರಗಳಿಗೆ ಸಂಬಂಧಿಸಿದಂತೆ ನೂತನ ಸರ್ಕಾರಕ್ಕೆ ಮತ್ತು ಜಿಲ್ಲೆಯ ನೂತನ ಶಾಸಕರಿಗೆ ಮಾಹಿತಿಯನ್ನು ನೀಡಲಾಗುತ್ತದೆ. ಈ ಬಗ್ಗೆ ಸೂಕ್ತ ಸ್ಪಂದನ ದೊರಕದಿದ್ದಲ್ಲಿ ಜಿಲ್ಲಾ ಪಂಚಾಯ್ತಿ ಕಚೇರಿ ಮುಂದೆ ತೀವ್ರ ರೀತಿಯ ಹೋರಾಟವನ್ನು ರೂಪಿಸಲಾಗುವುದು ಎಂದು ಭರತ್ ಎಚ್ಚರಿಸಿದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಜಾಥಾ



ಮಡಿಕೇರಿ, ಜೂ.17– ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಯೋಗ ಜಾಥಾವು ನಗರದ ಪ್ರಮುಖ ರಸ್ತೆಯಲ್ಲಿ ಶನಿವಾರ ನಡೆಯಿತು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ನಗರದ ಗಾಂಧಿ ಮೈದಾನದಲ್ಲಿ ಜಾಥಾಗೆ ಚಾಲನೆ ನೀಡಿ ಮಾತನಾಡಿ, ಪ್ರತಿಯೊಬ್ಬರ ಆರೋಗ್ಯಕ್ಕೆ ಯೋಗ ಸಹಕಾರಿಯಾಗಿದೆ ಎಂದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ, ಜಿಲ್ಲಾ ಯೋಗ ಸಂಘಟನ್ ಸಂಯುಕ್ತ ಆಶ್ರಯದಲ್ಲಿ 2023ರ 9ನೇ ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ನಗರದ ಗಾಂಧಿ ಮೈದಾನದಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದವರೆಗೆ ಜಾಥಾ ನಡೆಯಿತು.


ಜೂ.21 ರಂದು ನಡೆಯಲಿರುವ ಯೋಗ ದಿನಾಚರಣೆಯಲ್ಲಿ ಶಾಲಾ ಮಕ್ಕಳು, ಎಲ್ಲಾ ಇಲಾಖೆಯ ಸಿಬ್ಬಂದಿಗಳು ಪಾಲ್ಗೊಳ್ಳುವಂತೆ ಡಾ.ಬಿ.ಸಿ.ಸತೀಶ ಹೇಳಿದರು.

ಈ ಬಾರಿಯ ಘೋಷವಾಕ್ಯ ವಸುದೈವ ಕುಟುಂಬಕಂ ಆಗಿರುವುದರಿಂದ ಪ್ರತಿಯೊಬ್ಬರೂ ಮನೆಯಲ್ಲಿಯೇ ಯೋಗದಲ್ಲಿ ಪಾಲ್ಗೊಳ್ಳುವಂತೆ ಡಿಸಿ ಹೇಳಿದರು.

ಜಾಥಾದಲ್ಲಿ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಜಿ.ಪಂ ಸಿಇಒ ಡಾ.ಎಸ್.ಆಕಾಶ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾ ದೇವಿ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ನಂಜುಂಡಯ್ಯ, ಪೌರಾಯುಕ್ತ ವಿಜಯ, ವೈದ್ಯಾಧಿಕಾರಿ ಡಾ.ರಾಜಾರಾಂ ಇತರರು ಪಾಲ್ಗೊಂಡಿದ್ದರು.

ಮುಕ್ತಾಯದ ಹಂತದಲ್ಲಿ ವಿ.ಪೇಟೆ ಮಿನಿ ವಿಧಾನಸೌಧ ಕಾಮಗಾರಿ

ಲಿಫ್ಟ್ ಸೌಲಭ್ಯ ಕಲ್ಪಿಸಲು ಸಾರ್ವಜನಿಕರ ಮನವಿ



ವಿರಾಜಪೇಟೆ ಜೂ.17– ವಿರಾಜಪೇಟೆಯ ಮಿನಿ ವಿಧಾನಸೌಧದ ಕಾಮಗಾರಿ ಮುಕ್ತಾಯದ ಹಂತಕ್ಕೆ ತಲುಪಿದ್ದು, ಶೀಘ್ರದಲ್ಲೇ ಉದ್ಘಾಟನೆಯಾಗಲಿದೆ ಈ ಕಟ್ಟಡಕ್ಕೆ ತಾಲೂಕಿನ ಎಲ್ಲಾ ಇಲಾಖೆಯ ಕಚೇರಿಗಳು ಸ್ಥಳಾಂತರಗೊಳ್ಳಲಿದ್ದು, ಸಾರ್ವಜನಿಕರು ಕಚೇರಿ ಅಲೆಯುವುದು ತಪ್ಪಲಿದೆ.

ಎರಡು ಮತ್ತು ಮೂರನೆ ಅಂತಸ್ತಿನಲ್ಲಿರುವ ಕಚೇರಿಗಳಿಗೆ ತೆರಳಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಲಿಫ್ಟ್ ಸೌಲಭ್ಯ ಒದಗಿಸಿ ಕೊಡುವಂತೆ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಪಟ್ಟಣದ ವಿದ್ಯಾನಗರದ ನಿವಾಸಿ ಯೋಗೇಶ್ ನಾಯ್ಡು ಹಾಗೂ ಸಾರ್ವಜನಿಕರು ಮನವಿ ಸಲ್ಲಿಸಿದ್ದಾರೆ. ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ನಾಯ್ಡು, ತಾಲೂಕು ಕೇಂದ್ರವಾದ ಸೆಸ್ಕಾಂ ಕಚೇರಿಗೆ ಬರುವಂಥ ವಿಕಲ ಚೇತನರಿಗಾಗಿ ರ್‍ಯಾಂಪ್ ವ್ಯವಸ್ಥೆ ಕಲ್ಪಿಸಿ ಕೊಡುವಂತೆ ಶಾಸಕರಿಗೆ ಮನವಿ ಮಾಡಿದರು. ವಿರಾಜಪೇಟೆ ನಗರದಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದ್ದು, ಬಡಜನರು ಸಭೆ ಸಮಾರಂಭಗಳನ್ನು ನಡೆಸಲು ಸರ್ಕಾರದ ಅನುದಾನದಲ್ಲಿ ಸಮುದಾಯ ಭವನ ನಿರ್ಮಿಸುವಂತೆ ಶಾಸಕರಿಗೆ ನೀಡಿದ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಮನವಿಗೆ ಶಾಸಕ ಎ.ಎಸ್. ಪೊನ್ನಣ್ಣ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಕೊಡವ ಬುಡಕಟ್ಟು ಜನಾಂಗದ ಅಧ್ಯಯನಕ್ಕೆ ಕ್ರಮ ಕೈಗೊಳ್ಳಿ

ಸಿಎಂ ಕಾನೂನು ಸಲಹೆಗಾರ ಪೊನ್ನಣ್ಣರಿಗೆ ಸಿಎನ್‌ಸಿ ಮನವಿ



ಮಡಿಕೇರಿ,ಜೂ.17– ಕೊಡವ ಬುಡಕಟ್ಟು ಜನಾಂಗದ ಅಧ್ಯಯನಕ್ಕೆ ಪೂರಕವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವಿರಾಜಪೇಟೆ ಕ್ಷೇತ್ರದ ನೂತನ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಅವರಿಗೆ ಮನವಿ ಪತ್ರ ಸಲ್ಲಿಸಿದೆ.

ಬೆಂಗಳೂರಿನ ಆರ್.ಟಿ.ನಗರದಲ್ಲಿರುವ ಶಾಸಕರ ಕಚೇರಿಯಲ್ಲಿ ಭೇಟಿಯಾದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರ ನೇತೃತ್ವದ ನಿಯೋಗ ಸಂಘಟನೆಯ ಸುದೀರ್ಘ ಅವಧಿಯ ಹೋರಾಟ ಮತ್ತು ಕೊಡವರ ಪರವಾದ ನಿಲುವುಗಳನ್ನು ವಿವರಿಸಿತು. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾಗಿ ಆಯ್ಕೆಯಾದ ಪೊನ್ನಣ್ಣ ಅವರಿಗೆ ಅಭಿನಂದನೆ ಸಲ್ಲಿಸಿದ ನಾಚಪ್ಪ, ಸಿಎನ್‌ಸಿ ಬೇಡಿಕೆಗಳಿಗೆ ಸ್ಪಂದಿಸುವಂತೆ ಮನವಿ ಮಾಡಿದರು.

ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆಯ ನ್ಯಾಯಸಮ್ಮತ, ಸಾಂವಿಧಾನಿಕ ಬೇಡಿಕೆಯ ಪರ ಅರ್ಥಶಾಸ್ತ್ರಜ್ಞ ಹಾಗೂ ಕೇಂದ್ರದ ಮಾಜಿ ಸಚಿವ ಡಾ. ಸುಬ್ರಮಣಿಯನ್ ಸ್ವಾಮಿ ಅವರು ಕಾನೂನು ಹೋರಾಟ ನಡೆಸುತ್ತಿರುವ ಬಗ್ಗೆ ಗಮನ ಸೆಳೆದರು. ಕಾನೂನುಬದ್ಧವಾಗಿ ಬುಡಕಟ್ಟು ಸಮುದಾಯವನ್ನು ರಕ್ಷಿಸಲು ಕೊಡವ ಜನಾಂಗದ ಸಮಗ್ರ ನಿಖರ ಮತ್ತು ನ್ಯಾಯೋಚಿತ ಜನಾಂಗೀಯ ಮರು–ಅಧ್ಯಯನಕ್ಕೆ ಒತ್ತು ನೀಡಬೇಕು. ವಿಧಾನಸಭಾ ಚುನಾವಣೆಯ ತಮ್ಮ ಪ್ರಣಾಳಿಕೆಯಲ್ಲಿ ಈ ಭರವಸೆಯನ್ನು ನೀಡಲಾಗಿತ್ತು ಎಂದು ನಾಚಪ್ಪ ಹೇಳಿದರು.

ಸಿಎನ್‌ಸಿ ಪ್ರಮುಖರಾದ ಕಲಿಯಂಡ ಪ್ರಕಾಶ್, ಲೆಫ್ಟಿನೆಂಟ್ ಕರ್ನಲ್ ಪಾರ್ವತಿ, ಪಟ್ಟಮಾಡ ಕುಶ, ಪಟ್ಟಡ ರಂಜನ್, ಅಜ್ಜಿಕುಟ್ಟೀರ ಲೋಕೇಶ್, ಜಮ್ಮಡ ಮೋಹನ್, ಚಂಬಂಡ ಜನತ್, ಅರೆಯಡ ಗಿರೀಶ್, ಕಾಂಡೆರ ಸುರೇಶ್, ಬೊಳ್ಳಾರಪಂಡ ಬೋಪಣ್ಣ, ಪಾರ್ವಂಗಡ ನವೀನ್, ಅಲ್ಮಂಡ ಜೈ, ಪಟ್ಟಮಾಡ ಅಶೋಕ್, ಮಂದಪಂಡ ಮನೋಜ್, ಬೇಪಾಡಿಯಂಡ ದಿನು, ಕಿರಿಯಮಾಡ ಶರಿನ್, ಕಿರಿಯಮಾಡ ಶಾನ್ ನಿಯೋಗದಲ್ಲಿದ್ದರು.

ಕುಶಾಲನಗರದ ಮನೆಯಲ್ಲಿ ನಗದು, ಚಿನ್ನ ಕಳವು


ಕುಶಾಲನಗರ, ಜೂ.17– ಮನೆಯಲ್ಲಿ ಯಾರು ಇಲ್ಲದ ಸಮಯ ಸಾಧಿಸಿ ಮನೆಯ ಬಾಗಿಲು ಮುರಿದು ಕಳ್ಳತನ ಮಾಡಿರುವ ಘಟನೆ ಪಟ್ಟಣದ ಹೊಸ ಹೌಸಿಂಗ್ ಬೋರ್ಡ್ ಬಡಾವಣೆಯಲ್ಲಿ ಶುಕ್ರವಾರ ನಡೆದಿದೆ.

ಸೋಮವಾರಪೇಟೆ ಕಂದಾಯ ಇಲಾಖೆ ನೌಕರ ರಾಜೇಶ್ ಎಂಬುವರ ಮನೆಯ ಬಾಗಿಲು ಮುರಿದು ಒಳನುಗ್ಗಿದ ಕಳ್ಳರು ಬೀರು ಮುರಿದು, ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿಯಾಗಿದ್ದಾರೆ. ವಿಷಯ ತಿಳಿದ ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬೆರಳಚ್ಚು ತಜ್ಞರು ಮತ್ತು ಶ್ವಾನದಳ ಭೇಟಿ ನೀಡಿ ಪರಿಶೀಲನೆ ನಡೆಸಿ ಅಗತ್ಯ ಮಾಹಿತಿಗಳನ್ನು ಕಲೆ ಹಾಕಿದ್ದಾರೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡು ಕಳ್ಳರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಜೂ.30 ರಂದು ಅಂಚೆ ಅದಾಲತ್

ಮಡಿಕೇರಿ, ಜೂ.17– ಅಂಚೆ ಅದಾಲತ್‌ನ ಸಭೆಯು ಜೂ.30ರಂದು ಬೆಳಗ್ಗೆ 11.30 ಗಂಟೆಗೆ ಕೊಡಗು ಅಂಚೆ ವಿಭಾಗದ ವಿಭಾಗೀಯ ಕಚೇರಿ ಸಿದ್ದಾಪುರ ರಸ್ತೆ ಅಶೋಕಪುರದಲ್ಲಿ ನಡೆಯಲಿದೆ. ಸಭೆಯಲ್ಲಿ ಕೊಡಗು ಅಂಚೆ ವಿಭಾಗದ ಅಂಚೆ ಸೇವೆಗೆ ಸಂಬಂಧಿಸಿದ ಎಲ್ಲಾ ತರಹದ ದೂರುಗಳನ್ನು ಸ್ವೀಕರಿಸಿ ಚರ್ಚಿಸಲಾಗುತ್ತದೆ. ದೂರುಗಳಿದ್ದಲ್ಲಿ 'ಅಂಚೆ ಅದಾಲತ್' ಎಂದು ಬರೆದು ಅಂಚೆ ಅಧೀಕ್ಷಕರು, ಕೊಡಗು ಅಂಚೆ ವಿಭಾಗ, ಮಡಿಕೇರಿ ಇವರಿಗೆ ಜೂ.28 ರೊಳಗೆ ತಲುಪುವಂತೆ ಕಳುಹಿಸಲು ಕೋರಿದೆ.

ಉಚಿತ ಕಣ್ಣಿನ ತಪಾಸಣಾ ಶಿಬಿರ



ಚಾಮರಾಜನಗರ, ಜೂ.17– ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಲಯನ್ಸ್ ಸಂಸ್ಥೆ ಚಾಮರಾಜನಗರ ಹಾಗೂ ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಜೂ.20ರಂದು ಬೆಳಗ್ಗೆ 7ರಿಂದ ಮಧ್ಯಾಹ್ನ 1 ರವರೆಗೆ ನಗರದ ನಂದಿ ಭವನದಲ್ಲಿ ಉಚಿತ ಕಣ್ಣಿನ ತಪಸಣಾ ಶಿಬಿರ ಏರ್ಪಡಿಸಲಾಗಿದೆ.

ಶಿಬಿರದಲ್ಲಿ ಕಣ್ಣಿನ ಪೊರೆ, ಗ್ಲಾಕೋಮ, ನೀರು/ಗೀಜು ಸೋರುವಿಕೆ, ಹತ್ತಿರ ಮತ್ತು ದೂರ ದೃಷ್ಟಿದೋಷ, ಕಣ್ಣಿನಲ್ಲಿ ಬಿರುಕು ಉಂಟಾಗುವುದು, ವಾರೆ ಕಣ್ಣು, ರಾತ್ರಿ ಕುರುಡುತನ ಪರೀಕ್ಷಿಸಿ ಚಿಕಿತ್ಸೆ ನೀಡಲಾಗುವುದು.

ಶಿಬಿರದ ದಿನ ಪೊರೆ ಇದೆ ಎಂದು ತೀರ್ಮಾನಿಸಲ್ಪಟ್ಟವರನ್ನು ಅದೇ ದಿನ ಮಧ್ಯಾಹ್ನ ಕೊಯಮತ್ತೂರಿನ ಅರವಿಂದ ಕಣ್ಣಾಸ್ಪತ್ರೆಗೆ ಶಸ್ತ್ರಚಿಕಿತ್ಸೆಗಾಗಿ ಕರೆದುಕೊಂಡು ಹೋಗಲಾಗುವುದು. ಶಸ್ತ್ರಚಿಕಿತ್ಸೆ ಔಷಧಿಗಳು, ಕಣ್ಣಿನಲ್ಲಿ ಅಳವಡಿಸುವ ಐಎಲ್‌ಓ ಲೆನ್ಸ್, ಊಟ, ತಂಗುವ ಸ್ಥಳ ಹಾಗೂ ಕೊಯಮತ್ತೂರಿಗೆ ಹೋಗುವ ಬಸ್ ವ್ಯವಸ್ಥೆ ಎಲ್ಲವೂ ಉಚಿತವಾಗಿರುತ್ತದೆ. ದೃಷ್ಟಿ ದೋಷ ಕಂಡು ಬಂದರೆ ಪರೀಕ್ಷಿಸಿ ಸ್ಥಳದಲ್ಲೇ ಕನ್ನಡಕ ವಿತರಿಸಲಾಗುವುದು. ಸಾರ್ವಜನಿಕರು ಇದರ ಪ್ರಯೋಜನ ಪಡೆಯುವಂತೆ ಪ್ರಕಟಣೆ ತಿಳಿಸಿದೆ. ವಿವರಗಳಿಗೆ ಲಯನ್ಸ್ ಅಧ್ಯಕ್ಷ ಪ್ರಕಾಶ್ ಜೈನ್ ಮೊ.9844030417, ಹೊಸೂರು ಜಗದೀಶ್ ಮೊ.9620497111, ಲೋಕೇಶ್ ಕುಮಾರ್ ಮೊ.98860–82721 ಸಂಪರ್ಕಿಸಬಹುದು.

ಉಸ್ತುವಾರಿ ಸಮಿತಿ ಪರಿಶೀಲನಾ ಸಭೆ ಮುಂದೂಡಿಕೆ

ಚಾಮರಾಜನಗರ, ಜೂ.17– ಸಂಸದ ವಿ. ಶ್ರೀನಿವಾಸಪ್ರಸಾದ್ ಅಧ್ಯಕ್ಷತೆಯಲ್ಲಿ ಜೂನ್ 20 ರಂದು ನಡೆಯಬೇಕಿದ್ದ ಜಿಲ್ಲಾಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆಯನ್ನು ಅನಿವಾರ್ಯ ಕಾರಣದಿಂದ ಮುಂದೂಡಲಾಗಿದೆ ಎಂದು ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮತಾಂತರ ನಿಷೇಧ ಕಾಯ್ದೆ ರದ್ದು ಖಂಡಿಸಿ ಪ್ರತಿಭಟನೆ



ಚಾಮರಾಜನಗರ, ಜೂ.17– ಮತಾಂತರ ನಿಷೇಧ ಕಾಯ್ದೆ ರದ್ದುಪಡಿಸಲು ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗ ಜಮಾಯಿಸಿದ ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗದಳದ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಮತಾಂತರ ನಿಷೇಧ ಕಾಯ್ದೆಯನ್ನು ರದ್ದುಪಡಿಸುವ ಮೂಲಕ ಮೂಲ ಹಿಂದೂ ಧರ್ಮದ ಅಸ್ಮಿತೆಯನ್ನು ಹಾಳು ಮಾಡಲು ಹೊರಟಿದೆ. ಕಾಂಗ್ರೆಸ್ ಹಿಂದೂ ವಿರೋಧಿ ಸರ್ಕಾರವಾಗಿದೆ. ಹಿಂದಿನ ಬಿಜೆಪಿ ಸರ್ಕಾರ ಮತಾಂತರ ನಿಷೇಧ ಕಾಯ್ದೆ ಹಾಗೂ ಗೋಹತ್ಯೆ ನಿಷೇಧ ಕಾನೂನುಗಳನ್ನು ಜಾರಿಗೆ ತರುವ ಮೂಲಕ ಧರ್ಮ ಹಾಗೂ ಗೋವುಗಳ ರಕ್ಷಣೆಗೆ ಮುಂದಾಗಿತ್ತು ಎಂದರು.

ಕಾಂಗ್ರೆಸ್ ಸರ್ಕಾರ ಈ ಕಾನೂನುಗಳನ್ನು ರದ್ದುಪಡಿಸುವ ಮೂಲಕ ಹಿಂದೂ ಧರ್ಮ ಹಾಗೂ ದೇಶವನ್ನು ಬಲಿ ಕೊಡಲು ಮುಂದಾಗಿದೆ. ಅಧಿಕಾರಕ್ಕೆ ಬಂದ 20 ದಿನಗಳಲ್ಲಿಯೇ ಸರ್ಕಾರದ ಕ್ರೂರ ನಡೆ ಪ್ರಾರಂಭವಾಗಿದೆ. ಇದೇ ರೀತಿ ಮುಂದುವರಿದರೆ ದೇಶ ಮತ್ತೊಮ್ಮೆ ಪರಕೀಯರ ಕೈ ಸೇರಬಹುದು. ಕೂಡಲೇ ಸರ್ಕಾರ ಕಾಯ್ದೆ ರದ್ದು ಪಡಿಸುವುದನ್ನು ಕೈಬಿಡಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ರಾಜ್ಯದ ಜನರಿಗೆ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿ ಜನರಿಗೆ ಮಂಕುಬೂದಿ ಎರಚುವ ಮೂಲಕ ಅಧಿಕಾರಕ್ಕೆ ಬಂದಿದೆ. ದೇಶದ ಮೂಲ ಶಕ್ತಿ ಹಿಂದುತ್ವ ಸಮಾಜ ಹಾಗೂ ದೇಶದ್ರೋಹಿ ಕೆಲಸ ಮಾಡುವವರಿಗೆ ಈ ಸರ್ಕಾರ ಕುಮ್ಮಕ್ಕು ನೀಡುತ್ತಿದೆ ಎಂದು ದೂರಿದರು.

ಬಿಜೆಪಿ ಜಾರಿಗೆ ತಂದಿದ್ದ ಮತಾಂತರ ನಿಷೇಧ ಕಾಯ್ದೆಯನ್ನು ಕಾಂಗ್ರೆಸ್ ಸರ್ಕಾರ ರದ್ದುಪಡಿಸುವ ಮೂಲಕ ಸಂವಿಧಾನಕ್ಕೆ ಅಪಚಾರ ಮಾಡಲಾಗಿದೆ. ಕಾಂಗ್ರೆಸ್ ಸರ್ಕಾರಕ್ಕೆ ಕೇವಲ ಅನ್ಯಧರ್ಮಿಯರು ಮತ ಹಾಕಿಲ್ಲ. ಹಿಂದೂಗಳು ಮತ ಹಾಕಿದ್ದಾರೆ. ಮತಾಂತರ ನಿಷೇಧ ಕಾಯ್ದೆ ವಾಪಸ್ ಪಡೆದಿರುವುದು ಹಿಂದೂ ಸಮಾಜಕ್ಕೆ ಎಸಗಿದ ದ್ರೋಹವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ವಿಶ್ವ ಹಿಂದೂ ಪರಿಷತ್ ಕಾರ್ಯದರ್ಶಿ ಮಧು, ರಾ.ಸತೀಶ್ ಕುಮಾರ್, ರಾಜ್ಯ ಕಾರ್ಯಕಾರಿಣಿ ಸದಸ್ಯ ವಾಸುದೇವರಾವ್, ಸಹ ಕಾರ್ಯದರ್ಶಿ ಶ್ರೀನಿವಾಸ್, ಜಿಲ್ಲಾ ಗೋರಕ್ಷಾ ಪ್ರಮುಖ್ ಶಂಕರ, ನಗರ ಭಜರಂಗದಳ ಸಂಯೋಜಕ್ ರಮೇಶ್, ಹಿಂದೂ ಸಂಘಟನೆ ಮುಖಂಡರಾದ ಎಸ್.ಬಾಲಸುಬ್ರಹ್ಮಣ್ಯಂ, ಶಂಕರ್, ರಮೇಶ್ ನಾಯಕ, ನೂತನ್, ರವಿಕುಮಾರ್, ಪಾಂಡು, ರಾಜೇಶ್, ಮಹೇಶ್, ಸೋಮಣ್ಣ, ಮಣಿಕಂಠ, ಗುರುಮೂರ್ತಿ, ಮನು, ಅಭಿ, ಕೃಷ್ಣ ವಿನೋದ್‌ರಾಜ್, ರಂಗಸ್ವಾಮಿ, ಸುಭಾಷ್, ಸಿದ್ದ, ಸಂತೋಷ್ ಇತರರಿದ್ದರು.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಅಪಾರ

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಉಪನಿರ್ದೇಶಕ ಕೆ.ಎ.ರಾಜೇಂದ್ರ ಪ್ರಸಾದ್



ಚಾಮರಾಜನಗರ, ಜೂ.17– ಏಷ್ಯಾ ಖಂಡದಲ್ಲೇ ಮೊದಲ ಜಲವಿದ್ಯುತ್ ಯೋಜನೆ ಪ್ರಾರಂಭಿಸಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಲ್ಲುತ್ತದೆ ಎಂದು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಉಪನಿರ್ದೇಶಕ ಕೆ.ಎ. ರಾಜೇಂದ್ರ ಪ್ರಸಾದ್ ತಿಳಿಸಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ರಾಜ್ಯ ಘಟಕದ ವತಿಯಿಂದ ನಡೆದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ನುಡಿನಮನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರು ಸಂಸ್ಥಾನವನ್ನು ಮಾದರಿಯಾಗಿ ರೂಪಿಸುವಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಅಪಾರ. ನಾಲ್ವಡಿಯವರು ಶಿಕ್ಷಣ, ಆರೋಗ್ಯ, ನೀರಾವರಿ, ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದ್ದರು. ಅಲ್ಲದೇ 1915 ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭಿಸಿದ್ದರು. ಇದರ ಫಲವಾಗಿ ನಾಡಿನಲ್ಲಿ ಕನ್ನಡ ಉತ್ಕೃಷ್ಟವಾಗಿ ಬೆಳೆಯಲು ಸಾಧ್ಯವಾಯಿತು ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಪೌರಾಯುಕ್ತ ಎಸ್.ವಿ.ರಾಮದಾಸ್, ಮೈಸೂರು ಸಂಸ್ಥಾನದ ಮಹಾರಾಜರು ಜನಮಾನಸದಲ್ಲಿ ಉಳಿಯುವಂತಹ ಸಾಧನೆ ಮಾಡಿ ಹೋಗಿದ್ದಾರೆ. ಕಟ್ಟಕಡೇ ವ್ಯಕ್ತಿಗೂ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡಿ ಉತ್ತಮ ಜೀವನ ನಡೆಸಲು ಅವಕಾಶ ಕಲ್ಪಿಸಿದ್ದಾರೆ. ಅಲ್ಲದೇ ಪ್ರಥಮ ಬಾರಿಗೆ ಹಿಂದುಳಿದ ಸಮುದಾಯಗಳಿಗೆ ಶೇ.75ರಷ್ಟು ಮೀಸಲಾತಿ ನೀಡಲು ಆದೇಶ ಹೊರಡಿಸಿದರು. ಹಾಗಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಮೀಸಲಾತಿ ಜನಕ ಎನ್ನಬಹುದು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ತಹಸೀಲ್ದಾರ್ ಐ.ಈ.ಬಸವರಾಜು ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗೆ ಮೈಲಿಗಲ್ಲು ನೆಟ್ಟು, ಮೈಸೂರು ಸಂಸ್ಥಾನದ ಸರ್ವತೋಮುಖ ಅಭಿವೃದ್ಧಿಗೆ ಒತ್ತು ನೀಡಿದರು ಎಂದ ಅವರು, ಸಮಾಜದಲ್ಲಿದ್ದ ಅನಿಷ್ಟ ಪದ್ಧತಿಗಳನ್ನು ತಡೆಗಟ್ಟುವ ಕಾಯ್ದೆಗಳನ್ನು ಜಾರಿಗೊಳಿಸಿದ್ದರು. ಪ್ರಸ್ತುತ ಅವರನ್ನು ಸ್ಮರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಿ, ಸನ್ಮಾನಿಸಲಾಯಿತು.

ಅಖಿಲ ಕರ್ನಾಟಕ ಕನ್ನಡ ಮಹಾಸಭಾ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಪ್ರಾಸ್ತಾವಿಕ ಭಾಷಣ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶೈಲಕುಮಾರ್ ವಿಚಾರ ಮಂಡನೆ ಮಾಡಿದರು.

ಕಾರ್ಯಕ್ರಮದಲ್ಲಿ ಗೃಹ ಮಂಡಳಿ ಸಹಾಯಕ ಕಾರ್ಯಪಾಲಕ ಅಭಿಯಂತರ ಎಂ.ಎಸ್.ಮಹೇಶ್, ನಗರಸಭಾ ಮಾಜಿ ಸದಸ್ಯ ಗಣೇಶ್ ದೀಕ್ಷಿತ್, ಮಹಾಸಭಾ ಗೌರವಾಧ್ಯಕ್ಷ ಶಾ.ಮುರಳಿ, ಪ್ರಧಾನ ಕಾರ್ಯದರ್ಶಿ ಚಾ.ವೆಂ. ರಾಜಗೋಪಾಲ್, ಸಹ ಕಾರ್ಯದರ್ಶಿ ಪಣ್ಯದಹುಂಡಿ ರಾಜು, ನಿಜಧ್ವನಿ ಗೋವಿಂದರಾಜು, ನಾಗು ರಮೇಶ್ ಇತರರಿದ್ದರು.

ಮಹಿಳೆಯರಿಗೆ ಬಸ್‌ನಲ್ಲಿ ಉಚಿತ ಪ್ರಯಾಣ ಹಿನ್ನೆಲೆ

ಮಹದೇಶ್ವರ ಬೆಟ್ಟದಲ್ಲಿ ಮಹಿಳಾ ಭಕ್ತರ ದಂಡು

ಚಾಮರಾಜನಗರ, ಜೂ.17– ಸರ್ಕಾರದಿಂದ ಮಹಿಳೆಯರಿಗೆ ಉಚಿತ ಬಸ್ ಯೋಜನೆ ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಪ್ರಸಿದ್ಧ ಯಾತ್ರಾ ಸ್ಥಳವಾದ ಕೊಳ್ಳೇಗಾಲ ತಾಲೂಕಿನ ಮಲೆ ಮಹದೇಶ್ವರಬೆಟ್ಟಕ್ಕೆ ಮಹಿಳಾ ಭಕ್ತರ ದಂಡೇ ಹರಿದು ಬಂದಿದೆ.

ರಾಜ್ಯ ಸರ್ಕಾರ ಶಕ್ತಿ ಯೋಜನೆಯಡಿ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಜಾರಿಗೊಳಿಸಿದ ಬಳಿಕ ಬಂದಿರುವ ಭಾನುವಾರದ ಮೊದಲ ಅಮಾವಾಸ್ಯೆ ಪೂಜೆಯಲ್ಲಿ ಪಾಲ್ಗೊಳ್ಳಲು ಬೆಂಗಳೂರು, ಮೈಸೂರು, ಚಾಮರಾಜನಗರ, ಮಂಡ್ಯ ಸೇರಿದಂತೆ ವಿವಿಧೆಡೆಗಳಿಂದ ಸಾವಿರಾರು ಮಹಿಳೆಯರು ಆಗಮಿಸಿದ್ದಾರೆ.

ಕಿತ್ತು ಬಂದ ಬಸ್ ಬಾಗಿಲು: ಅಮಾವಾಸ್ಯೆ ಹಿನ್ನೆಲೆಯಲ್ಲಿ ಮಹದೇಶ್ವರ ಬೆಟ್ಟಕ್ಕೆ ತೆರಳಲು ವಿವಿಧೆಡೆಗಳಿಂದ ಅಸಂಖ್ಯಾತ ಪ್ರಯಾಣಿಕರು ಕೊಳ್ಳೇಗಾಲಕ್ಕೆ ಆಗಮಿಸಿದ್ದರು. ಸಾರಿಗೆ ಬಸ್‌ನಲ್ಲಿ ಮಹಿಳೆಯರ ಪ್ರಯಾಣಕ್ಕೆ ಸರ್ಕಾರ ಉಚಿತಗೊಳಿಸಿರುವ ಹಿನ್ನೆಲೆಯಲ್ಲಿ ಮಧ್ಯಾಹ್ನ ಕೊಳ್ಳೇಗಾಲದಿಂದ ಮಹದೇಶ್ವರ ಬೆಟ್ಟಕ್ಕೆ ಹೋಗುವ ಸಾರಿಗೆ ಬಸ್ ಹತ್ತಲು ಪ್ರಯಾಣಿಕರ ನಡುವೆ ಪೈಪೋಟಿ ಏರ್ಪಟ್ಟಿತ್ತು. ಈ ವೇಳೆ ಬಸ್‌ನ ಹಿಂಬದಿ ಬಾಗಿಲು ಕಿತ್ತು ಬಂದಿದೆ. ಬಸ್‌ನಿಂದ ಎಲ್ಲಾ ಪ್ರಯಾಣಿಕರು ಕೆಳಕ್ಕಿಳಿಸಿ ಬೇರೆ ಬಸ್‌ನಲ್ಲಿ ಕಳುಹಿಸಲಾಯಿತು. ಒಟ್ಟಾರೆ ಎಲ್ಲಾ ಬಸ್‌ಗಳಲ್ಲೂ ಮಹಿಳಾ ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದದ್ದು ಕಂಡು ಬಂತು.

ಕೊಳ್ಳೇಗಾಲ ಬಸ್ ನಿಲ್ದಾಣದಲ್ಲಿ ಮುರಿದು ಬಿತ್ತು ಬಸ್ ಬಾಗಿಲು





ಹೆಚ್ಚುವರಿ ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್

ಚಾಮರಾಜನಗರ, ಜೂ.17– ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಹೆಚ್ಚುವರಿ ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್ ಜೂ.20 ರಿಂದ 22ರವರೆಗೆ ಬೆಳಗ್ಗೆ 10 ಗಂಟೆಗೆ ನಗರದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಯಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ದೂ:08226–222406, ಮೊ:9743099505, 9448978661 ಸಂಪರ್ಕಿಸುವಂತೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರನೇ ಪುಟದಿಂದ

ಮುಖ್ಯಮಂತ್ರಿ ಆಗಿರುತ್ತಾರೆ...!!

ಎಂದು ಡಾ.ಮಹದೇವಪ್ಪ ಸ್ಪಷ್ಟಪಡಿಸಿದರು. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೆ ನನ್ನ ಕಾಲದಲ್ಲೇ ಆಯಿತು. ಇದಕ್ಕೆ ಯುಪಿಎ ಸರ್ಕಾರ ಕಾರಣ. ಕೆಲವರು ಈ ಯೋಜನೆಗೆ ನಾನು ಮಾಡಿದ್ದೇನೆ ಎನ್ನುತ್ತಾರೆ. ಅದಕ್ಕೆಲ್ಲಾ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ ಎಂದರು. ಜನರ ಮೂಲಭೂತ ಹಕ್ಕು ಸಂರಕ್ಷಣೆ ಮಾಡಲು ಕಾಂಗ್ರೆಸ್ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ. ಸಮೃದ್ಧವಾದ ದೇಶ ಕಟ್ಟುವುದು ಕಾಂಗ್ರೆಸ್ ಪಕ್ಷದ ಮೂಲ ಉದ್ದೇಶ ಎಂದು ಡಾ.ಮಹದೇವಪ್ಪ ಹೇಳಿದರು. ಅನ್ನ ಭಾಗ್ಯ ಯೋಜನೆಯಲ್ಲಿ ಹತ್ತು ಕೆ.ಜಿ.ಅಕ್ಕಿ ಕೊಡುವುದಕ್ಕೆ ನಾವು ಬದ್ಧ. ಆದರೆ ಕೇಂದ್ರ ಸರ್ಕಾರ ಈಗ ಅಕ್ಕಿ ಕೊಡಲು ಹಿಂದೇಟು ಹಾಕುತ್ತಿದೆ. ಆದರೆ ನಾವು ಅವರ ಅಕ್ಕಿ ತರಲು ಪರ್ಯಾಯ ಮಾರ್ಗ ರೂಪಿಸಿದ್ದೇವೆ ಎಂದು ತಿಳಿಸಿದರು.

ಪಠ್ಯ ಪುಸ್ತಕ ಪುನರ್ ಪರಿಷ್ಕರಣೆ, ಗೋ ಹತ್ಯೆ ಕಾಯ್ದೆ ರದ್ದು ಹಾಗೂ ಮತಾಂತರ ನಿಷೇಧ ಕಾಯ್ದೆ ರದ್ದು ಆದೇಶದ ಕ್ರಮವನ್ನು ಸಮರ್ಥಿಸಿಕೊಂಡ ಡಾ.ಮಹದೇವಪ್ಪ, ಪಠ್ಯ ಪುಸ್ತಕಗಳ ಮೂಲಕ ಚರಿತ್ರೆಯನ್ನು ಮಕ್ಕಳಿಗೆ ಸರಿಯಾಗಿ ಹೇಳಬೇಕು. ತಿರುಚಬಾರದು. ಯಾವುದೇ ಧರ್ಮ ಸೇರಲು ಹಾಗೂ ಪ್ರಚಾರ ಮಾಡಲು ಪ್ರತಿಯೊಬ್ಬರು ಸ್ವತಂತ್ರರು. ಆದರೆ ಬಲವಂತವಾಗಿ ಮತಾಂತರ ಮಾಡಬಾರದು ಎಂದು ಅಭಿಪ್ರಾಯಪಟ್ಟರು. ದುಡಿಯ ಹಾಗೂ 14 ವರ್ಷ ಮೀರಿದ ಗೋವುಗಳನ್ನು ಹತ್ಯೆ ಮಾಡಲು ಕಾನೂನಿನಲ್ಲಿ ಅವಕಾಶವಿದೆ. ಆದರೆ ಗೋವುಗಳ ಬಗ್ಗೆ ಸ್ವಲ್ಪವು ಅಭಿಮಾನವಿಲ್ಲದವರು ಪ್ರಚಾರಕ್ಕೆ ಹಾತೊರೆಯುತ್ತಾರೆ. ಗೋವುಗಳ ಮುಂದೆ ನಿಂತು ಫೋಟೋ ತೆಗೆಸಿಕೊಳ್ಳುತ್ತಾರೆ ಎಂದು ಬಿಜೆಪಿಗೆ ತಿರುಗೇಟು ಕೊಟ್ಟ ಡಾ.ಮಹದೇವಪ್ಪ, ನಾನು ಹಾಗೂ ಸಿದ್ದರಾಮಯ್ಯ ಗೋವುಗಳ ಜೊತೆ ಬೆಳೆದಿದ್ದೇವೆ ಎಂದು ಹೇಳಿದರು.

ಅರಮನೆ ಸುತ್ತ ಝೀರೊ ಟ್ರಾಫಿಕ್ ಝೋನ್

ಮೈಸೂರಿನ ಚಾಮುಂಡಿಬೆಟ್ಟವನ್ನು ಎಕೋ ಫ್ರೆಂಡ್ಲಿ ಝೋನ್ ಏರಿಯಾ ಮಾಡಲಾಗುವುದು. ಚಾಮುಂಡಿಬೆಟ್ಟದ ಹಸಿರು ಹಾಗೂ ಪರಿಸರಕ್ಕೆ ಧಕ್ಕೆ ಆಗದಂತೆ ಅಭಿವೃದ್ಧಿ ಮಾಡಲಾಗುವುದು. ಹೆಚ್ಚು ಜನ ಸಂದಣಿ ಇರದಂತೆ ಹಾಗೂ ಹೆಚ್ಚು ಕಟ್ಟಡ ನಿರ್ಮಾಣ ಆಗದಂತೆ ಎಚ್ಚರಿಕೆ ವಹಿಸಲಾಗುವುದು ಎಂದು ಡಾ.ಮಹದೇವಪ್ಪ ಸ್ಪಷ್ಟಪಡಿಸಿದರು.

ಮೈಸೂರಿನ ಪಾರಂಪರಿಕ ಕಟ್ಟಡಗಳ ಪಟ್ಟಿ ತಯಾರು ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅದರ ಪಟ್ಟಿ ಬಂದ ಮೇಲೆ ಮೈಸೂರಿನ ಪಾರಂಪರಿಕ ಕಟ್ಟಡಗಳಿಗೆ ಹೊಸ ರೂಪ ಹಾಗೂ ಜೀವ ನೀಡಲಾಗುವುದು ಎಂದು ತಿಳಿಸಿದರು.

ಮೈಸೂರು ದಸರಾ ಪ್ರಾಧಿಕಾರ ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಚರ್ಚೆ ಮಾಡಲಾಗುವುದು ಎಂದರು. ಮೈಸೂರಿನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡಲು ಶ್ರೀನಾಥ್ ಹಾಗೂ ಅನಿಲ್ ಕುಂಬ್ಳೆ ಅವರು ಮನವಿ ಮಾಡಿದ್ದಾರೆ. ಈ ಸಂಬಂಧ ಸಮಾಲೋಚನೆ ಮಾಡಲಾಗುವುದು. ಇನ್ನು ಮೈಸೂರಿನ ಕಡಕೊಳ ಬಳಿ 125 ಎಕರೆ ಪ್ರದೇಶದಲ್ಲಿ ಫಿಲ್ಮ್ ಸಿಟಿ ನಿರ್ಮಾಣ ಮಾಡುವ ಯೋಜನೆಯನ್ನು ನಮ್ಮ ಸರ್ಕಾರವೇ ಕೈಗೆತ್ತಿಕೊಂಡಿತ್ತು. ಈಗ ಫಿಲ್ಮ್ ಸಿಟಿ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು ಎಂದು ಡಾ.ಮಹದೇವಪ್ಪ ಹೇಳಿದರು.

ನೆಹರು ಸರ್ಕಲ್ 'ಗೂಳಿ' ಅಡ್ಡ

ಹೇಳುವಂತಿತ್ತು. ನಗರದ ಹೃದಯ ಭಾಗವಾದ ಲಷ್ಕರ್ ಪೊಲೀಸ್ ಠಾಣೆ ಮುಂಭಾಗ ಅಶೋಕ ರಸ್ತೆ ಹಾಗೂ ಇರ್ವಿನ್ ರಸ್ತೆಯಲ್ಲಿ ಕೆರಳಿದ ಗೂಳಿಯೊಂದು ಪಾದಚಾರಿಗಳು ಹಾಗೂ ದ್ವಿಚಕ್ರ ವಾಹನ ಸವಾರರನ್ನು ಅಟ್ಟಾಡಿಸಿ, ದಾಂದಲೆ ನಡೆಸಿತು.

ಶನಿವಾರ ಮಧ್ಯಾಹ್ನ 3 ಗಂಟೆ ಸುಮಾರಿನಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಕಡೆಯಿಂದ ಇರ್ವಿನ್ ರಸ್ತೆಯಲ್ಲಿ ಲಷ್ಕರ್ ಠಾಣೆ ಮುಂಭಾಗದ ನೆಹರು ವೃತ್ತಕ್ಕೆ ಆಗಮಿಸಿದ ಈ ಗೂಳಿ, ಇದ್ದಕ್ಕಿದ್ದಂತೆ ಪಾದಚಾರಿಗಳನ್ನು ಅಟ್ಟಾಡಿಸಲಾರಂಭಿಸಿತು. ಗೂಳಿಯ ಈ ದಾಂಧಲೆಯಿಂದಾಗಿ ಕೆಲವು ಪಾದಚಾರಿಗಳು ಬಿದ್ದು ಸಣ್ಣಪುಟ್ಟ ಗಾಯಗಳಾಗಿವೆ. ಗೂಳಿಯ ದಾಂಧಲೆಯನ್ನು ಗಮನಿಸಿದ ಲಷ್ಕರ್ ಠಾಣೆ ಪೊಲೀಸರು ತಕ್ಷಣ ಕಾರ್ಯಪ್ರವೃತ್ತರಾಗಿ, ಗೂಳಿಯು ನೆಹರು ವೃತ್ತದಿಂದ ಮಿಲಾದ್ ಬಾಗ್ ಕಡೆಗೆ ತೆರಳದಂತೆ ನೆಹರು ವೃತ್ತವನ್ನು ಬ್ಯಾರಿಕೇಡ್ ಹಾಕಿ ಬಂದ್ ಮಾಡಿದರು. ಅದೇ ರೀತಿ ಸುಮಾರು 500 ಮೀಟರ್ ಅಂತರದಲ್ಲಿ ಮಿಲಾದ್ ಬಾಗ್ ರಸ್ತೆಯನ್ನೂ ಕೂಡ ಬಂದ್ ಮಾಡಿ ಗೂಳಿ ಕೇವಲ 500 ಮೀಟರ್ ವ್ಯಾಪ್ತಿಯಲ್ಲಿ ಓಡಾಡುವಂತೆ ದಿಗ್ಬಂಧನ ವಿಧಿಸುವಲ್ಲಿ ಯಶಸ್ವಿಯಾದರು. ಲಷ್ಕರ್ ಠಾಣೆ ಹಿಂಭಾಗದಲ್ಲಿರುವ ಠಾಣೆಗೆ ಸೇರಿದ ಖಾಲಿ ಜಾಗಕ್ಕೆ ಅಟ್ಟಲು ಯೋಜನೆ ರೂಪಿಸಿಕೊಂಡ ಪೊಲೀಸರು, ಠಾಣೆ ಹಿಂಭಾಗ ರಸ್ತೆಯ ಒಂದು ತುದಿಯನ್ನು ಬ್ಯಾರಿಕೇಡ್‌ನಿಂದ ಬಂದ್ ಮಾಡಿದ ನಂತರ ನಾಲ್ಕು ಬೈಕ್‌ಗಳಲ್ಲಿ ಕಾನ್‌ಸ್ಟೇಬಲ್‌ಗಳು ಲಾಠಿ ಹಿಡಿದು ಗೂಳಿಯನ್ನು ಅಟ್ಟಾಡಿಸಿದರು. ಅನ್ಯ ಮಾರ್ಗವಿಲ್ಲದೇ ಠಾಣೆ ಹಿಂಬದಿಯ ಖಾಲಿ ಜಾಗವನ್ನು ಗೂಳಿ ಪ್ರವೇಶಿಸಿದಾಗ ಆ ಜಾಗ ಪ್ರವೇಶಿಸುವ ಗೇಟ್ ಅನ್ನು ಬಂದ್ ಮಾಡಿ ಗೂಳಿಯನ್ನು ಅಲ್ಲಿಯೇ ಬಂಧಿಸಿಟ್ಟು ನಗರ ಪಾಲಿಕೆಗೆ ಮಾಹಿತಿ ನೀಡಿದರು. ನಂತರ ಸ್ಥಳಕ್ಕಾಗಮಿಸಿದ ಪಾಲಿಕೆಯ 'ಕೌ ಸ್ಕ್ವಾಡ್' ಸಿಬ್ಬಂದಿ ಗೂಳಿಯನ್ನು ತಮ್ಮ ವಾಹನದಲ್ಲಿ ಕೊಂಡೊಯ್ದು ಪಿಂಜರಾಪೋಲ್‌ಗೆ ಬಿಟ್ಟರು.

ಮಧ್ಯಾಹ್ನ 30ರಿಂದ 4 ಗಂಟೆವರೆಗೆ ಒಂದು ಗಂಟೆ ಕಾಲ ಗೂಳಿಯ ದಾಂಧಲೆಯಿಂದ ಲಷ್ಕರ್ ಪೊಲೀಸ್ ಠಾಣೆ ಮುಂಭಾಗ ಭಯದ ವಾತಾವರಣ ನಿರ್ಮಾಣವಾಗಿತ್ತು. ನೆಹರು ವೃತ್ತದಿಂದ ಮಿಲಾದ್ ಬಾಗ್ ಕಡೆಗೆ ವಾಹನ ಸಂಚಾರ ಬಂದ್ ಮಾಡಲಾಗಿತ್ತು. ಕೊನೆಗೆ ಪೊಲೀಸರು ಗೂಳಿಯನ್ನು ಒಂದೆಡೆ ಕೂಡಿಹಾಕಿದಾಗ ಪರಿಸ್ಥಿತಿ ತಿಳಿಯಾಯಿತು. ಈ ಕಾರ್ಯಾಚರಣೆಯಲ್ಲಿ ದೇವರಾಜ ಉಪವಿಭಾಗದ ಎಸಿಪಿ ಶಾಂತಮಲ್ಲಪ್ಪ ಮತ್ತು ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪಿ.ಪಿ. ಸಂತೋಷ್ ಮಾರ್ಗದರ್ಶನದಲ್ಲಿ ಸಬ್‌ಇನ್ಸ್‌ಪೆಕ್ಟರ್ ಅನಿಲ್, ಸಿಬ್ಬಂದಿಗಳಾದ ಕಿರಣ್, ರಘು, ಆದಂ, ನಾಗಭೂಷಣ್, ಚೇತನ್, ಚೆನ್ನಪ್ಪ, ಮಹೇಶ್, ಜಯಲಕ್ಷ್ಮೀ ಮತ್ತಿತರರು ಭಾಗವಹಿಸಿದ್ದರು. ಇಂದು ದಾಂಧಲೆ ನಡೆಸಿದ ಗೂಳಿಯ ಮಾಲೀಕರು ಯಾರು ಎಂಬುದು ತಿಳಿದುಬಂದಿಲ್ಲ. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಮುಂಭಾಗ, ಇರ್ವಿನ್ ರಸ್ತೆ, ಅಶೋಕ ರಸ್ತೆ, ಸಯ್ಯಾಜಿರಾವ್ ರಸ್ತೆ, ಧನ್ವಂತರಿ ರಸ್ತೆ ಮಾತ್ರವಲ್ಲ ಬಹುತೇಕ ಎಲ್ಲಾ ಬಡಾವಣೆಗಳಲ್ಲಿ ಬಿಡಾಡಿ ದನಗಳು ರಸ್ತೆಯಲ್ಲೇ ಅಡ್ಡಾಡುತ್ತವೆ. ಕೆಲವೊಮ್ಮೆ ರಸ್ತೆ ಮಧ್ಯದಲ್ಲೇ ನಿಂತು ಅಥವಾ ಮಲಗಿ ವಾಹನ ಸಂಚಾರಕ್ಕೂ ಅಡಚಣೆ ಉಂಟುಮಾಡುತ್ತವೆ. ಆದರೂ ನಗರ ಪಾಲಿಕೆ ಈ ಬಿಡಾಡಿ ದನಗಳ ನಿಯಂತ್ರಣಕ್ಕಾಗಿ ಯಾವುದೇ ಕ್ರಮ ಕೈಗೊಂಡಂತೆ ಕಾಣುತ್ತಿಲ್ಲ. ಹೆಸರಿಗಷ್ಟೇ 'ಕೌ ಸ್ಕ್ವಾಡ್' ಎಂಬ ತಂಡವನ್ನು ರಚಿಸಿದ್ದು, ಬಿಡಾಡಿ ದನಗಳನ್ನು ಸಾಗಿಸಲು ಅನುಕೂಲವಾಗುವ ಈ ತಂಡಕ್ಕೆ ವಾಹನವನ್ನೂ ನೀಡಲಾಗಿದೆ. ಆದರೆ, ಈ ತಂಡವಂತೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ಆರೋಪ ನಾಗರಿಕರಿಂದ ಕೇಳಿಬಂದಿದೆ.

ವಿವೇಕಾನಂದನಗರ ವೃತ್ತ ಪುನರ್ ನಿರ್ಮಾಣ

ಯೋಜನೆ ಕೈಗೊಳ್ಳಲಾಗಿದೆ. ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ವೃತ್ತ ನಿರ್ಮಾಣ ಯೋಜನೆ ಬಗ್ಗೆ ಆಸಕ್ತಿ ವಹಿಸಿದ್ದಾರೆ. ಮೇಯರ್ ಶಿವಕುಮಾರ್, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಯೋಜನೆ ತ್ವರಿತಗೊಳಿಸಿದ್ದಾರೆ. ಪ್ರತಿ ಹಂತದಲ್ಲೂ ಕಾಮಗಾರಿಯ ನಿಗಾ ವಹಿಸುವ ಜವಾಬ್ದಾರಿಯನ್ನು ವಲಯ ಕಚೇರಿ 3ರ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ ಅವರಿಗೆ ವಹಿಸಲಾಗಿದೆ.

ವಿಭಿನ್ನ-ಆಕರ್ಷಕ: ಮೈಸೂರಿನಲ್ಲಿರುವ ವೃತ್ತಗಳಿಗಿಂತ ವಿಭಿನ್ನವಾಗಿ ಸ್ವಾಮಿ ವಿವೇಕಾನಂದರ ವೃತ್ತ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ಜೊತೆಗೆ ಪಾರಂಪರಿಕತೆಗೆ ಧಕ್ಕೆಯಾಗದಂತೆಯೂ ವಿನ್ಯಾಸಗೊಳಿಸಲಾಗಿದೆ. ಪ್ರತಿಮೆ ಪ್ರತಿಷ್ಠಾಪಿಸುವ ಪೀಠ, ಸುತ್ತಲಿನ ತಡೆಗೋಡೆ, ಕಂಬಗಳು, ಗೋಪುರ ಎಲ್ಲವನ್ನೂ ಆಕರ್ಷಕವಾಗಿ ವಿನ್ಯಾಸಗೊಳಿಸಲಾಗಿದೆ. ವೃತ್ತದ ಜೊತೆಗೆ ರಸ್ತೆ ಹಾಗೂ ಫುಟ್‌ಪಾತ್ ಅನ್ನೂ ವೃತ್ತಕ್ಕೆ ಹೊಂದುವಂತೆ ಅಭಿವೃದ್ಧಿಪಡಿಸಲಾಗುತ್ತಿದೆ.

ವಿಶೇಷ ವಿನ್ಯಾಸ: ತಳಮಟ್ಟದಲ್ಲಿ ವೃತ್ತದ ವಿಸ್ತೀರ್ಣ 40 ಅಡಿ ಇರಲಿದ್ದು, 15 ಅಡಿ ಎತ್ತರದ ನಾಲ್ಕು ಕಂಬಗಳನ್ನು ಅಳವಡಿಸಲಾಗುತ್ತದೆ. ವೃತ್ತದಲ್ಲಿ ಸಾಮಾನ್ಯವಾಗಿ ಒಂದು ಗೋಪುರವಿರುತ್ತದೆ. ಆದರೆ ವಿವೇಕಾನಂದರ ವೃತ್ತದಲ್ಲಿ ಮಧ್ಯದಲ್ಲಿ ದೊಡ್ಡ ಗೋಪುರ ಹಾಗೂ ಸುತ್ತಲೂ 8 ಸಣ್ಣ ಗೋಪುರ ಸೇರಿ ಒಟ್ಟು 9 ಗೋಪುರ ಇರುವಂತೆ ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ತಳದಿಂದ ಗೋಪುರದ ತುದಿವರೆಗೆ ಒಟ್ಟು 32 ಅಡಿ ಎತ್ತರವಿರಲಿದೆ. ಉತ್ಕೃಷ್ಟ ಹಾಗೂ ಹೊಳಪುಳ್ಳ ಕಲ್ಲು, ಇಟ್ಟಿಗೆಗಳನ್ನು ಕಾಮಗಾರಿಗೆ ಬಳಸಿಕೊಳ್ಳಲಾಗುತ್ತದೆ. ಅತ್ಯಾಕರ್ಷಕ ವೃತ್ತಕ್ಕೆ ಹೊಂದುವಂತೆ ಫುಟ್‌ಪಾತ್ ಅನ್ನೂ ವಿನ್ಯಾಸಗೊಳಿಸಲಾಗಿದೆ. ಒಟ್ಟಾರೆ ಪಾರಂಪರಿಕ ನೆಲೆಗಟ್ಟಿನ ವಿಭಿನ್ನ ವಿನ್ಯಾಸದ ಅತ್ಯಾಕರ್ಷಕ ವೃತ್ತವನ್ನು ನಿರ್ಮಿಸಲಾಗುತ್ತಿದೆ ಎಂದು ವಿನ್ಯಾಸಕಾರ ಪ್ರಕಾಶ್ ಚಿಕ್ಕಪಾಳ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ವಿವೇಕಾನಂದರ ವೃತ್ತವನ್ನು ಹೊಸ ವಿನ್ಯಾಸದಲ್ಲಿ ಮರು ನಿರ್ಮಾಣ ಮಾಡಬೇಕೆಂಬ ಆಶಯದೊಂದಿಗೆ ಹಿಂದಿನ ಮೇಯರ್ ಸುನಂದಾ ಪಾಲನೇತ್ರ ಅವರು ವಿನ್ಯಾಸ ರೂಪಿಸುವಂತೆ ಸೂಚಿಸಿದರು. ಹಾಗಾಗಿ ಮೈಸೂರಿನ ಪಾರಂಪರಿಕತೆಗೆ ದಕ್ಕೆಯಾಗದಂತೆ ವೃತ್ತದ ವಿನ್ಯಾಸ ರೂಪಿಸಿದೆ. ಇಂಜಿನಿಯರ್ ಕಿಶೋರ್ ಚಂದ್ರ ಅವರು ಪ್ಲಾನ್ ಮಾಡಿಕೊಟ್ಟರು. ವೃತದ ವಿಸ್ತೀರ್ಣ, ತಡೆಗೋಡೆ, ಪ್ರತಿಮೆ ಪ್ರತಿಷ್ಠಾಪಿಸುವ ಪೀಠ, ವಿಭಿನ್ನ ಗೋಪುರ, ಪಾರಂಪರಿಕ ಶೈಲಿಯ ಕಂಬಗಳು ಹೀಗೆ ಎಲ್ಲದರ ವಿನ್ಯಾಸವನ್ನು ಎಲ್ಲರೂ ಒಪ್ಪಿಕೊಂಡರು. ಈಗಿರುವ ವೃತ್ತದಲ್ಲಿ 6 ಕಂಬಗಳನ್ನು ಅಳವಡಿಸಿರುವುದರಿಂದ ಪ್ರತಿಮೆಯೇ ಕಾಣಿಸುತ್ತಿರಲಿಲ್ಲ. ಅಲ್ಲದೆ ಪ್ರತಿಮೆ ಹಾಗೂ ವೃತ್ತ ಕುಬ್ಜವಾಗಿತ್ತು. ಈ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಎಚ್ಚರಿಕೆಯಿಂದ ವಿನ್ಯಾಸಗೊಳಿಸಲಾಗಿದೆ. ಒಟ್ಟಾರೆ ಪಾರಂಪರಿಕ ಶೈಲಿಯನ್ನೊಳಗೊಂಡ ನವೀನ ವಿನ್ಯಾಸದ ಚೆಂದದ ವೃತ್ತ ನಿರ್ಮಾಣವಾಗಲಿದೆ ಎಂದು ಅವರು ಹೇಳಿದರು.

ಪರಿಶಿಷ್ಟ ಜಾತಿಗಳವರ ಶಿಕ್ಷಣ, ಆರೋಗ್ಯ, ಬ್ಯಾಂಕ್ ಸಾಲ ಸೌಲಭ್ಯಕ್ಕೆ ಆದ್ಯತೆ ನೀಡಲು ಕರೆ

ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ ಸದಸ್ಯರಾದ ಡಾ.ಅಂಜು ಬಾಲಾ ನೇತೃತ್ವದಲ್ಲಿ ಪ್ರಗತಿ ಪರಿಶೀಲನಾ ಸಭೆ



ಮೈಸೂರು, ಜೂ.17(ಜಿಎ)- ಪರಿಶಿಷ್ಟ ಜಾತಿಗಳವರ ಶಿಕ್ಷಣ, ಆರೋಗ್ಯ ಮತ್ತು ಬ್ಯಾಂಕಿನ ಸಾಲ ಸೌಲಭ್ಯಗಳ ಬಗ್ಗೆ ಹೆಚ್ಚಿನ ಆದ್ಯತೆ ನೀಡಿ ಎಂದು ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ ಸದಸ್ಯರಾದ ಡಾ.ಅಂಜು ಬಾಲಾ ತಿಳಿಸಿದರು.

ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶನಿವಾರ ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳಿಗೆ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ ವತಿಯಿಂದ ಆಯೋಜಿಸಲಾದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು.

ಈ ವೇಳೆ ಡಾ.ಅಂಜು ಬಾಲಾ ಅವರು, ಪ್ರತಿಯೊಂದು ಇಲಾಖೆಯ ಪ್ರಗತಿಯ ಬಗ್ಗೆ ಅಂಕಿ ಅಂಶಗಳೊಂದಿಗೆ ಮಾಹಿತಿ ಪಡೆದುಕೊಂಡರು. ನಗರ ಪೊಲೀಸ್ ಆಯುಕ್ತರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಡಿಡಿಪಿಐ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸಮಗ್ರ ಮಾಹಿತಿ ಒದಗಿಸಿದರು.

ಡಾ. ಅಂಜು ಬಾಲಾ ಮಾತನಾಡಿ, ಪರಿಶಿಷ್ಟ ಜಾತಿ ಜನರ ಶ್ರೇಯೋಭಿವೃದ್ಧಿಗೆ ಸರ್ಕಾರ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದ್ದು, ಯೋಜನೆಗಳು ಪರಿಶಿಷ್ಟ ಜಾತಿಯವರಿಗೆ ತಲುಪುವಂತಾಗಬೇಕು ಹಾಗೂ ಸರ್ಕಾರದ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳಾಗಬೇಕು. ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಜನ್ ಧನ್ ಯೋಜನೆಯಡಿ ಹಲವು ಉಪಯೋಗಗಳಾಗುತ್ತಿದ್ದು, ಯೋಜನೆಯಿಂದ ವಂಚಿತರಾದವರನ್ನು ಗುರುತಿಸಿ ಅವರಿಗೆ ಈ ಯೋಜನೆಗಳ ಫಲ ದೊರಕುವಂತೆ ಮಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಮುದ್ರಾ ಯೋಜನೆ, ಸ್ಟಾರ್ಟ್ ಅಪ್ ಹಾಗೂ ವಿದ್ಯಾಭ್ಯಾಸಕ್ಕಾಗಿ ಎಷ್ಟು ಮಂದಿ ಲೋನ್ ಪಡೆದುಕೊಂಡಿದ್ದಾರೆ ಎಂದು ಮಾಹಿತಿ ಕೇಳಿದರು. ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಕಾರ್ಪೋರೇಷನ್ ಲಿಮಿಟೆಡ್ ವತಿಯಿಂದ 2020-21ರ ಸಾಲಿನಲ್ಲಿ 220 ಅರ್ಜಿಗಳು ಬಂದಿದ್ದು, ಅದರಲ್ಲಿ 120 ಅರ್ಜಿಗಳು ಆಯ್ಕೆಗೊಂಡು 90 ಲಕ್ಷ ರೂ. ಮಂಜೂರಾಗಿದೆ. 2021-22ರ ಸಾಲಿನಲ್ಲಿ 29 ಅರ್ಜಿಗಳು ಬಂದಿದ್ದು, ಅದರಲ್ಲಿ 23 ಆಯ್ಕೆಯಾಗಿ 65.50 ಲಕ್ಷ ರೂ. ಹಾಗೇ 2022-23ರ ಸಾಲಿನಲ್ಲಿ 49 ಅರ್ಜಿಗಳು ಬಂದಿದ್ದು, ಪ್ರಸ್ತುತ ಸರ್ಕಾರ ಬದಲಾಗಿರುವುದರಿಂದ ಮುಂದಿನ ಪ್ರಕ್ರಿಯೆಯಾಗಿಲ್ಲ ಎಂದು ಮಾಹಿತಿ ನೀಡಲಾಯಿತು.

ಮಾಹಿತಿ ಪಡೆದ ನಂತರ ಅಂಜು ಬಾಲ ಪ್ರತಿಕ್ರಿಯಿಸಿ, ವಿದ್ಯಾಭ್ಯಾಸ ಸಾಲದ ಬಗ್ಗೆ ಆದ್ಯತೆ ವಹಿಸಿ ಪ್ರತಿಯೊಂದು ಲೋನ್ ಅರ್ಜಿಗಳು ಹೇಗೆ ತಿರಸ್ಕಾರ ಆಗುತ್ತಿದೆ, ಮತ್ತೆ ಏಕೆ ಎಂಬುದರ ವರದಿ ಸಲ್ಲಿಸಿ, ಸಭೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಪ್ರತಿಯೊಂದು ಸಭೆಯಲ್ಲೂ ಸರ್ಕಾರದ ಯೋಜನೆಗಳನ್ನು ಜಾರಿಗೆ ತಂದಿರುವ ಬಗ್ಗೆ ಮಾಹಿತಿ ಪಡೆಯಬೇಕಾಗುತ್ತದೆ. ಆಯೋಗವು ಮಾಹಿತಿ ಬೇಕಾದಾಗ ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯುತ್ತದೆ. ಪತ್ರಕ್ಕೆ 15 ದಿನದ ಒಳಗೆ ಉತ್ತರ ನೀಡಬೇಕು ಇಲ್ಲವಾದರೆ ಇದರ ಪರಿಣಾಮ ಬೇರೆ ರೀತಿ ಇರುತ್ತದೆ ಎಂದು ಎಚ್ಚರಿಸಿದರು.

ಆಯೋಗಕ್ಕೆ ಯಾರಿಗೂ ತೊಂದರೆ ನೀಡುವ ಉದ್ದೇಶವಿಲ್ಲ, ಆದರೆ ಅಧಿಕಾರಿಗಳು ತಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಹಾಗೂ ನ್ಯಾಯಸಮ್ಮತವಾಗಿ ಮಾಡಬೇಕು ಎಂದು ತಿಳಿಸಿದರು.

ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಜನನಿ ಸುರಕ್ಷಾ ಯೋಜನೆಯಡಿ 2020-21 ನೇ ಸಾಲಿನಲ್ಲಿ 21,076 ಫಲಾನುಭವಿಗಳಿದ್ದು ಶೇ.25 ರಷ್ಟು ಫಲಾನುಭವಿಗಳು ಪ.ಜಾತಿಯವರಾಗಿದ್ದಾರೆ. 2022-23 ನೇ ಸಾಲಿಗೆ 9,131 ಫಲಾನುಭವಿಗಳಿದ್ದು, ಅದರಲ್ಲಿ 1,944 ಜನ ಪರಿಶಿಷ್ಟ ಜಾತಿಯವರಾಗಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಪ್ರಸಾದ್ ಅವರು ತಿಳಿಸಿದರು.

ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಮತ್ತೊಂದು ಸಭೆ ನಡೆಯಲಿದ್ದು ಅದಕ್ಕೆ ಆಯೋಗದ ಅಧ್ಯಕ್ಷರು ಭಾಗಿಯಾಗಲಿದ್ದಾರೆ. ಆ ಸಭೆಯಲ್ಲಿ ಪ್ರತಿಯೊಬ್ಬರನ್ನು ಪ್ರಶ್ನಿಸಲಾಗುವುದು. ಎಲ್ಲದಕ್ಕೂ ತಯಾರಿ ನಡೆಸಿಕೊಳ್ಳಿ ಇಂದಿನ ಸಭೆ ಮಾದರಿಯಲ್ಲಿಯೇ ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸಿ ಎಂದರು.

ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಜಿಲ್ಲೆಯಲ್ಲಿ ಎಷ್ಟು ಮನೆಗಳು ಮಂಜೂರಾಗಿವೆ ಎಂಬುದರ ಬಗ್ಗೆ ಮಾಹಿತಿ ಪಡೆದುಕೊಂಡು ಆಯೋಗಕ್ಕೆ ಜಿಲ್ಲಾಧಿಕಾರಿ ಸಮಗ್ರವಾಗಿ ಮಾಹಿತಿ ನೀಡಿದರು. ಅದರಂತೆ 2021 ಮತ್ತು 22ನೇ ಸಾಲಿನಲ್ಲಿ 409 ಮನೆ ಗುರಿ ನೀಡಿದ್ದು ಅದರಲ್ಲಿ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ 297 ಮನೆಗಳು ಹಂಚಿಕೆಯಾಗಿವೆ. "ಮನೆಗಳ ನಿರ್ಮಾಣಕ್ಕೆ ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೋರೇಷನ್ ಕಡೆಯಿಂದ ಸಹಾಯಧನ ನೀಡಲಾಗುತ್ತಿದ್ದು ಕೇಂದ್ರ ಸರ್ಕಾರದಿಂದ 1.50 ಲಕ್ಷ ರೂ ಹಾಗೂ ರಾಜ್ಯ ಸರ್ಕಾರದ ಅಂಬೇಡ್ಕರ್ ವಸತಿ ಯೋಜನೆಯಡಿ 3.50 ಲಕ್ಷ ರೂ. ನೀಡಲಾಗುತ್ತಿದೆ ಎಂದು ತಿಳಿಸಿದರು.

ಸಭೆಯಲ್ಲಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ನಿರ್ದೇಶಕ ಸುನೀಲ್ ಬಾಬು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಸೀಮಾ ಲಾಟ್ಕರ್, ನಗರ ಪಾಲಿಕೆ ಆಯುಕ್ತರಾದ ಲಕ್ಷ್ಮಿಕಾಂತ್ ರೆಡ್ಡಿ, ಡಿಸಿಪಿ ಮುತ್ತುರಾಜ್, ಎ.ಎಸ್.ಪಿ ನಂದಿನಿ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮಕ್ಕಳ ಶಾಲಾ ದಾಖಲಾತಿ ಬಗ್ಗೆ ಕ್ರಮ

ಸಭೆಯಲ್ಲಿ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಅಂಕಿ ಅಂಶಗಳನ್ನು ಪರಿಶೀಲಿಸಿದ ನಂತರ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು, ಶಾಲೆಗಳಲ್ಲಿ ದಾಖಲಾತಿ ಬಗ್ಗೆ ಅಗತ್ಯ ಕ್ರಮವಹಿಸಲಾಗಿದ್ದು, ಕಡಿಮೆಯಾದರೆ ಅದರ ಬಗ್ಗೆ ವಿಶೇಷವಾಗಿ ಸಭೆ ನಡೆಸಿ ಏಕೆ ಕಡಿಮೆಯಾಗುತ್ತಿದೆ ಎಂಬುದರ ಬಗ್ಗೆ ಚರ್ಚೆ ನಡೆಸಲಾಗುತ್ತದೆ. ಜಿಲ್ಲೆಯಲ್ಲಿ ಆದಿವಾಸಿಗಳ ಸಂಖ್ಯೆಯು ಹೆಚ್ಚಿದ್ದು ಅಲ್ಲಿ ಮಕ್ಕಳು ಶಾಲೆಗೆ ಏಕೆ ಬರುತ್ತಿಲ್ಲ ಎಂಬುದರ ಬಗ್ಗೆ ಮೂರು ತಿಂಗಳಿಗೊಮ್ಮೆ ಸಭೆ ನಡೆಸಲಾಗುತ್ತಿದೆ. ಪ್ರತಿಷ್ಠಿತ ಶಾಲೆಗಳ ಸ್ಕೀಮ್‌ಗಳ ಅಡಿಯಲ್ಲಿ ಶಾಲೆಗಳನ್ನು ಗುರುತಿಸಿ ಅಲ್ಲಿಗೆ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು.

ಪೊಲೀಸ್ ಇಲಾಖೆ ಕಾರ್ಯವೈಖರಿಗೆ ಶ್ಲಾಘನೆ

ನಗರ ಪೊಲೀಸ್ ಆಯುಕ್ತ ರಮೇಶ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಅವರು ಜಿಲ್ಲೆ ಮತ್ತು ನಗರದಲ್ಲಿ ಪರಿಶಿಷ್ಟ ಜಾತಿಯವರ ಮೇಲಿರುವ ಪ್ರಕರಣಗಳು ಹಾಗೂ ಅದಕ್ಕೆ ಇಲಾಖೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ, ಇಂತಹ ಪ್ರಕರಣಗಳಲ್ಲಿ ನೊಂದವರಿಗೆ ಪರಿಹಾರ ಹಾಗೂ ಕೆಲಸವನ್ನು ದೊರಕುವಂತೆ ನೋಡಿಕೊಳ್ಳಲಾಗುತ್ತಿದೆ ಎಂದು ವಿವರಿಸಿದರು. ಕಳೆದ ಬಾರಿ ಪ್ರಗತಿಪರಿಶೀಲನಾ ಸಭೆಯಲ್ಲಿ ನೋಡಿದಂತೆ ಈ ಬಾರಿ ಅನೇಕ ಬದಲಾವಣೆಗಳಾಗಿದ್ದು, ಇಲಾಖೆಯು ಉತ್ತಮವಾಗಿ ಕಾರ್ಯನಿರ್ವಹಿಸಿದೆ. ಪೊಲೀಸ್ ಇಲಾಖೆಯ ಕಾರ್ಯವೈಖರಿಯನ್ನು ಶ್ಲಾಘಿಸಿದರು.

ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡಲು ಮನವಿ



ಮೈಸೂರು, ಜೂ.17(ಜಿಎ)- ರಾಜ್ಯ ಸರ್ಕಾರ ಈ ಸಾಲಿನ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಮುಖ್ಯಮಂತ್ರಿಗಳಲ್ಲಿ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೈಸೂರು ಮಹಾರಾಣಿ ಕಾಲೇಜು ಪ್ರಯೋಗಾಲಯ ಚಾವಣಿ ಹಾಗೂ ಗೋಡೆ ಕುಸಿದು ಬಿದ್ದಿದೆ. ಅದರ ಪುನರ್ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೊಳಿಸಬೇಕು. ಮೈಸೂರು ನಗರ ಹಾಗೂ ತಾಲೂಕಿನಲ್ಲಿ ವಿದ್ಯಾರ್ಥಿನಿಯರ ತಾಂತ್ರಿಕ ವ್ಯಾಸಂಗಕ್ಕೆ ತಾಲೂಕಿಗೆ ಒಂದರಂತೆ ಮಹಿಳಾ ಪಾಲಿಟೆಕ್ನಿಕ್ ಮಂಜೂರು ಮಾಡಬೇಕು.

ಮೈಸೂರು ವಿಭಾಗಕ್ಕೆ ಅನ್ವಯಿಸುವಂತೆ ಮೈಸೂರು ನಗರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯವನ್ನು ಸ್ಥಾಪಿಸಬೇಕು. ವಿಶ್ವವಿದ್ಯಾನಿಲಯಗಳಲ್ಲಿ ಶೇ.70ರಷ್ಟು ಅಧ್ಯಾಪಕರ ಹುದ್ದೆಗಳು ಖಾಲಿ ಇರುವುದರಿಂದ ಯುಜಿಸಿಯಿಂದ ಯಾವುದೇ ಅನುದಾನ ಸಿಗುತ್ತಿಲ್ಲ. ಪ್ರಾಥಮಿಕ, ಪ್ರೌಢಶಿಕ್ಷಣ ಇಲಾಖೆಯಲ್ಲಿ ಸುಮಾರು 32,000 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಅನುದಾನಿತ ಪ್ರಾಥಮಿಕ, ಪ್ರೌಢ, ಪದವಿಪೂರ್ವ, ಪದವಿ, ತಾಂತ್ರಿಕ ಕಾಲೇಜುಗಳಲ್ಲಿ ಶೇ.80ರಷ್ಟು ಬೋಧಕರ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಮುಂದಿನ ಐದು ವರ್ಷಗಳಲ್ಲಿ ಹಂತ ಹಂತವಾಗಿ ಭರ್ತಿ ಮಾಡಲು ಪ್ರಸಕ್ತ ಆಯವ್ಯಯದಲ್ಲಿ ಘೋಷಣೆ ಮಾಡಬೇಕೆಂದು ಆಗ್ರಹಿಸಿದರು.

ಮಂಡ್ಯದ ಕೃಷಿ ಮಹಾವಿದ್ಯಾಲಯ ವಿ.ಸಿ. ಫಾರಂ ಹಾಗೂ ಕೃಷಿ ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಎಲ್ಲಾ ಮೂಲ ಸೌಕರ್ಯ ಒದಗಿಸಬೇಕು. ಈ ಹಿಂದಿನ ತಮ್ಮ ಅವಧಿಯಲ್ಲಿ ಜಾರಿಗೆ ತಂದಿರುವ ವಿದ್ಯಾಸಿರಿ ಯೋಜನೆಯನ್ನು ವಿಸ್ತರಿಸಬೇಕು ಮತ್ತು 9, 10ನೇ ತರಗತಿ ವಿದ್ಯಾರ್ಥಿಗಳಿಗೂ ಸಹಪಂಕ್ತಿ ಭೋಜನದಲ್ಲಿ ಮೊಟ್ಟೆ ನೀಡುವುದು, ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ ಯೋಜನೆಯನ್ನು ಕಳೆದ ನಾಲ್ಕು ವರ್ಷಗಳಿಂದ ನಿಲ್ಲಿಸಲಾಗಿದೆ. ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ ಜಾರಿಗೆ ಘೋಷಣೆ ಮಾಡಬೇಕು ಎಂದರು.

ವಿಶ್ವವಿದ್ಯಾನಿಲಯಗಳಲ್ಲಿ ದೀರ್ಘ ಕಾಲದಿಂದ ಭರ್ತಿ ಮಾಡದೇ ಉಳಿದಿರುವ ಅಧ್ಯಾಪಕರ ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡಬೇಕು, ಅನುದಾನಿತ ಶಿಕ್ಷಣ ಸಂಸ್ಥೆಗಳ ಬೋಧಕ, ಬೋಧಕೇತರರಿಗೆ ಹೊಸ ಪಿಂಚಣಿ ಯೋಜನೆಯಲ್ಲಿ ಒಂದು ಪೈಸೆಯೂ ಪಿಂಚಣಿ ದೊರೆಯುತ್ತಿಲ್ಲ. ಹೀಗಾಗಿ ಸರ್ಕಾರಿ ನೌಕರರು ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆ ನೌಕರರಿಗೂ ಹಳೆ ಪಿಂಚಣಿ ಯೋಜನೆ ಜಾರಿಗೆ ತರಬೇಕು. 1995ರ ನಂತರ ಪ್ರಾರಂಭವಾದ ಕನ್ನಡ ಮಾಧ್ಯಮ ಅನುದಾನ ರಹಿತ ಶಾಲಾ ಕಾಲೇಜುಗಳ ಸಿಬ್ಬಂದಿಗಳಿಗೆ ವೇತನಾನುದಾನ ಘೋಷಣೆ ಮಾಡಬೇಕು. ನೂತನ ಶಿಕ್ಷಣ ನೀತಿ ಅನುಷ್ಠಾನದಲ್ಲಿ ಹಲವಾರು ಲೋಪ ದೋಷಗಳಿದ್ದು, ಇದರಿಂದ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆ ಉಂಟಾಗಿದೆ. ಈ ಎಲ್ಲಾ ಸಮಸ್ಯೆಗಳ ಕುರಿತು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದರು.

ಪತ್ನಿಯೊಂದಿಗೆ ಅಕ್ರಮ ಸಂಬಂಧದ ಅನುಮಾನ

ಷಡ್ಕನನ್ನೇ ಇರಿದು ಕೊಂದ ನಿವೃತ್ತ ಸರ್ಕಾರಿ ನೌಕರ

ಮೈಸೂರು, ಜೂ. 17(ಆರ್‌ಕೆ)- ಪತ್ನಿಯೊಂದಿಗೆ ಅಕ್ರಮ ಸಂಬಂಧ ಇರಿಸಿಕೊಂಡಿದ್ದಾನೆ ಎಂಬ ಸಂಶಯದ ಮೇರೆಗೆ ನಿವೃತ್ತ ಸರ್ಕಾರಿ ನೌಕರನೋರ್ವ ತನ್ನ ಷಡ್ಕನೇ ಆದ ಕಟ್ಟಡ ಕಾರ್ಮಿಕನನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಿದ ಘಟನೆ ಮೈಸೂರಿನ ಕಾಕರವಾಡಿಯಲ್ಲಿ ಶನಿವಾರ ಬೆಳಗ್ಗೆ ನಡೆದಿದೆ. ರಾಘವೇಂದ್ರನಗರದ ನಿವಾಸಿ, ಕಟ್ಟಡ ಕಾರ್ಮಿಕ ರಾಮಣ್ಣ(48) ಎಂಬಾತನನ್ನು ಸರ್ದಾರ್ ವಲ್ಲಭಬಾಯ್ ಪಟೇಲ್‌ನಗರ ನಿವಾಸಿಯಾದ ನಿವೃತ್ತ ಡಿ ಗ್ರೂಪ್ ನೌಕರ ಶಿವರುದ್ರ(65) ಎಂಬಾತ ಹತ್ಯೆಗೈದಿದ್ದಾನೆ. ಇವರಿಬ್ಬರೂ ಅಕ್ಕ-ತಂಗಿಯರನ್ನು ಮದುವೆಯಾಗಿದ್ದು ರಾಮಣ್ಣ ತನ್ನ ಪತ್ನಿಯ ಜೊತೆ ಅಕ್ರಮ ಸಂಬಂಧವಿರಿಸಿಕೊಂಡಿದ್ದಾನೆ ಎಂದು ಅನುಮಾನ ಹೊಂದಿದ್ದ ಶಿವರುದ್ರ ಇಂದು ಬೆಳಗ್ಗೆ ಕಾಕರವಾಡಿಯಲ್ಲಿ ಕಟ್ಟಡ ಕೆಲಸ ಮಾಡುತ್ತಿದ್ದ ರಾಮಣ್ಣನನ್ನು ಚಾಕುವಿನಿಂದ ಇರಿದು ಹತ್ಯೆಗೈದಿದ್ದಾನೆ. ಲಕ್ಷ್ಮೀಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಶಿವರುದ್ರನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಪರಿಶಿಷ್ಟ ಸಮುದಾಯದವರಿಗೆ ಗುತ್ತಿಗೆ 1 ಕೋಟಿ ರೂ.ಗೆ ಹೆಚ್ಚಿಸಲು ಮನವಿ




ಮೈಸೂರು, ಜೂ.17(ಜಿಎ)-ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ 50 ಲಕ್ಷ ರೂ. ಗಳಿಂದ ಒಂದು ಕೋಟಿಗೆ ಟೆಂಡರ್ ಹೆಚ್ಚಿಸಬೇಕೆಂದು ಮುಖ್ಯಮಂತ್ರಿಗಳಿಗೆ ಶ್ರೀ ವಿಶ್ವಋಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಮನವಿ ಮಾಡಿದೆ..

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಅಧ್ಯಕ್ಷ ವಾಲ್ಮೀಕಿ ನಿಂಗರಾಜು ಮಾತನಾಡಿ, ಸಿದ್ದರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಮೀಸಲು ಮಾಡಿದ್ದೀರಿ. ಆದರೆ, ಎಸ್‌ಸಿ, ಎಸ್‌ಟಿ ವರ್ಗಕ್ಕೆ ವಿದ್ಯುತ್ ಹಾಗೂ ಸಿವಿಲ್ ಕೆಲಸಗಳು, ಸರ್ವೀಸ್ ಗೂಡ್ಸ್, ಹೌಸ್ ಕೀಪರ್, ರಸ್ತೆ ಬೀದಿ ದೀಪಗಳ ನಿರ್ವಹಣೆಯಲ್ಲೂ ಮೀಸಲಾತಿ ಸೇರಿಸಿಲ್ಲ. ಆದ್ದರಿಂದ ಇದರಲ್ಲಿಯೂ ಮೀಸಲಾತಿ ಕಲ್ಪಿಸಬೇಕು ಎಂದರು.

ಮೀಸಲಾತಿ ಕಾಮಗಾರಿಯಲ್ಲಿ ಕೆಪಿಟಿಸಿಎಲ್‌ನಲ್ಲಿ 50 ಲಕ್ಷ ರೂ.ಗಳಿಗೆ ಸಂಪೂರ್ಣ ಕಾಮಗಾರಿ ನೀಡಿಲ್ಲದಿರುವ ಕಾರಣ ಸಂಬಂಧಿಸಿದ ಅಧಿಕಾರಿಗಳನ್ನು ವಿಚಾರಣೆಗೊಳಪಡಿಸಬೇಕು. ರಾಜ್ಯದ ವಿವಿಧ ಇಲಾಖೆಗಳಿಗೆ ನೇಮಕ ಮಾಡುತ್ತಿರುವ ಗುತ್ತಿಗೆ ಕೆಲಸಗಾರರನ್ನು ಸರ್ಕಾರ ನೇರ ನೇಮಕಾತಿ ಮಾಡಬೇಕು. ಜೊತೆಗೆ ಗುತ್ತಿಗೆ ನೇಮಕಾತಿ ಮುಂದುವರೆಸಿದರೆ ಅದರಲ್ಲಿ ಮೀಸಲಾತಿ ಪಾಲಿಸಬೇಕು. ಎಲ್ಲಾ ರೀತಿಯ ಸಹಕಾರಿ ಸಂಘಗಳಲ್ಲಿ ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳಿಗೆ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ಕಲ್ಪಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಕೃಷ್ಣನಾಯಕ, ರಮ್ಮನಹಳ್ಳಿ ನಾಗರಾಜು, ರಮ್ಮನಹಳ್ಳಿ ಮಹದೇವನಾಯಕ, ಮರಿಸ್ವಾಮಿ ನಾಯಕ ಉಪಸ್ಥಿತರಿದ್ದರು.


ಪಿಎಚ್.ಡಿ ಪದವಿ



ಮೈಸೂರು, ಜೂ.17-ಡಾ.ಜಿ.ವಿಶ್ವನಾಥಪ್ಪ ಅವರ ಮಾರ್ಗದರ್ಶನದಲ್ಲಿ ವೈ. ಉದಯ್ ಅವರು ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಲೋಕಾಯುಕ್ತ ಸಂಸ್ಥೆ ವಾಚ್ ಡಾಗ್‌ನಂತೆ ಕಾರ್ಯ ನಿರ್ವಹಣೆ

ಉಪ ಲೋಕಾಯುಕ್ತ ಕೆ.ಎನ್.ಫಣೀಂದ್ರ



ಮೈಸೂರು,ಜೂ.17(ಎಂಟಿವೈ)- ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳ ಕರ್ತವ್ಯ ನಿರ್ವಹಿಸುವ ವೇಳೆ ಆಗುವ ಲೋಪದೋಷಗಳಿಂದಾಗಿಯೇ ಸಮಸ್ಯೆಗಳು ಉದ್ಭವಿಸಲಿದ್ದು, ಎಲ್ಲಿಯೂ ನ್ಯಾಯ ಸಿಗದಿದ್ದಕ್ಕಾಗಿ ಮಾತ್ರ ಜನ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಲಿದ್ದಾರೆ. ವಾಚ್ ಡಾಗ್‌ನಂತೆ ಲೋಕಾಯುಕ್ತ ಸಂಸ್ಥೆ ಕಾರ್ಯನಿರ್ವಹಿಸಲಿದ್ದು, ಸಾರ್ವಜನಿಕ ಆಡಳಿತ ವ್ಯವಸ್ಥೆಯಲ್ಲಿ ಲೋಪ ಎಸಗುವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಿದೆ ಎಂದು ಉಪ ಲೋಕಾಯುಕ್ತ ಕೆ.ಎನ್.ಫಣೀಂದ್ರ ತಿಳಿಸಿದರು.

ಮೈಸೂರು ಜಿ.ಪಂ ಸಭಾಂಗಣದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವ ಮುನ್ನ ವಿವಿಧ ಇಲಾಖೆಗಳ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಅಧಿಕಾರಿಗಳು ಪಾರದರ್ಶಕವಾಗಿ ಪ್ರಾಮಾಣಿಕವಾಗಿ, ನ್ಯಾಯಯುತವಾಗಿ ಸರ್ಕಾರದ ಕರ್ತವ್ಯಗಳನ್ನು ನಿರ್ವಹಿಸಬೇಕು. ಕಾರ್ಯಾಂಗ, ಶಾಸಕಾಂಗ ತಪ್ಪು ದಾರಿ ಹಿಡಿದು ಕಾನೂನು ಉಲ್ಲಂಘನೆ ಮಾಡಿದರೆ, ಲೋಕಾಯುಕ್ತ ಸಂಸ್ಥೆ ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಳ್ಳುತ್ತದೆ ಎಂದು ಎಚ್ಚರಿಸಿದರು.

ಸಾರ್ವಜನಿಕರಿಗೆ ಆಗಬೇಕಾದ ಕೆಲಸವನ್ನು ಉದ್ದೇಶಪೂರ್ವಕವಾಗಿ ವಿಳಂಬ ಮಾಡುವುದರಿಂದ ಅನಿವಾರ್ಯವಾಗಿ ಜನ ಲೋಕಾಯುಕ್ತರ ಮೊರೆ ಹೋಗುತ್ತಾರೆ. ಈಗಾಗಲೇ 7 ಜಿಲ್ಲೆಗಳಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕಾರ ಮಾಡುವ ಕಾರ್ಯಕ್ರಮ ನಡೆಸಿದ್ದೇವೆ ಎಂದರು.

ಲೋಕಾಯುಕ್ತ ಸಂಸ್ಥೆ ಸ್ವತಂತ್ರ ಸಂಸ್ಥೆಯಾಗಿದೆ. ಅಧಿಕಾರಿಗಳಿಂದ ಹಿಡಿದು ಸಾರ್ವಜನಿಕರೂ ಲೋಕಾಯುಕ್ತ ಕಾನೂನುಗಳನ್ನು ಓದಿಕೊಳ್ಳಬೇಕಾಗಿದೆ. ಲೋಕಾಯುಕ್ತದ ವ್ಯಾಪ್ತಿಗೆ ಯಾರೆಲ್ಲ ಬರುತ್ತಾರೆ. ಯಾರ ವಿರುದ್ಧ ಕ್ರಮ ಕೈಗೊಳ್ಳಲು ಸಾಧ್ಯ ಎಂಬ ಅಂಶವನ್ನು ಅರಿತುಕೊಳ್ಳಬೇಕು. ನಿವೃತ್ತರಾದವರು, ಖಾಸಗಿ ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಲೋಕಾಯುಕ್ತ ಸಂಸ್ಥೆಗೆ ಅಧಿಕಾರವಿಲ್ಲ. ಖಾಸಗಿ ಬ್ಯಾಂಕ್‌ಗಳ ವಿರುದ್ಧದ ಪ್ರಕರಣ, ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವ ಪ್ರಕರಣ, ತೀರ್ಪು ಪುನರ್ ಪರಿಶೀಲಿಸುವ ಪ್ರಕರಣವು ಲೋಕಾಯುಕ್ತರ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸಾರ್ವಜನಿಕರಿಂದ ದೂರು ಸ್ವೀಕರಿಸಿ ನಮ್ಮ ವ್ಯಾಪ್ತಿಗೆ ಬಂದರೆ ದೂರನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಕಳುಹಿಸಿ ಸಮಸ್ಯೆ ಪರಿಹರಿಸಲಾಗುವುದು. ನಮ್ಮ ವ್ಯಾಪ್ತಿ ಮೀರಿದ ದೂರಾದರೆ ಮಾಹಿತಿ ನೀಡಿ ನ್ಯಾಯಾಲಯಕ್ಕೆ ದೂರು ಸಲ್ಲಿಸಲು ಮಾರ್ಗದರ್ಶನ ನೀಡಲಾಗುವುದು. ಸಾರ್ವಜನಿಕರಿಗೆ ತಲುಪಬೇಕಾದ ಸವಲತ್ತು ನ್ಯಾಯಯುತವಾಗಿ ಸಕಾಲದಲ್ಲಿ ಅಧಿಕಾರಿಗಳು ತಲುಪಿಸಬೇಕು ಎಂದರು.

ಅರ್ಜಿ ಸ್ವೀಕಾರ ಸೋಮವಾರಕ್ಕೆ ಮುಂದೂಡಿಕೆ

ಮೈಸೂರು, ಜೂ.17(ಎಸ್‌ಪಿಎನ್)- ಶನಿವಾರ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ರವರೆಗೆ 81 ಮಂದಿ ಅರ್ಜಿದಾರರ ಮನವಿ ಆಲಿಸಿದ ಉಪ ಲೋಕಾಯುಕ್ತರು, ಉಳಿದ ಅರ್ಜಿಗಳನ್ನು ಸೋಮವಾರದಿಂದ ಆಲಿಸಲಾಗುವುದು ಎಂದು ತಿಳಿಸಿದರು. ಸೋಮವಾರ ಬೆಳಗ್ಗೆ 10 ಗಂಟೆಗೆ ಎಲ್ಲಾ ಇಲಾಖೆ ಮುಖ್ಯಸ್ಥರು, ಸಭೆಯಲ್ಲಿ ಸೂಚಿಸಿರುವ ಮಾಹಿತಿಗಳನ್ನು ತಪ್ಪದೇ ಸೋಮವಾರ(ಜೂ.19) ಸಭೆಗೆ ತಲುಪಿಸುವಂತೆ ಸೂಚಿಸಿ, ಸಭೆಯನ್ನು ಸೋಮವಾರಕ್ಕೆ ಮುಂದೂಡಿದರು.

113 ಕೇಸ್ ದಾಖಲು: ಲೋಕಾಯುಕ್ತ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ 113 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದು, 81 ಮಂದಿ ಅರ್ಜಿದಾರರ ಅರ್ಜಿಗಳನ್ನು ಪರಿಶೀಲಿಸಲಾಗಿದೆ. ಇದರಲ್ಲಿ ಲೋಕಾಯುಕ್ತರ ವ್ಯಾಪ್ತಿಗೆ ಬರುವ 8 ಪ್ರಕರಣ, ಉಪ ಲೋಕಾಯುಕ್ತರಿಗೆ ಸಂಬಂಧಿಸಿದ 17, ಇತರೆ 2, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ 4 ಪ್ರಕರಣಗಳು ಸೇರಿದಂತೆ ಒಟ್ಟು 81 ಪ್ರಕರಣಗಳ ಬಗ್ಗೆ ಪರಿಶೀಲಿಸಲಾಗಿದೆ.

ಸುಳ್ಳು ದೂರುದಾರರಿಗೆ ಒಂದು ವರ್ಷ ಜೈಲು ಶಿಕ್ಷೆ

ಕೆಲವರು ಸುಖಾಸುಮ್ಮನೆ ದೂರು ಕೊಡುವ ಚಟ ಹೊಂದಿದ್ದಾರೆ. ಯಾವುದೇ ದಾಖಲೆಯಿಲ್ಲದೆ ದೂರು ಸಲ್ಲಿಸುವುದು. ತಪ್ಪು ಮಾಹಿತಿಯೊಂದಿಗೆ ದೂರು ನೀಡುವುದನ್ನು ಮಾಡುತ್ತಾರೆ. ಅಂತಹ ಸುಳ್ಳು ದೂರುದಾರರಿಗೆ ತಕ್ಕ ಪಾಠ ಕಲಿಸಲು ಲೋಕಾಯುಕ್ತ ಕಾನೂನಿನಲ್ಲಿ ಅವಕಾಶ ಇದೆ. ಒಂದು ವರ್ಷ ಕಾಲ ಜೈಲಿಗೆ ಕಳುಹಿಸುವ ಅಧಿಕಾರ ಲೋಕಾಯುಕ್ತ ಸಂಸ್ಥೆಗೆ ಇದೆ ಎಂದರು.

'ಮೈಸೂರು ಮಿತ್ರ'ನ 44ನೇ ವಾರ್ಷಿಕೋತ್ಸವದ ಕಥಾಸ್ಪರ್ಧೆಯ ಸಮಾಧಾನಕರ ಬಹುಮಾನಿತ ಕಥೆ

ಗೊಂಬೆ ಆಡ್ಸೋನು ಮ್ಯಾಲೆ ಕುಂತೌನೆ..

ಸಮಾಧಾನಕರ ಬಹುಮಾನ



ಎಸ್.ಗಣೇಶ್
ಎಲ್‌ಐಜಿ 261,
ಹೆಬ್ಬಾಳ್ 3ನೇ ಹಂತ
ಸುಬ್ರಹ್ಮಣ್ಯನಗರ
ಮೈಸೂರು–570016

ಮಾರ್ಚ್ ಮಾಹೆ ಅಂತ್ಯದ ದಿನ, ಅತೀ ಬಿಸಿಲಿನ ತಾಪಕ್ಕೆ ಸುತ್ತಲ ವಾತಾವರಣದಲ್ಲಿನ ಗಾಳಿಯೂ ಬಿಸಿಯಾಗಿತ್ತು. ಮಂಜುಗಡ್ಡೆಯನ್ನು ಒಮ್ಮೆ ಮೇಲಕ್ಕೆ ಚಿಮ್ಮಿಸಿದರೆ ಅದು ಭುವಿಯ ಸ್ಪರ್ಶವಾಗುವ ಮೊದಲೇ ಘನ ರೂಪದಿಂದ ದ್ರವ ರೂಪ ಪಡೆದುಕೊಳ್ಳುವಷ್ಟು ಸೆಖೆ. ರಸ್ತೆಯಲ್ಲಿ ಹಾಕಲಾದ ಡಾಂಬರು ಮೆತ್ತಗಾಗಿ ನನ್ನ ಚಪ್ಪಲಿಗೆ ಅಂಟುತ್ತಿತ್ತು. ರಸ್ತೆಯ ಮಗ್ಗುಲಲ್ಲಿ ಮರಗಳ ಇರುವಿಕೆ ನೋಡಿಕೊಂಡು ಮರದ ಛಾಯೆಯ ಅಡಿ ನಡೆದು ಸಾಗುತ್ತಿದ್ದೆ. ಬೆರಳೆಣಿಕೆಯ ಮರಗಳು ಆದರೂ ಸ್ವಲ್ಪ ಸಮಾಧಾನ ನೀಡುತ್ತಿದ್ದವು. ಹೇಗೆ ಮರಳುಗಾಡಿನಲ್ಲಿ ಎಲ್ಲಾದರೂ ನೀರು ಸಿಕ್ಕರೆ ಸ್ವರ್ಗ ಕಂಡಷ್ಟು ಸಂತೋಷವಾಗುವುದೋ ಹಾಗೆ ಮರದ ತಂಪು ನೆರಳು ಸುಖ ನೆಮ್ಮದಿ ನೀಡುತ್ತಿತ್ತು. ಒಂದು ಮರದ ಬೆಲೆ ಏನು ಅಂತ ಆಗ ನನಗೆ ಅನ್ನಿಸಿತ್ತು. ಹಾಗೂ ಹೀಗೂ ನಾನು ತಲುಪಬೇಕಿದ್ದ ಸ್ಥಳಕ್ಕೆ ಸೇರಿದ್ದೆ. ಸುಮಾರು ಹನ್ನೊಂದುವರೆಯ ಸಮಯವಿರಬಹುದು. ಒಳಗೆ ಹೋಗುತ್ತಿದ್ದಂತೆ ಎಲ್ಲರ ಮುಖದಲ್ಲೂ ಬೆವರ ಹನಿ ಜಿನುಗುತ್ತಿದ್ದನ್ನು ಕಂಡು ನನ್ನ ಹಣೆಯನ್ನು ಒಮ್ಮೆ ಒತ್ತಿ ನೋಡಿಕೊಂಡೆ. ಕೋಣೆಯ ಎಲ್ಲಾ ಕಡೆ ದೃಷ್ಟಿ ಹಾಯಿಸಿದೆ. ಮೇಲ್ಛಾವಣಿಯನ್ನು ನೋಡಿದೆ, ಎಲ್ಲಾ ಫ್ಯಾನ್‌ಗಳು ತಿರುಗುತ್ತಿದ್ದವು. ಫ್ಯಾನ್‌ನ ಗಾಳಿ ಸಾಲದೇ ಫೈಲ್ ಅನ್ನು ಮುಖದ ಮುಂದೆ ಹಿಡಿದು ಎಡಕ್ಕೂ ಬಲಕ್ಕೂ ಆಡಿಸುತ್ತಿರುವ ದೃಶ್ಯ ಅಲ್ಲಲ್ಲಿ ಕಾಣುತ್ತಿತ್ತು. ಈ ಸನ್ನಿವೇಶದಲ್ಲಿ ಮುರುಗನ್ ಬಗ್ಗೆ ಯಾರನ್ನು ಕೇಳೋದು ಅಂತ ಆತಂಕ ಮನೆ ಮಾಡಿತ್ತು. ಎಂದೂ ಇಷ್ಟು ದೊಡ್ಡ ಕಚೇರಿ ನೋಡದ ನಾನು, ಒಂದು ನಿಮಿಷ ಕಕ್ಕಾಬಿಕ್ಕಿಯಾಗಿ ಕಣ್‌ಕಣ್ ಬಿಡುತ್ತಾ ಕಲ್ಲಾಗಿ ನಿಂತಲ್ಲೇ ನಿಂತುಬಿಟ್ಟೆ.

* * *

"ಹಲೋ.. ಮಿಸ್ಟರ್.. ಹಲೋ.. ಸಾರ್.." ಅಂತ ಯಾರೋ ನನ್ನನ್ನೇ ನೋಡಿ ಕೂಗಿದ ಧ್ವನಿ ಹತ್ತಿರದಲ್ಲೇ ಕೇಳಿ ಬಂತು. ಮೊದಲು ನನ್ನ ಕತ್ತನ್ನು ಸುತ್ತಲೂ ಆಡಿಸಿದೆ, ಆದರೂ ಯಾರು ಅಂತ ತಿಳಿಯಲಿಲ್ಲ.. ಆನಂತರ ಇಡೀ ದೇಹವನ್ನು ರೈಟ್ ಎಬೋಟ್ ಟರ್ನ್ ಮಾಡಿ ನೋಡಿದರೆ ಬಿಳಿ ಅಂಗಿ ಪ್ಯಾಂಟು ಧರಿಸಿದ ವಾಮನ ಗಾತ್ರದ ವ್ಯಕ್ತಿ ಗೋಚರಿಸಿದ. ಹಾಗಲ ಜಗಿದವನ ಮೋರೆ ಹೇಗಿರುತ್ತೋ ಹಾಗಿತ್ತು ಅವನ ರಿಯಾಕ್ಷನ್. ಸ್ವಲ್ಪ ಗಾಬರಿಯಾದೆ. ಏನು ಮಾತಾಡಬೇಕೆಂದು ತೋಚದಾಗಿ ಮೌನವಾಗಿ ನಿಂತಿದ್ದೆ.

"ನಿಮ್ಮನ್ನೇ ನಾನು ಕರೆದಿದ್ದು ಸಾರ್.. ಓಡಾಡೊ ದಾರೀಲಿ ಹೀಗೆ ನಿಂತು ಬಿಟ್ಟರೆ ಹೇಗೆ ಸ್ವಾಮಿ, ಜನಗಳಿಗೆ ಓಡಾಡಲು ಜಾಗ ಬಿಟ್ಟು ಒಂದು ಸೈಡ್‌ಲ್ಲಿ ನಿಲ್ಲಬೇಕು ಆಯ್ತಾ?"

"ಸಾರಿ, ಗೊತ್ತಾಗಲಿಲ್ಲ.." ಅಂತ ಹೇಳಿ ಸ್ವಲ್ಪ ಎಡಬದಿಗೆ ಎರಡು ಹೆಜ್ಜೆಯನ್ನು ಸರಿಸಿ ನಿಂತೆ.

"ಸಾರ್.. ಇಲ್ಲಿ ಮುರುಗನ್ ಅನ್ನೋರು ಎಲ್ಲಿ ಸಿಗುತ್ತಾರೆ ಅಂತ ಹೇಳ್ತೀರಾ"? ಅಂದೆ.


"ನಿಮಗೆ ಯಾವ ಮುರುಗನ್ ಬೇಕು? ಪೆನ್‌ಶನ್ ಸೆಕ್ಷನ್ ಮುರುಗನ್ನೋ..? ಅಡ್ಮಿನ್ ಸೆಕ್ಷನ್ ಮುರುಗನ್ನೋ..?"

"ಪೆನ್‌ಶನ್ ಸೆಕ್ಷನ್.."

"ಓ ಅವರಾ.. ಇವತ್ತು ರಜೆಯಲ್ಲಿದ್ದಾರೆ. ಅವರು ನಿಮಗೆ ಸಿಗಲ್ಲ. ಏನಾಗ್ಬೇಕು ಹೇಳಿ.."

"ಅಯ್ಯೋ.. ಅವರನ್ನೇ ನೋಡ್ಬೇಕಿತ್ತು.. ನಾನು ರಿಟೈರ್ ಆಗೋಕ್ಕೆ ಇನ್ನು ಮೂರು ತಿಂಗಳಿದೆ.. ನಮ್ಮ ಆಫೀಸ್‌ನಿಂದ ನನ್ನ ಪೆನ್ಷನ್ ಪೇಪರ್ಸ್ ಇಲ್ಲಿಗೆ ಕಳುಹಿಸಿದ್ದಾರೆ. ಅದರಲ್ಲಿ ಒಂದು ಸಹಿ ಬಿಟ್ಟುಹೋಗಿತ್ತು. ಅದಕ್ಕೆ ಸಹಿ ಮಾಡಿ ಬನ್ನಿ ಅಂತ ಹೇಳಿದ್ರು, ಅದಕ್ಕೆ ಬಂದೆ. ನನ್ನ ಪೆನ್‌ಶನ್ ಡಾಕ್ಯೂಮೆಂಟ್ ಕೊಟ್ಟರೆ ಸಹಿ ಮಾಡಿ ಹೋಗ್ತೀನಿ" ಅಂದೆ.

"ನೋಡಿ ಸಾರ್.. ಇವತ್ತು ಅವರಿಲ್ಲ.. ಅವರ ಮಗುಗೆ ಹುಷಾರಿಲ್ಲ ಅಂತ ಫೋನ್ ಮಾಡಿದ್ರು.. ಅವರು ಬಂದ ಮೇಲೆನೇ ನೀವು ಬನ್ನಿ".



"ಬೇರೆ ಯಾರೂ ಆ ಸೆಕ್ಷನ್ ನೋಡೋಲ್ವಾ? ಅವರಿಗೆ ಕೇಳಿ ನೋಡಿ" ಅಂದೆ.

"ಇಲ್ಲಾ ಸಾರ್.. ಎಮರ್ಜೆನ್ಸಿ ಇದ್ರೆ ಸಾಹೇಬ್ರು ಯಾರಿಗೆ ಹೇಳ್ತಾರೋ ಅವರು ನೋಡ್ತಾರೆ. ಅವರಿಲ್ಲದೇ ನಿಮ್ಮ ಪೆನ್‌ಶನ್ ಡಾಕ್ಯೂಮೆಂಟ್ ಯಾರು ಕೊಡಲ್ಲಾ.. ಇನ್ನೊಂದಿನ ಬನ್ನಿ.. ಬರೋಕೆ ಮುಂಚೆ ಫೋನ್ ಮಾಡಿ ಬನ್ನಿ ಸಾರ್".

"ನಾನು ಬಹಳ ದೂರದಿಂದ ಬರೋದು. ಬೆಳಗ್ಗೆ ಐದು ಗಂಟೆಗೆ ಮನೆ ಬಿಟ್ಟು ಬಂದಿದ್ದೀನಿ.. ಸಡನ್ ಆಗಿ ಅವರು ಆಫೀಸ್‌ಗೆ ಬರಲ್ಲ ಅನ್ನೋದು ನನಗೆ ಹೇಗೆ ಗೊತ್ತಾಗಬೇಕು? ಛೇ.. ಅಷ್ಟು ದೂರದಿಂದ ಬಂದಿದ್ದು ವೇಸ್ಟ್ ಆಯ್ತಲ್ಲ"?. ಅಂತ ಅವನಿಗೆ ಹೇಳಿ ಅಲ್ಲಿಂದ ಹೊರಡುತ್ತಿದ್ದಂತೆ..

> **"ಹೌದಾ? ಡಾಕ್ಟರೇ ಎಷ್ಟು ಖರ್ಚಾದರು ಸರಿ ನನ್ನ ತಮ್ಮನ್ನನ್ನು ಹೇಗಾದರೂ ಬದುಕಿಸಿ" ಅಂತ ಆ ಉದಯ್ ಬೊಗಳೋದೆ.. ಅದು ಸಾಲದು ಅಂತ, "ನೋಡು ಸೂರಿ ಒಂದು ವೇಳೆ ನಿನ್ನ ಅಪ್ಪಂಗೆ ರಿಟೈರ್ ಆಗೋ ಮುಂಚೆ ಹೆಚ್ಚು ಕಮ್ಮಿ ಆದರೂ ನಿನಗೆ ನಿನ್ನ ಅಪ್ಪನ ಕೆಲಸ ಕೊಡ್ತಾರೆ, ನಿನ್ನ ಅಮ್ಮಂಗೆ ಪೆನ್ಶನ್ ಬರುತ್ತೆ.. ಯೋಚಿಸಬೇಡ.. ನಿನ್ನ ಅಮ್ಮನ್ನ ಚೆನ್ನಾಗಿ ನೊಡ್ಕೋ" ಅಂತ ಹೇಳಿ ಹೋಗೆ ಬಿಟ್ಟ.. ಅಲ್ಲಿಗೆ ಮುಗಿತು.. ನನ್ನ ನಾಟಕದ ನಿದ್ದೆಯಿಂದ ಏಳೋದ್ರಲ್ಲಿ ಪ್ರಯೋಜನವಿಲ್ಲ ಅಂತ ಹಾಗೆ ನಿಜ ನಿದ್ರೆಗೆ ಜಾರಿದ್ದೆ.**

"ಸಾರ್.. ಒಮ್ಮೆ ಸಾಹೇಬ್ರನ್ನ ಭೇಟಿ ಮಾಡಿ, ಅವರು ಹೇಳಿದ್ರೆ ನಿಮ್ಮ ಕೆಲಸ ಆಗತ್ತೆ" ಅಂದ

"ಥ್ಯಾಂಕ್ಸ್" ಅಂತ ಹೇಳಿ ಆ ಕಚೇರಿಯ ಮುಖ್ಯಸ್ಥರ ಛೇಂಬರ್ ಒಳಗೆ ಹೋದೆ.

ಸಾಹೇಬ್ರು ಬಹಳ ಬಿಝಿ ಇದ್ರು.. "ನಮಸ್ಕಾರ ಸಾರ್.." ಎಂದೆ, ನನ್ನ ಎಲ್ಲಾ ವಿವರ ಹೇಳಿದೆ.

"ಓ.. ಹೌದಾ?" ಅಂತ ಹೇಳಿ ಬೆಲ್ ಮಾಡಿದ್ರು.. "ಹರೀಶಾ.. ಇವರನ್ನು ಮಂಜುನಾಥ ಹತ್ರ ಕರ್ಕೊಂಡು ಹೋಗಿ.. ಇವರ ಪೆನ್ಶನ್ ಪೇಪರ್ ಮೇಲೆ ಸಹಿ ಮಾಡಿಸಿಕೊಂಡು ಕಳುಹಿಸಿ" ಅಂತ ಆದೇಶವಿತ್ತರು..

ನಾನು ಅವರಿಗೆ ಧನ್ಯವಾದ ಹೇಳಿ, ಮಂಜುನಾಥ್ ಬಳಿ ನಿಂತೆ. ಹರೀಶಾ, ಸಾಹೇಬ್ರು ಹೇಳಿದ ಎಲ್ಲಾ ವಿಷಯವನ್ನು ಮಂಜುನಾಥ್‌ರವರಿಗೆ ಹೇಳಿದ. ಅಲ್ಲಿಗೆ ನಾನು ಬಂದ ಕೆಲಸ ಮುಗಿತು. ಅವರಿಬ್ಬರಿಗೂ ಥ್ಯಾಂಕ್ಸ್ ಹೇಳಿ ಅಲ್ಲಿಂದ ಹೊರಟೆ. ಕೆಲವೊಂದು ಸಲ ನಾವು ಏನು ಆಗಲ್ಲ ಅಂದುಕೊಂಡಿದ್ದೆವೋ ಅದು ಸುಲಭದಲ್ಲಿ ಆಗುತ್ತೆ ಅನ್ನೋದು ನನಗೆ ಆಗ ತಿಳಿಯಿತು. ಮನೆಗೆ ಬಂದು ಪೆನ್ಶನ್ ಆಫೀಸ್‌ನಲ್ಲಿ ನಡೆದ ಎಲ್ಲಾ ವಿಷಯ ಮಡದಿ ಜಯಾ ಬಳಿ ಹೇಳಿದೆ.

* * *

ಹಗಲು ಜಾರಿ ಸಂಜೆ ಕತ್ತಲು ಆವರಿಸಲು ಪ್ರಾರಂಭಿಸಿತ್ತು.. ಮನೆಯ ಹೊರಗೆ ಜಗುಲಿಯಲ್ಲಿ ಆಗತಾನೆ ಕಾಫಿ ಹೀರಿ ವಿರಮಿಸುತ್ತಿದ್ದೆ. ಅಷ್ಟರಲ್ಲಿ ನನ್ನ ಮಗ ಗೇಟು ತೆರೆದು ಒಳಗೆ ಬರುತ್ತಿದ್ದದ್ದು ಕಂಡಿತು. ನನ್ನನ್ನು ನೋಡಿದರೂ ನೋಡದ ರೀತಿ ತಲೆ ಬಗ್ಗಿಸಿ ಮನೆಯೊಳಗೆ ತೆರಳುತ್ತಿದ್ದ.

"ಓ.. ಸೂರಿ ನಿಲ್ಲು.. ಯಾಕೋ ಹಾಗೆ ಹೋಗ್ತೀದ್ದೀಯಾ? ನಾನು ಇಲ್ಲೆ ಇದ್ದೀನಿ ಕಾಣ್ಲಿಲ್ವಾ?" ಎಂದೆ.

"ಕಾಣ್ತು.. ಏನಿವಾಗ? ನಾನು ಮಾತಾಡ್ಬೇಕಿತ್ತಾ? ನನಗೆ ನನ್ನದೇ ಟೆನ್ಶನ್.. ಅದರ ಮೇಲೆ ನಿಮ್ಮದು ಬೇರೆ".

"ಏನು ನಿನಗೆ ಟೆನ್ಶನ್? ಕೆಲಸ ಇವತ್ತು ಆಗ್ಲಿಲ್ವಾ? ಹೋಗ್ಲಿ ಬಿಡು? ಪ್ರಯತ್ನಪಡ್ತಾ ಇರು, ಸಿಗುತ್ತೆ.. ಅಂದಾಗೆ ಹೋದವಾರ ಕೆ.ಎ.ಎಸ್. ಇಂಟರ್‌ವ್ಯೂ ಆಯ್ತಲ್ಲಾ ಅದರ ರಿಸಲ್ಟ್ ಏನಾಯ್ತು?"

"ಯಾವಾಗ ಸಿಗುತ್ತೆ? ನನ್ಗೂ ವಯಸ್ಸು ಮೀರೋಗ್ತಿದೆ.. ಇನ್ನು ಒಂದು ವರ್ಷ ಮಾತ್ರ ಇರೋದು.. ಈಗಾಗಲೇ ಮೂರು ಕೆಲಸ ಹಿಡಿಸಿಲ್ಲಾ ಅಂತ ಬಿಟ್ಟೆ.. ನನಗೆ ಸರಿ ಹೋಗೋ ಕೆಲಸ ಸಿಗಲ್ಲಾ ಅನ್ಸುತ್ತೆ.. ನಿಮ್ಮ ತರಹ ಸುಲಭದಲ್ಲಿ ಕೆಲಸ ಎಲ್ಲಿ ಸಿಗುತ್ತೆ? ಇನ್ನು ಮೂರು ತಿಂಗಳು ಆದ ಮೇಲೆ ನಿಮ್ಮ ಪೆನ್ಶನ್‌ನಲ್ಲಿ ನಾನು ಊಟ ಮಾಡಬೇಕಾದ ಕರ್ಮ ಬೇರೆ.. ಅವಾಗ ಅರೆ ಹೊಟ್ಟೆನೇ ಗತಿ. ಇನ್ನು ಅಮ್ಮಂಗೆ ವರ್ಷಕ್ಕೆ ಎರಡು ಬಾರಿ ಸೀರೆ ತಂದುಕೊಡ್ತಿದ್ದೆ, ಇನ್ನು ಒಂದು ಸಿಗುತ್ತೋ ಇಲ್ವೋ? ಪುಣ್ಯಕ್ಕೆ ನಮ್ ತಾತ ಮಾಡಿದ ಈ ಹಳೇ ಮನೆ ಇರೋದ್ರಿಂದ ಬಾಡಿಗೆ ಕಟ್ಟೋ ಹಾಗಿಲ್ಲ. ಅದೇ ಸಮಾಧಾನ.. ಇನ್ನು ಕೆ.ಎ.ಎಸ್. ರಿಸಲ್ಟ್ ಬಂದಿಲ್ಲಾ. ಇದು ಹಮಾರಾ ಬಸ್ ಕಾ ಬಾತ್ ನಹಿ ಬಿಡಪ್ಪ.." ಅಂದ

"ಅಲ್ವೋ.. ಸೂರಿ ಇಷ್ಟು ದಿನ ನಾನು ದುಡಿದಿದ್ದು ಎಲ್ಲೆಲ್ಲಿ ಖರ್ಚಾಯ್ತು ಅಂತ ನಿನಗೆ ಗೊತ್ತಿದೆ. ಇಲ್ಲಿಯವರೆಗೂ ಹೇಗೆ ಸಾಗಿತೋ ಹಾಗೇ ಮುಂದೆ ಸಹ ಸಾಗುತ್ತೇ.. ಅದಕ್ಕೆಲ್ಲಾ ಬೇಜಾರ್ ಮಾಡ್ಕೊಂಡ್ರೆ ಆಗುತ್ತಾ. ನೀನು ಹೀಗೆ ಬೇಜಾರ್ ಮಾಡ್ಕೊಂಡ್ರೆ ನಿನ್ ಅಮ್ಮ ಕೊರಗ್ತಾಳೆ.. ಆ ಚಿಂತೆಯಲ್ಲೆ ಅವಳ ಬಿಪಿ ಉಬ್ಬಸ ಜಾಸ್ತಿ ಆಗಿ ನರಳೊದು ನನ್ನ ಕೈಲಿ ನೋಡೋಕೆ ಆಗಲ್ಲ.. ನೀನು ಅಮ್ಮನಿಗೆ ಧೈರ್ಯ ಹೇಳು.. ಆಯ್ತಾ?" ಅಂದೆ

"ಸರಿ.. ಏನು ಕರ್ಮನೋ.. ಒಟ್ಟಿನಲ್ಲಿ ಬಡವರ ಮನೆಯಲ್ಲಿ ಹುಟ್ಟಬಾರದು.. ಒಂದು ಇದ್ದರೆ ಇನ್ನೊಂದು ಇರಲ್ಲ.. ಒಂದೊಂದು ಅಗಳನ್ನು ಎಣಿಸಿ ಎಣಿಸಿ ಉಣಬೇಕು.. ಇಷ್ಟೇ ಜೀವನ.. ಸಾಯೋವರೆಗೂ ಯಾವ್ದೂ ಬದಲಾಗಲ್ಲ" ಅಂತ ಗೊಣಗ್ತಾ ನಡೆದ.

* * *

ಊಟ ಮುಗಿದಿತ್ತು.. ಹಾಗೇ, ಚೇರ್ ಮೇಲೆ ಕುಳಿತಿದ್ದೆ.. ಮಗ ಆಡಿದ ಮಾತುಗಳು ಕಿವಿಯ ಸುತ್ತಾ ಗಿರಕಿಹೊಡೆಯುತ್ತಿತ್ತು.. ಮುಂದೆ ಏನು ಮಾಡೋದು ಅಂತ ದಿಕ್ಕು ಕಾಣದೆ ಹಾಗೆ ಕಣ್ಣು ಮುಚ್ಚಿದ್ದೆ. ಮತ್ತೆ ಕಣ್ಣು ಬಿಟ್ಟು ನೋಡ್ತೀನಿ. ಆಸ್ಪತ್ರೆಯ ಬೆಡ್ ಮೇಲೆ ಮಲಗಿದ್ದೀನಿ.. ನನ್ನ ಸುತ್ತಾ ನರ್ಸ್‌ಗಳು ಓಡಾಡ್ತಾ ಇದ್ದಾರೆ.. ಐಸಿಯು ವಾರ್ಡ್‌ನಲ್ಲಿ ಹಾಕಿದ್ದಾರೆ.. ಒಂದು ಕ್ಷಣ ಗಾಬರಿಯಾಗಿ ನರ್ಸನ್ನ ಕೇಳಿದೆ.. "ಸಿಸ್ಟರ್, ನನಗೆ ಏನಾಗಿದೆ?"

"ಓ, ಅದಾ.. ನಿಮಗೆ ಹಾರ್ಟ್ ಅಟ್ಯಾಕ್ ಆಗಿದೆ" ಅಂತ ಹೇಳಿ ಹೊರಟು ಹೋಗುತ್ತಿದ್ದಂತೆ ಆ ಕಡೆಯಿಂದ ನನ್ನ ಮಡದಿ ಮಗನೊಂದಿಗೆ ಒಳಗೆ ಬರುತ್ತಿರುವುದನ್ನು ಕಂಡು ಅವರು ಏನು ಮಾತಾಡುತ್ತಾರೋ ಕೇಳೋಣಾ ಅಂದುಕೊಂಡು ಮಲಗಿದವನಂತೆ ನಟಿಸಿದೆ. ಅದೇ ವೇಳೆಗೆ ನನ್ನ ಕಸಿನ್ ಉದಯ್ ಸಹ ಬಂದ. ಕೆಲವೇ ಸೆಕೆಂಡ್‌ಗೆ ಡಾಕ್ಟರ್ ಸಹ ಬಂದರು..

"ನೋಡಿ ಮಾ.. ನಿಮ್ ಯಜಮಾನರಿಗೆ ಸಿವಿಯರ್ ಕಾರ್ಡಿಯಾಕ್ ಅರೆಸ್ಟ್ ಆಗಿದೆ.. ಅವರನ್ನು ಉಳಿಸೋ ಎಲ್ಲಾ ಪ್ರಯತ್ನ ಮಾಡ್ತಿದ್ದೀವಿ.. ಇನ್ನು ದೇವರೇ ಕಾಪಾಡಬೇಕು" ಅಂತ ಡಾಕ್ಟರ್ ಹೇಳುತ್ತಿದ್ದಂಗೆ,

"ಹೌದಾ? ಡಾಕ್ಟರೇ ಎಷ್ಟು ಖರ್ಚಾದರು ಸರಿ ನನ್ನ ತಮ್ಮನ್ನನ್ನು ಹೇಗಾದರೂ ಬದುಕಿಸಿ" ಅಂತ ಆ ಉದಯ್ ಬೊಗಳೋದೆ.. ಅದು ಸಾಲದು ಅಂತ, "ನೋಡು ಸೂರಿ ಒಂದು ವೇಳೆ ನಿನ್ನ ಅಪ್ಪಂಗೆ ರಿಟೈರ್ ಆಗೋ ಮುಂಚೆ ಹೆಚ್ಚು ಕಮ್ಮಿ ಆದರೂ ನಿನಗೆ ನಿನ್ನ ಅಪ್ಪನ ಕೆಲಸ ಕೊಡ್ತಾರೆ, ನಿನ್ನ ಅಮ್ಮಂಗೆ ಪೆನ್ಶನ್ ಬರುತ್ತೆ. ಯೋಚಿಸಬೇಡ.. ನಿನ್ನ ಅಮ್ಮನ್ನ ಚೆನ್ನಾಗಿ ನೋಡ್ಕೋ" ಅಂತ ಹೇಳಿ ಹೋಗೆ ಬಿಟ್ಟ.. ಅಲ್ಲಿಗೆ ಮುಗಿತು.. ನನ್ನ ನಾಟಕದ ನಿದ್ದೆಯಿಂದ ಏಳೋದ್ರಲ್ಲಿ ಪ್ರಯೋಜನವಿಲ್ಲ ಅಂತ ಹಾಗೆ ನಿಜ ನಿದ್ರೆಗೆ ಜಾರಿದ್ದೆ.

ಆಸ್ಪತ್ರೆಯಿಂದ ಒಂದು ವಾರದೊಳಗೆ ಹುಷಾರಾಗಿ ಮನೆಗೆ ಬಂದೆ.. ಮನೆಯ ವಾತಾವರಣ ಎಲ್ಲವೂ ಬದಲಾಗಿತ್ತು.. ನನ್ನ ಮಗನ ಮಾತಿನಲ್ಲಿ ಬದಲಾವಣೆ ಕಂಡೆ.. ನಾನು ಬದುಕಿ ಬರುವ ಭರವಸೆ ಇರದ ಅವನು ಬೇರೆಯ ಯೋಜನೆಗಳನ್ನು ರೂಪಿಸಿದ್ದ.. ಮಾನಸಿಕವಾಗಿ ಸಿದ್ಧವಾಗಿದ್ದ ಮತ್ತು ನನ್ನ ಮಡದಿಯನ್ನು ಅವನ ದಾರಿಗೆ ಎಳೆದಿದ್ದ. ನಾನು ಇನ್ನು ಬದುಕಿ ಸಾಧಿಸುವುದಾದರೂ ಏನಿದೆ? ಅನಿಸಿತು. ನನ್ನ ಅಗಲಿಕೆಯಿಂದ ಮನೆಯಲ್ಲಿ ಯಾವುದರ ಕೊರತೆಯಾಗದೆಂದು ಅನಿಸಿತು. ಆಸ್ಪತ್ರೆಯಲ್ಲೇ ಸಾವು ಬಂದಿದ್ದರೆ ಚೆನ್ನಾಗಿತ್ತಲ್ಲಾ ಅಂದುಕೊಂಡೆ. ಯಮನನ್ನು ಶಪಿಸಿದೆ. ಊಟ, ನಿದ್ದೆ ಮರೆತೆ. ಯಾವುದೋ ಲೋಕದಲ್ಲಿ ಇರುತ್ತಿದ್ದೆ. ಆಫೀಸ್‌ನಲ್ಲೂ ನೆಮ್ಮದಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಮನೆಗೆ ಬರಲೂ ಮನಸ್ಸಾಗುತ್ತಿರಲಿಲ್ಲ. ಮುಂದೆ ಏನು ಮಾಡಬೇಕೆಂಬ ಗೊಂದಲ ಸದಾ ಕಾಡುತ್ತಿತ್ತು. ಚಿಂತೆ ಆವರಿಸಿತು. ಒಂದು ವೇಳೆ ನಾನು ಆತ್ಮಹತ್ಯೆ ಮಾಡಿಕೊಂಡರೆ, ನನ್ನ ಮಗನಿಗೆ ಕೆಲಸವಾಗುತ್ತದೆ, ಆದರೆ ನನ್ನ ಜಯಾಳನ್ನು ಸುಖವಾಗಿ ನೋಡಿಕೊಳ್ಳುವನೇ? ಅದೇ ಸಂಶಯ.. ಒಂದು ವೇಳೆ ಜಯಾಳನ್ನು ಬೀದಿಪಾಲು ಮಾಡಿದರೆ, ನನ್ನ ಸಾವಿಗೆ ಯಾವ ಬೆಲೆ ಬಂದೀತು ಅಲ್ವಾ? ಎಂದು ಯೋಚಿಸತೊಡಗಿದೆ. ಆದರೂ, ಪರವಾಗಿಲ್ಲ, ಅವಳಿಗೆ ಪೆನ್ಶನ್ ಬರುತ್ತಲ್ಲ ಪರವಾಗಿಲ್ಲ ಅಂತ ಸಮಾಧಾನ ಮಾಡಿಕೊಂಡು ಇನ್ನು ತುಂಬಾ ಮುಂದಾಲೋಚನೆ ಮಾಡಲು ಸಾಧ್ಯವಿಲ್ಲ, ಈಗ ಉಳಿದಿರುವುದು ಕೇವಲ ಹದಿನೈದು ದಿನ ಮಾತ್ರ, ಆದ್ದರಿಂದ ನಾನು ನಾಳೆಯೇ ಆತ್ಮಹತ್ಯೆ ಮಾಡಿಕೊಳ್ಳುವುದೇ ಲೇಸು ಎಂದು ತೀರ್ಮಾನಿಸಿದೆ.

* * *

ನಾಳೆ ರವಿವಾರ, ಮಧ್ಯಾಹ್ನ ಜಯಾ ಪಕ್ಕದ ಮನೆಯಲ್ಲಿ ಸತ್ಯನಾರಾಯಣ ಪೂಜೆ ಅಂತ ಹೋಗಿರುತ್ತಾಳೆ, ನನ್ನ ಮಗ ಸಹ ಲೈಬ್ರರಿಗೆ ಹೋಗಿರುತ್ತಾನೆ. ಜೀವ ಬಿಡುವುದಕ್ಕೆ ಇದಕ್ಕಿಂತ ಪ್ರಶಸ್ತ ವಾದ ಸಮಯ ಮತ್ತೆ ಸಿಗುವುದಿಲ್ಲ ಅಂತ ಲೆಕ್ಕಾಚಾರ ಮಾಡಿಕೊಂಡು ನಾಳೆಯ ಮಧ್ಯಾಹ್ನಕ್ಕೆ ಕಾಯುತ್ತಿದ್ದೆ.

ರವಿವಾರ ಉದಯಿಸಿತು, ಜಯಾ ನನಗೆ ತಿಂಡಿ ಕೊಟ್ಟು ಪಕ್ಕದ ಮನೆಯವರ ಸತ್ಯನಾರಾಯಣ ಪೂಜೆ ಕಾರ್ಯಕ್ರಮಕ್ಕೆ ಹೊರಡಲು ಸಿದ್ಧವಾಗಿದ್ದಳು.. ಮಗ ಪ್ಯಾಂಟು ಶರ್ಟು ಬದಲಾಯಿಸಿಕೊಳ್ಳುತ್ತಿದ್ದ.. ಇನ್ನೇನು ಕೆಲವೇ ನಿಮಿಷಗಳು ಉಳಿದಿದ್ದವು.. ಪ್ರತಿ ಬಾರಿ ಗಡಿಯಾರ ನೋಡೋದೆ ಆಗ್ತಿತ್ತು. ಇಬ್ಬರೂ ಹೊರಟರು.. ನಾನು ಸಾಯಲೆಂದು ತಂದಿದ್ದ ವಿಷದ ಬಾಟಲ್ ಮುಚ್ಚಳ ತೆಗೆದೆ.. ಅತ್ತಿತ್ತ ಒಮ್ಮೆ ನೋಡಿದೆ.. ಗೋಡೆ ಮೇಲೆ ನೇತುಹಾಕಿದ್ದ ನನ್ನ ಅಪ್ಪ ಅಮ್ಮನ ಫೋಟೋ ನೋಡಿದೆ..

"ಅಮ್ಮ ಇನ್ನೇನು ಕೆಲವೇ ನಿಮಿಷದಲ್ಲಿ ನಾನು ನಿನ್ನ ಬಳಿ ಬರುತ್ತಿದ್ದೇನೆ" ಎಂದು ದುಃಖದಲ್ಲಿ ವಿಷದ ಬಾಟಲನ್ನು ಕೈಯ್ಯಲ್ಲಿ ಹಿಡಿದು ಇನ್ನೇನು ಕುಡಿಯಬೇಕು ಅನ್ನುವಷ್ಟರಲ್ಲಿ ನನ್ನ ಫೋನ್ ರಿಂಗಣಿಸಿತು.

"ಅಯ್ಯೋ.. ಯಾರಪ್ಪ ನೆಮ್ಮದಿಯಾಗಿ ಸಾಯಲು ಬಿಡಲ್ಲ" ಎಂದು ಒಮ್ಮೆ ನನ್ನ ಮೊಬೈಲ್ ನೋಡಿದೆ "ಕಾಲಿಂಗ್ ಯಮ!" ಅಂತ ಕಾಣಿಸಿತು. ಓಹೋ.. ಯಮ ಸಹ ಬೇಗ ಬಾಪ್ಪ ಅಂತ ಕರೆಯುತ್ತಿದ್ದಾನೆ ಅಂದು ಒಂದು ಸೆಕೆಂಡ್ ಅವಕ್ಕಾದೆ.. ಅಯ್ಯಪ್ಪ.. ಅದು ಯಮ ಅಲ್ಲ ಯಮುನಾ, ಅವಳು ಯಾರು ಅಂದರೆ ನನ್ನ ಮುದ್ದಿನ ಮಗಳು.. ಮೈಸೂರಲ್ಲಿ ಇದ್ದಾಳೆ. ಏನೋ ಮುಖ್ಯ ವಿಷಯವಿರಬೇಕು ಅಂತ ಕರೆಯನ್ನು ಸ್ವೀಕರಿಸಿದೆ.

"ಹಲೋ.. ಅಪ್ಪ.. ಒಂದು ಗುಡ್ ನ್ಯೂಸ್ ಸೂರಿ ಕೆ.ಎ.ಎಸ್. ಆಫೀಸರ್ ಆಗಿ ಸೆಲೆಕ್ಟ್ ಆಗ್ಬಿಟ್ಟ" ಅಂದ್ಳು.

ನನಗೆ ಒಂದು ಕ್ಷಣ ಶಾಕ್ ಆಯ್ತು..

"ಹೌದಾ..! ವೆರಿ ಗುಡ್, ನನಗೆ ಬಹಳ ಸಂತೋಷ ಆಯ್ತು, ಸರಿ ಕಣಮ್ಮ ನಾನು ಸ್ವಲ್ಪ ಬ್ಯುಸಿ ಇದ್ದೀನಿ ನಿನಗೆ ಆಮೇಲೆ ಫೋನ್ ಮಾಡ್ತೀನಿ" ಅಂತ ಹೇಳಿ ಕರೆಯನ್ನು ಕತ್ತರಿಸಿದೆ. ಒಮ್ಮೆ ವಿಷದ ಬಾಟಲ್ ಕಡೆ ನೋಡಿ.. ಅಯ್ಯೋ ಇದು ವೇಸ್ಟ್ ಆಯ್ತಲ್ಲ.. "ಪಾಪಿ ಸಮುದ್ರದಲ್ಲಿ ಬಿದ್ದು ಸಾಯೋಕೊದ್ರು ಮೊಣಕಾಲಷ್ಟು ನೀರು ಇಲ್ವಂತೆ" ಅಂತ ಗೊಣಗಿ, ಆ ಬಾಟಲಿನ ವಿಷವನ್ನು ಚರಂಡಿಗೆ ಸುರಿದು ಅಲ್ಲೇ ಪಕ್ಕದಲ್ಲಿ ಇದ್ದ ಖಾಲಿ ಜಾಗಕ್ಕೆ ಎಸೆದು ನಿಟ್ಟುಸಿರು ಬಿಡೊದ್ರಲ್ಲಿ ಜಯಾ ಬಂದಳು, ಸತ್ಯನಾರಾಯಣ ಪ್ರಸಾದ ಕೈಗಿತ್ತಳು. ಒಮ್ಮೆ ಅವಳು ಧರಿಸಿದ್ದ ತಾಳಿ ನೋಡಿದೆ.. "ಬಹಳ ಗಟ್ಟಿಯಾಗಿದೆ ಗಂಟು" ಎಂದು ಮುಸುನಕ್ಕು ಜಗುಲಿಗೆ ಒರಗಿ ರೇಡಿಯೋ ಆನ್ ಮಾಡಿದೆ, ಗೊಂಬೆ ಆಡ್ಸೋನು, ಮೇಲೆ ಕುಂತೌನೆ.. ಹಾಡು ಎಫ್ ಎಂ ನಲ್ಲಿ ಕೇಳಿಬರುತ್ತಿತ್ತು.

ವಾರಭವಿಷ್ಯ



18.6.2023 ರಿಂದ 24.6.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮಿಥುನ, ಚಂದ್ರ–ಮಿಥುನ, ಕಟಕ, ಸಿಂಹ, ಕುಜ–ಕಟಕ, ಬುಧ–ಮಿಥುನ, ಗುರು–ಮೇಷ, ಶುಕ್ರ–ಕಟಕ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ನಿಮ್ಮ ಸ್ವಂತ ಶಕ್ತಿಯಲ್ಲಿ ನಿಮಗೆ ಅಪನಂಬಿಕೆ ಮೂಡಬಹುದು. ದುಡುಕಿ ನಡೆಯಲು 'ಗುರು–ಚಂಡಾಳಯೋಗ' ಕಾರಣವಾಗುವುದು. ವಾದ–ವಿವಾದಗಳನ್ನು ಮೈಮೇಲೆ ಎಳೆದುಕೊಳ್ಳಬೇಡಿ. ಸ್ತ್ರೀಯರೊಂದಿಗೆ ವ್ಯವಹರಿಸುವಾಗ ಗೌರವಾದರಗಳಿಂದ ಕಾಣಿ. ವಾರ ಮಧ್ಯೆ ತಾಮ್ರ, ಹವಳ, ಸಮುದ್ರ ಜನ್ಯ ವಸ್ತುಗಳಿಂದ ಧನಲಾಭ. ನಾರಿಮಣಿಯರು ಶೃಂಗಾರ ವಸ್ತು ಖರೀದಿಗೆ ಹೆಚ್ಚು ಹಣ ವ್ಯಯಿಸುವರು.
ಶ್ರೀ ವಿನಾಯಕ ಸ್ತುತಿ. ಶುಭ ಸಂಖ್ಯೆ–6.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವಾರದಾರಂಭಕ್ಕೆ ಅಧಿಕಾರ, ಸ್ಥಾನಲಾಭ. ಸಾಹಸಿಗಳೆನಿಸಿ ಗೌರವ ಕೀರ್ತಿಗೆ ಭಾಜನರಾಗುವಿರಿ. ದೂರ ಪ್ರಯಾಣಗಳಿಗೆ ಸಿದ್ಧರಾಗಿರಿ. ವಾರಮಧ್ಯೆ ನೂತನ ವಸ್ತ್ರಾಭರಣ, ಸುಭೋಜನ, ಸಂತೋಷಗಳ ಪ್ರಾಪ್ತಿ. ಗೆಳೆಯರ ಮಿಲನದಿಂದ ಮನಃಸಂತೋಷ. ಕೊಡು–ತರುವ ವ್ಯವಹಾರಗಳನ್ನು ದೀರ್ಘವಾಗಿ ಯೋಚಿಸಿ ಮಾಡಿ. ವ್ಯಯಸ್ಥ ರಾಹುವಿನಿಂದ ದುಡುಕು ಸ್ವಭಾವವೂ, ನೀಚ ಕರ್ಮಾಸಕ್ತಿಯು ಉಂಟಾಗುವುದು.
ಶ್ರೀ ಲಲಿತಾ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–2.

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)
ನಿಮ್ಮ ನಿಪುಣತೆಯಿಂದ ಜೀವನದಲ್ಲಿ ಹೊಸ ಸ್ತರಗಳನ್ನು ಏರುವಿರಿ. ಕೈಗೊಂಡ ಕೆಲಸ ಕಾರ್ಯಗಳು ಸಫಲತೆಯ ಹಾದಿಯಲ್ಲಿ ಸಾಗಿದೆ. ಗೃಹ, ನಿವೇಶನ ಹೊಂದುವ ಹಂಬಲವಿದ್ದರೆ ಪ್ರಾಮಾಣಿಕವಾಗಿ ಪ್ರಯತ್ನಿಸಿ, ಗುರುಕೃಪೆ ಇದೆ. ವಾರ ಮಧ್ಯೆ ದೇವತಾ ಉತ್ಸವ, ಜಾತ್ರೆಗಳಲ್ಲಿ ಭಾಗವಹಿಸುವಿರಿ. ಮನೆಯಲ್ಲೂ ಮಂಗಳ ಕಾರ್ಯ ನಡೆದೀತು. ಉನ್ನತ ಶಿಕ್ಷಣಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ದೊರಕುವುದು. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–4.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ವಾರದ ಆದಿಗೆ ಇಷ್ಟ ಸಿದ್ಧಿ. ರಾಶಿಗೆ ಬರುವ ಚಂದ್ರನಿಂದ ಕರ್ಮ ಸಿದ್ಧಿ. ಮಿತ್ರರೊಬ್ಬರ ಸಹಾಯಹಸ್ತವೂ ದೊರೆಯುತ್ತದೆ. ಕೆಲವೊಮ್ಮೆ ಖರ್ಚುಗಳು ನಿಮ್ಮ ಕೈಮೀರುವ ಸಾಧ್ಯತೆ ಇದೆ. ಸ್ತೀ–ಪುತ್ರರಿಂದ ಅಹಿತವಾದ ಮಾತು ಕೇಳಬೇಕಾದೀತು. ಮಹಿಳಾಮಣಿಯರು ಮಾಂಗಲ್ಯ ಸರ ಮುಚ್ಚಿಕೊಂಡು ಓಡಾಡಿ. ವಾಯುವಿಹಾರದ ಸಮಯ ಆತಂಕಮಯವಾದೀತು. ವಾರಾಂತ್ಯಕ್ಕೆ ಶಾರ್ಟ್ ಟ್ರಿಪ್.
ಶ್ರೀ ಲಕ್ಷ್ಮೀ ಸ್ತುತಿ. ಶುಭ ಸಂಖ್ಯೆ–8.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ನಿಮ್ಮ ಗೌರವ, ಪ್ರತಿಷ್ಠೆಗಳಿಗೆ ಮೆರಗು ದೊರೆಯುವುದು. ಆತ್ಮ ವಿಶ್ವಾಸದ ಮಟ್ಟ ಗಣನೀಯವಾಗಿ ಹೆಚ್ಚುವುದು. ಇವೆಲ್ಲದರ ಫಲಿತಾಂಶ ಹರ್ಷ–ಸಂತೋಷಗಳಲ್ಲಿ ಪರ್ಯಾವಸನವಾಗುವುದು. ವಾಕ್ಚತುರತೆಯಿಂದ ಸ್ವಂತದ ಕೆಲಸ ಕಾರ್ಯಗಳು ಸಿದ್ಧಿಯಾಗುವುದು. ಅಭಿವೃದ್ಧಿಯ ಮಾತುಕತೆಗಳು ಕಾರ್ಯರೂಪಕ್ಕೆ ಬರುವುದು. ವಧು–ವರಾನ್ವೇಷಣೆ ಆಷಾಢ ಮಾಸ ನಂತರ ಫಲಿಸಲಿದೆ. ಉಷ್ಣ ಸಂಬಂಧಿ ಕಾಯಿಲೆ ಕಾಡಬಹುದು. ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–9.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಆಕಸ್ಮಿಕ ಘಟನೆಗಳು ನಿಮ್ಮನ್ನು ವಿಚಲಿತರನ್ನಾಗಿಸಬಹುದು. ಗುರು ಬಲದ ಕೊರತೆಯಿಂದ ನಿಮ್ಮ ವ್ಯವಹಾರಗಳಲ್ಲಿ ಅಭಿವೃದ್ಧಿಯನ್ನು ಕಾಣಲು ತೀರಾ ಸರ್ಕಸ್ ಮಾಡಬೇಕಾಗುತ್ತದೆ. ಆಸ್ಪತ್ರೆ ಹಾಗೂ ಔಷಧಿ ಖರ್ಚುಗಳು ಹೆಚ್ಚುವ ಸಾಧ್ಯತೆ ಇರುತ್ತದೆ. ಇದರಿಂದ ಮಾನಸಿಕ ಉದ್ವೇಗ ಹೆಚ್ಚುತ್ತದೆ. ಈಗ ನಿಮಗೆ ಶ್ರೀಮತಿಯ ಆಸರೆಯ ಅವಶ್ಯಕತೆ ಇದೆ. ವಾರಾಂತ್ಯಕ್ಕೆ ನೆಮ್ಮದಿಯ ತಂಗಾಳಿ ಬೀಸಲಿದೆ.
ಶ್ರೀ ಸತ್ಯನಾರಾಯಣ ಸೇವೆ. ಶುಭ ಸಂಖ್ಯೆ–3.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಈ ವಾರ ನಿಮ್ಮ ಆತ್ಮವಿಶ್ವಾಸದ ಮಿತ್ರ ಉನ್ನತ ಮಟ್ಟದ್ದಾಗಿರುತ್ತದೆ. ಸಂಪತ್ತು, ಸುವರ್ಣಾಭರಣ ಗಳಿಸುವ ಅವಕಾಶ ವಿಫಲವಾಗಿದೆ. ಮನೆಯಲ್ಲಿ ಶುಭ ಕಾರ್ಯಗಳು ನಡೆಯುವುದು. ಹಲವರಿಗೆ ಪುತ್ರ ಲಾಭದ ಸಂತಸ. ಆಸ್ತಿ ಗಳಿಕೆಯಲ್ಲಿ ನಿಮ್ಮ ಹಿತೈಷಿಗಳು ನಿಮಗೆ ಸಹಾಯ ಮಾಡಲಿದ್ದಾರೆ. ಪಂಚಮ ಶನಿಯ ಕಾರಣ ಕೋಪದಿಂದ ಕಾರ್ಯಗೇಡು. ದೊಡ್ಡ ಉದ್ಯಮಿಗಳಿಗೆ ಕಾರ್ಮಿಕರಿಂದ ಅಸಹಕಾರ.
ಶ್ರೀ ಲಲಿತಾಸ್ತೋತ್ರ. ಶುಭ ಸಂಖ್ಯೆ–1.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ)
ವಾಮಮಾರ್ಗದಿಂದ ಧನ, ಅಧಿಕಾರ, ಸಂಪತ್ತುಗಳು ಲಭಿಸಬಹುದು. ವಿದ್ಯಾ ಪ್ರಸಂಗಗಳಲ್ಲಿ ಉನ್ನತ ಸಾಧನೆಯಿಂದ ಮನೆ ಮಂದಿಯಲ್ಲಿ ಹರ್ಷ. ನಿಮ್ಮ ತೀಕ್ಷ್ಣ ವರ್ತನೆಗೆ ಕೇತು ಕಾರಣ, ಇದರಿಂದ ಮನಃಶಾಂತಿಗೆ ಭಂಗವಾಗುವುದು. ನ್ಯಾಯಾಲಯ ವಿವಾದಗಳು ನಿಮ್ಮ ಪರವಾಗಿ ಇರದು. ಸರ್ಕಾರಿ ನೌಕರರಿಗೆ ವರ್ಗಾವಣೆಯಿಂದ ಗೃಹ ವಾಸ್ತವ್ಯ ಬದಲಿಸಬೇಕಾದೀತು. ವಾಯು ಸಂಬಂಧಿ ಕಾಯಿಲೆಗೆ ಗುರಿಯಾಗುವಿರಿ.
ಶ್ರೀ ನವಗ್ರಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–7.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರದ ಆರಂಭಕ್ಕೆ ಕರ್ಮಸಿದ್ಧಿಯಾಗಿ ಪ್ರಖ್ಯಾತಿಯನ್ನು ಗಳಿಸುವಿರಿ. ಧನ ಸಂಚಯ ಹಾಗೂ ಶತ್ರು ನಾಶಗಳೂ ಉಂಟು. ಮಿತ್ರರ ಹಾಗೂ ಹಿರಿಯ ಅನುಭವಿಗಳ ಸಹಾಯಹಸ್ತ ದೊರೆಯುವುದರಿಂದ ಕೆಲಸ ಕಾರ್ಯಗಳು ಸುಗಮವೆನಿಸುವುದು. ವಿವಾಹ ಯೋಗ್ಯರಿಗೆ ಕನಸಿನ ವಧು–ವರ ನಿಶ್ಚಯವಾಗಬಹುದು. ಲಲನಾಮಣಿಯರು ಶೃಂಗಾರ ಸಾಧನಗಳಿಗೆ ಹೆಚ್ಚಿನ ಹಣವನ್ನು ವ್ಯಯಿಸುವರು.
ಶ್ರೀದತ್ತ ದರ್ಶನ. ಶುಭ ಸಂಖ್ಯೆ–5.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಶನಿದೇವನ ಪ್ರಭಾವದಿಂದ ಕೆಲಸ ಕಾರ್ಯಗಳು ಕುಂಟುತ್ತಾ ಸಾಗುತ್ತವೆಯಾದರೂ ದಡ ಸೇರುತ್ತವೆ. ವ್ಯಾಪಾರಸ್ಥರಿಗೆ ಲಾಭ ನಷ್ಟಗಳಲ್ಲಿ ಸಮತ್ವ. ಸತಿ–ಪತಿಯರಲ್ಲಿ ವಿರಸದ ಮಾತಿನಿಂದ ಪರಸ್ಪರ ದೂರವಿರಬೇಕಾದೀತು. ಸೋತವರು ಗೆದ್ದಂತೆ. ವಾರದ ಉತ್ತರಾರ್ಧದಲ್ಲಿ ಕೃಷಿಕರ ಮುಖದಲ್ಲಿ ಹರುಷ. ಕೃಷಿ ಉಪಕರಣ ಮಾರಾಟಗಾರರಿಗೆ ಅಧಿಕ ಲಾಭ. ವಾರದ ಕಡೆಗೆ ಆಹಾರ ವ್ಯತ್ಯಯದಿಂದ ಅನಾರೋಗ್ಯ.
ಶ್ರೀ ಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–4.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಅಕಾರಣವಾದ ಉದ್ವೇಗದಿಂದ ಆರೋಗ್ಯ ಕೆಡುವುದು. ಒಳ್ಳೆಯದಾಗಬೇಕೆಂದರೆ ಈರ್ಷಾ ಸ್ವಭಾವ ತ್ಯಜಿಸಿ. ಹಿಂದೆ ಆದ ಆರ್ಥಿಕ ನಷ್ಟಗಳು ಮರು ಪ್ರಯತ್ನದಲ್ಲಿ ವಾಪಸ್ಸು ಬರುವುದು. ಜೊತೆಗೆ ದುಂದುವೆಚ್ಚಗಳನ್ನು ಕಡಿಮೆ ಮಾಡಿ. ವಾರದ ಕಡೆಗೆ ಪರೋಪಕಾರ ಬುದ್ಧಿಯಿಂದ ನೆರೆಹೊರೆಯಲ್ಲಿ ಜನಮನ್ನಣೆ ಗಳಿಸುವಿರಿ. ಹೊಸ ವ್ಯಾಪಾರ ಪ್ರಾರಂಭವನ್ನು ಸ್ವಲ್ಪ ಸಮಯ ಮುಂದೂಡುವುದು ಒಳ್ಳೆಯದು.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–1.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದಾರಂಭಕ್ಕೆ ಕೆಲವೊಂದು ಶುಭ ಪ್ರಸಂಗಗಳಿಂದ ಉಲ್ಲಸಿತರಾಗಿರುವಿರಿ. ನಿಮ್ಮ ನಿರಂತರ ಪರಿಶ್ರಮ 'ಶ್ರದ್ಧಾವಾನ್ ಲಭತೇ ಫಲಂ' ಎಂಬಂತೆ ಕೈಗೂಡುವ ಸಮಯ ಬಂದಿದೆ. ಹತ್ತಿರದವರ ನಂಬಿಕೆಗೆ ಪಾತ್ರರಾಗುವಿರಿ. ನ್ಯಾಯಾಲಯ ವಿಚಾರಗಳು ನಿಮಗೆ ಅನುಕೂಲಕರವಾಗಿರುತ್ತೆ. ರಾಹು–ಕೇತುಗಳು ಅಶುಭವಿರುವುದರಿಂದ ಸಾಧಿಸಲು ಅಶಕ್ಯವಾದ ಪ್ರಾಮಿಸ್‌ಗಳನ್ನು ಮಾಡಬೇಡಿ.
ಶ್ರೀ ಗುರುರಾಯರ ಪೂಜೆ. ಶುಭ ಸಂಖ್ಯೆ–5.

ಮೈಸೂರು ಮಿತ್ರ

ಭಾನುವಾರ 18 ಜೂನ್ 2023

ಜನರ ಸೇವೆ ಮಾಡುವ ಮೂಲಕ ಕೃತಜ್ಞತೆ ಸಲ್ಲಿಸೋಣ

●ಕೃತಜ್ಞತಾ ಸಭೆಯಲ್ಲಿ ಉಸ್ತುವಾರಿ ಸಚಿವ ಮಹದೇವಪ್ಪ ಕರೆ ●ನಾವು ತಾರತಮ್ಯ ಮಾಡಲ್ಲ



ಕೆ.ಆರ್.ನಗರ ಜೂ.17– ಭ್ರಷ್ಟಾಚಾರ, ದಬ್ಬಾಳಿಕೆಯ ಮೂಲಕ ದೇಶ ಮತ್ತು ರಾಜ್ಯದಲ್ಲಿ ಅಘೋಷಿತ ತುರ್ತು ಪರಿಸ್ಥಿತಿಯನ್ನು ನಿರ್ಮಿಸಿದ್ದ ಬಿಜೆಪಿ ಸರ್ಕಾರವನ್ನು ಕಿತ್ತೆಸೆದ ರಾಜ್ಯದ ಮತದಾರರು ನುಡಿದಂತೆ ನಡೆಯುವ ನಮ್ಮ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ಅಭೂತಪೂರ್ವ ಗೆಲುವು ತಂದಿಕೊಟ್ಟಿದ್ದಾರೆ. ಅವರ ಸೇವೆ ಮಾಡುವ ಮೂಲಕ ನಾವು ಕೃತಜ್ಞತೆ ಸಲ್ಲಿಸೋಣ ಎಂದು ಸಮಾಜ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕರೆ ನೀಡಿದ್ದಾರೆ.

ಪಟ್ಟಣದ ಡಾ.ರಾಜ್ ಬಾನಂಗಳದಲ್ಲಿ ಶನಿವಾರ ಕಾಂಗ್ರೆಸ್ ಪಕ್ಷದ ವತಿಯಿಂದ ಕ್ಷೇತ್ರದ ಜನತೆಗೆ ಆಯೋಜಿಸಿದ್ದ ಕೃತಜ್ಞತಾ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಬೆಲೆ ಹೆಚ್ಚಳ, ನೋಟು ಅಮಾನ್ಯಿಕರಣ, ಸಂವಿಧಾನಿಕ ಸಂಸ್ಥೆಗಳನ್ನು ರಾಜಕೀಯ ಹಿತಾಶಕ್ತಿಗೆ ಬಳಕೆ ಮಾಡಿಕೊಂಡು ಸಂವಿಧಾನದ ಆಶಯಗಳಿಗೆ ಧಕ್ಕೆ ತರುತ್ತಿದ್ದ ಬಿಜೆಪಿಗರ ದೌರ್ಜನ್ಯವನ್ನು ಸಹಿಸಿಕೊಂಡಿದ್ದ ಮತದಾರರು ಚುನಾವಣೆಯ ಮೂಲಕ ತಕ್ಕ ಪಾಠ ಕಲಿಸಿದರು ಎಂದರು

ಪಶುಸಂಗೋಪನಾ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಮಾತನಾಡಿ, ಕಾಂಗ್ರೆಸ್ ಪಕ್ಷ ಮಾತ್ರ ಬಡವರು, ರೈತರು, ದಲಿತರು, ಅಲ್ಪಸಂಖ್ಯಾತರು ಹಾಗೂ ಹಿಂದುಳಿದವರ ಪರವಾಗಿ ಕೆಲಸ ಮಾಡುತ್ತದೆ. ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ನೀಡಲು ಹೊರಟಿರುವ ಅನ್ನಭಾಗ್ಯ ಯೋಜನೆಗೆ ಅಕ್ಕಿ ನೀಡುವುದಿಲ್ಲಾ ಎನ್ನುವ ಮೂಲಕ ಬಿಜೆಪಿ ಸರ್ಕಾರ ಬಡವರ ವಿರುದ್ಧವಾಗಿ ಕೆಲಸ ಮಾಡುತ್ತಿದೆ ಎಂದು ಕಿಡಿಕಾರಿದರು.

ನನ್ನ ಸಾಹೇಬ್ರು ಅನ್ನಬೇಡಿ...

ಪ್ರತಿಯೊಬ್ಬ ಕಾರ್ಯಕರ್ತರು ಮತ್ತು ಮುಖಂಡರ ಅವಿರತ ಶ್ರಮದಿಂದ ಇಂದು ನಾನು ಹೆಚ್ಚಿನ ಅಂತರದಲ್ಲಿ ಗೆದ್ದು ಶಾಸಕನಾಗಿ ಆಯ್ಕೆಯಾಗಿದ್ದೇನೆ. ನಾನು ನಿಮ್ಮ ಮನೆಯ ಸೇವಕನಾಗಿದ್ದು, ನನ್ನನ್ನು ಹಿರಿಯರು ರವಿ ಎಂದು ಕರೆಯಿರಿ, ಕಿರಿಯವರು ರವಿಯಣ್ಣಾ ಎಂದು ಕರೆಯಿರಿ. ಸಾಹೇಬ್ರು ಎಂದು ಕರೆಯಬೇಡಿ. ಅಲ್ಲದೇ ನಾನು ಗ್ರಾಮಗಳಿಗೆ ಬಂದಾಗ ನನ್ನ ಕಾಲಿಗೆ ಯಾರೂ ನಮಸ್ಕರಿಸಬಾರದು. ಹಾಗೇನಾದರು ಮಾಡಿದರೇ ನಾನು ಇನ್ನೆಂದು ನಿಮ್ಮನ್ನು ಮಾತನಾಡಿಸುವುದಿಲ್ಲಾ.

- ಡಿ.ರವಿಶಂಕರ್, ಶಾಸಕ

ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಮಾತನಾಡಿ, ಹಿಂದಿನ ಶಾಸಕರು ನನಗೆ ಓಟು ಹಾಕಿರುವವರಿಗೆ ಮಾತ್ರ ಕೆಲಸ ಮಾಡುವುದು ಎಂದು ತಾರತಮ್ಯ ಮಾಡುತ್ತಿದ್ದರು. ಆದರೆ ನಾವು ಯಾವುದೇ ತಾರತಮ್ಯ ಮಾಡದೇ ಜಾತ್ಯಾತೀತವಾಗಿ, ಧರ್ಮಾತೀತವಾಗಿ ರಾಜಕಾರಣ ಮಾಡುತ್ತೇವೆ ಎಂದರು.

ಶಾಸಕರಾದ ಅನಿಲ್ ಚಿಕ್ಕಮಾದು, ಗಣೇಶ್‌ಪ್ರಸಾದ್, ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಕೆಪಿಸಿಸಿ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಕ್ಷೇತ್ರದ ಉಸ್ತುವಾರಿ ಡಾ.ರವೀಂದ್ರ ಮಾತನಾಡಿದರು, ವೇದಿಕೆಯಲ್ಲಿ ಮಾಜಿ ಸಂಸದ ಶಿವಣ್ಣ, ಜಿಪಂ ಮಾಜಿ ಸದಸ್ಯ ಅಮಿತ್ ವಿ.ದೇವರಹಟ್ಟಿ, ಎಸ್.ಪಿ.ತಮ್ಮಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ಉದಯಶಂಕರ್, ವಕ್ತಾರ ಸೈಯದ್‌ಜಾಬೀರ್, ಶಾಸಕರ ಪತ್ನಿ ಸುನೀತಾ ರವಿಶಂಕರ್ ಸೇರಿದಂತೆ ಪುರಸಭಾ ಸದಸ್ಯರು, ತಾಪಂ ಮಾಜಿ ಅಧ್ಯಕ್ಷರು, ಮಾಜಿ ಸದಸ್ಯರು ಸೇರಿದಂತೆ ಇನ್ನಿತರರು ಹಾಜರಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಾವಿರಾರು ಮಂದಿಗೆ ಹೋಳಿಗೆ ಊಟ ಏರ್ಪಡಿಸಲಾಗಿತ್ತು.

ಇಂದು ಮೂಗೂರಿನಲ್ಲಿ ಕೃತಜ್ಞತಾ ಸಭೆ

ತಿ.ನರಸೀಪುರ, ಜೂ.17– ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರು ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಲ್ಲಿಸಲು ಜೂ.18ರಂದು ಮಧ್ಯಾಹ್ನ 12 ಗಂಟೆಗೆ ತಾಲೂಕಿನ ಮೂಗೂರು ದೇವಾಲಯದ ಮುಂಭಾಗ ಕೃತಜ್ಞತಾ ಸಮಾರಂಭವನ್ನು ಹಮ್ಮಿಕೊಂಡಿದ್ದಾರೆ ಎಂದು ಕಾಂಗ್ರೆಸ್ ಯುವ ಮುಖಂಡ ಹಾಗೂ ವಸತಿ ಯೋಜನೆ ಸಮಿತಿಯ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ತಿಳಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರುವ ಸಂದರ್ಭದಲ್ಲಿಯೇ ಕ್ಷೇತ್ರದ ಜನರು ನಮ್ಮ ಕೈ ಹಿಡಿದು ಮಹದೇವಪ್ಪ ಅವರಿಗೆ ಮತ್ತೆ ಅಧಿಕಾರವನ್ನು ನೀಡಿರುವುದರಿಂದ ಅವರಿಗೆ ಗೌರವ ಸಲ್ಲಿಸಲು ಕೃತಜ್ಞತಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಸಮಾರಂಭದಲ್ಲಿ ನೂತನ ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಸಚಿವರಾದ ಡಾ. ಹೆಚ್.ಸಿ.ಮಹದೇವಪ್ಪ ಸೇರಿದಂತೆ ಹಲವು ಜನ ಪ್ರತಿನಿಧಿಗಳು ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರುಗಳು ಭಾಗವಹಿಸಲಿದ್ದಾರೆ. ಕ್ಷೇತ್ರದ ಕಾರ್ಯಕರ್ತರು ಸೇರಿದಂತೆ ಮತದಾರ ಪ್ರಭುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ನಮ್ಮ ಕೃತಜ್ಞತೆಗೆ ಭಾಜನರಾಗಬೇಕು ಎಂದು ಸುನಿಲ್ ಬೋಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮನವಿ ಮಾಡಿದರು.

ಶಕ್ತಿಯಿಂದ ಬಸ್ಸಿನಲ್ಲಿ ನೂಕು–ನುಗ್ಗಲು

ಬಸ್ ಹತ್ತಲು ಹರಸಾಹಸ ಪಡುತ್ತಿರುವ ವಿದ್ಯಾರ್ಥಿಗಳು



ನಂಜನಗೂಡು, ಜೂ.17– ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣಕ್ಕೆ ಅವಕಾಶ ಕಲ್ಪಿಸಿರುವ ಹಿನ್ನೆಲೆಯಲ್ಲಿ ಬಸ್‌ಗಳಲ್ಲಿ ನಿರೀಕ್ಷೆಗೂ ಮೀರಿದ ಮಹಿಳಾ ಪ್ರಯಾಣಿಕರು ಪ್ರಯಾಣ ಮಾಡುತ್ತಿರುವುದರಿಂದ ಜಾಗವಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗಿದೆ.

ನಂಜನಗೂಡಿನಿಂದ ಮೈಸೂರು, ಮಹದೇಶ್ವರ ಬೆಟ್ಟ, ಬಿಳಿಗಿರಿರಂಗನಬೆಟ್ಟ ಸೇರಿದಂತೆ ಗ್ರಾಮಾಂತರ ಪ್ರದೇಶಕ್ಕೆ ತೆರಳುವ ಎಲ್ಲಾ ಬಸ್‌ಗಳಲ್ಲೂ ಕೂಡ ಮಹಿಳೆಯರ ಸಂಖ್ಯೆಯೇ ಹೆಚ್ಚಾಗಿ ಬಸ್‌ಗಳು ಪೂರ್ತಿಯಾಗಿ ಭರ್ತಿಯಾಗುತ್ತಿರುವ ಕಾರಣ ಬಸ್ ನಿರ್ವಾಹಕರಿಗೂ ಟಿಕೇಟ್ ನೀಡುವುದೇ ಹರಸಾಹಸವಾಗಿದೆ.


ಬಸ್ ಹತ್ತುವಾಗ ನಾಮುಂದು ತಾಮುಂದು ಎನ್ನುವಂತೆ ಸೀಟ್ ಹಿಡಿಯುವುದೇ ಪ್ರಯಾಣಿಕರ ಗುರಿಯಾಗಿ ಪೈಪೋಟಿಯಲ್ಲಿ ಹತ್ತುವಂತಹ ದೃಶ್ಯಗಳು ಪ್ರತಿದಿನ ಸಾಮಾನ್ಯವಾಗಿದ್ದು, ಪ್ರತಿದಿನ ಮೈ ಕೈಗಳಿಗೆ ನೋವು ಮಾಡಿಕೊಳ್ಳುವುದು ಸರ್ವೇ ಸಾಮಾನ್ಯವಾಗಿದೆ. ಅಲ್ಲದೆ ಪ್ರಯಾಣಿಕರು ಫುಟ್‌ಪಾತ್‌ನಲ್ಲೇ ನಿಂತು ಪ್ರಯಾಣಿಸುವ ಪರಿಸ್ಥಿತಿ ನಿರ್ಮಾಣವಾಗಿರುವ ಕಾರಣ ಅಪಘಾತಗಳ ಸಂಭವವೇ ಹೆಚ್ಚಾಗಿದ್ದು ಪ್ರಯಾಣಿಕರು ಜೀವವನ್ನು ಕೈಯಲ್ಲಿ ಹಿಡಿದು ಪ್ರಯಾಣಿಸುವ ಅನಿವಾರ್ಯತೆ ಎದುರಾಗಿದೆ. ಜೊತೆಗೆ ಖಾಲಿ ಬಂದ ಬಸ್‌ಗಳಿಗೆ ಹತ್ತಿದ ಪ್ರಯಾಣಿಕರನ್ನು ಈ ಗಾಡಿ ಮಹದೇಶ್ವರ ಬೆಟ್ಟಕ್ಕೆ ಹೋಗುವುದಿಲ್ಲ. ನರಸೀಪುರಕ್ಕೆ ಹೋಗುತ್ತದೆ. ಇಳಿಯಿರಿ ಎಂದು ಇಳಿಸುತ್ತಾರೆ.

ನರಸೀಪುರ ಮಾರ್ಗವಾಗಿಯೇ ಬೆಟ್ಟಕ್ಕೆ ತೆರಳಬೇಕಿರುವ ಕಾರಣ ನಮ್ಮನ್ನು ಹತ್ತಿಸಿಕೊಂಡರೆ ಇವರಿಗೇನು ನಷ್ಟ ಎಂದು ಸಾರ್ವಜನಿಕರು ಆರೋಪಿಸಿ ಚಾಲಕ, ನಿರ್ವಾಕರಿಗೆ ಹಿಡಿಶಾಪ ಹಾಕುವುದೂ ಸಾಮಾನ್ಯವಾಗಿದೆ.

ಬಸ್ ನಿರ್ವಾಹಕ ಸಿದ್ದಪ್ಪ ಮಾತನಾಡಿ, ಈ ಮೊದಲು ಪ್ರತಿದಿನ 7900 ರೂ ಟಾರ್ಗೇಟ್ ನೀಡಲಾಗುತ್ತಿತ್ತು. ಈಗ ಪ್ರತಿದಿನ 12 ಸಾವಿರಕ್ಕೂ ಹೆಚ್ಚಿನ ಟಿಕೇಟ್ ವಿತರಣೆಯಾಗುತ್ತಿದೆ. ಅಲ್ಲದೆ ಬಸ್‌ನಲ್ಲಿ 55 ಮಂದಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಅದಕ್ಕೂ ಹೆಚ್ಚು ಎಂದರೆ 75 80 ಮಂದಿಯಾದರೂ ಹತ್ತಿಸಿಕೊಳ್ಳಬಹುದು. ಆದರೆ ಒಮ್ಮೆಲೇ 90 ರಿಂದ 100 ಮಂದಿ ಹತ್ತುತ್ತಾರೆ. ಬಸ್‌ನಲ್ಲಿ ಏನಾದರೂ ಅನಾಹುತ ಸಂಭವಿಸಿದರೆ ಸಾರ್ವಜನಿಕರಿಂದ ನಮಗೆ ಗೂಸಾ ಬೀಳುವುದು ಗ್ಯಾರಂಟಿ ಎಂದರು.

ನಿದ್ರೆಯಿಂದ ಎಚ್ಚೆತ್ತ ಪುರಸಭಾ ಅಧಿಕಾರಿಗಳು

ಹೆಚ್.ಡಿ.ಕೋಟೆ ಹಾಸ್ಟೆಲ್ ಮುಂದೆ ಹರಿಯುತ್ತಿದ್ದ ಚರಂಡಿ ನೀರಿಗೆ ಪೈಪ್‌ಲೈನ್ ಅಳವಡಿಕೆ



ವಿದ್ಯಾರ್ಥಿ ನಿಲಯದ ಮುಂದೆ ಚರಂಡಿ ನೀರು ಹರಿದು ಹೋಗುತ್ತಿದ್ದ ಹಿನ್ನೆಲೆಯಲ್ಲಿ ನಾವು ಓಡಾಡಲು ಸಮಸ್ಯೆಯಾಗುತ್ತಿತ್ತು. ಅದಲ್ಲದೆ ನಾವೆಲ್ಲರೂ ಬಡ ಕುಟುಂಬದಿಂದ ಬಂದಂತಹ ವಿದ್ಯಾರ್ಥಿಗಳು. ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದೇವೆ. ನಮಗೆ ಈ ಕೊಳಚೆ ನೀರಿನಿಂದ ಸಾಂಕ್ರಾಮಿಕ ರೋಗ ಎಲ್ಲಿ ಹರಡುತ್ತದೆ ಎಂಬ ಭಯ ಇತ್ತು. ಆದರೆ ಈ ವಿಚಾರ ಕುರಿತು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ವರದಿಯಾದ ನಂತರ ಸಂಬಂಧಪಟ್ಟ ಪುರಸಭಾ ಅಧಿಕಾರಿಗಳು ತಕ್ಷಣ ಎಚ್ಚೆತ್ತುಕೊಂಡು ರಸ್ತೆ ಬದಿಯಲ್ಲಿ ಹರಿಯುತ್ತಿದ್ದ ಚರಂಡಿ ನೀರನ್ನು ಪೈಪ್‌ಲೈನ್ ಅಳವಡಿಸಿ ನೀರು ಚರಂಡಿಗೆ ಹೋಗುವ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಅದಕ್ಕೆ ಈ ವರದಿ ಮಾಡಿದಂತ 'ಮೈಸೂರು ಮಿತ್ರ'ನಿಗೆ ಹಾಗೂ ಪುರಸಭಾ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಅಭಿನಂದನೆ ಸಲ್ಲಿಸುತ್ತೇವೆ.

-ವಿದ್ಯಾರ್ಥಿನಿಯರು

ಮಿತ್ರನ ಫಲಶ್ರುತಿ

ಹೆಚ್.ಡಿ.ಕೋಟೆ, ಜೂ.17– 'ಮೈಸೂರು ಮಿತ್ರ' ವರದಿಯ ಫಲಶ್ರುತಿ. ನಿದ್ರೆಯಿಂದ ಎಚ್ಚೆತ್ತ ಅಧಿಕಾರಿಗಳು ಹಾಸ್ಟೆಲ್ ಸುತ್ತ ಹರಿಯುತ್ತಿದ್ದ ಚರಂಡಿ ನೀರಿಗೆ ಪೈಪ್‌ಲೈನ್ ಅಳವಡಿಸುವ ಮೂಲಕ ವಿದ್ಯಾರ್ಥಿನಿಯರು ನೆಮ್ಮದಿಯಿಂದ ವ್ಯಾಸಂಗ ಮಾಡುವಂತೆ ಮಾಡಿದ್ದಾರೆ.

ಪಟ್ಟಣದ ವಿಶ್ವನಾಥಯ್ಯ ಕಾಲೋನಿ ಎಲ್ಲಮ್ಮ ತಾಯಿ ದೇವಸ್ಥಾನದ ರಸ್ತೆಯಲ್ಲಿ ಮೂರು ವಿದ್ಯಾರ್ಥಿನಿ ನಿಲಯಗಳಿದ್ದು, ಸುಮಾರು 200 ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ವಾಸ್ತವ್ಯ ಹೂಡಿ ವಿವಿಧ ಶಾಲಾ–ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಆದರೆ ವಿದ್ಯಾರ್ಥಿ ನಿಲಯದ ಮುಂದೆ ಕೊಳಚೆ ನೀರು ಹರಿಯುತ್ತಿದ್ದು, ವಿದ್ಯಾರ್ಥಿ ನಿಯರು ಅದನ್ನು ತುಳಿದುಕೊಂಡೇ ಓಡಾಡಬೇಕಾದ ದುಸ್ಥಿತಿಯ ಜೊತೆಗೆ ಗಬ್ಬು ವಾಸನೆಯಿಂದ ಹಾಸ್ಟೆಲ್‌ನಲ್ಲಿ ವಾಸಿಸುವುದೇ ಕಷ್ಟವಾಗಿತ್ತು. ಈ ಕುರಿತು ಸಚಿತ್ರ ಸಮೇತವಾಗಿ 'ಮೈಸೂರು ಮಿತ್ರ'ದಲ್ಲಿ ವರದಿ ಮಾಡಲಾಗಿತ್ತು. ಇದರಿಂದ ಎಚ್ಚೆತ್ತಿರುವ ಪುರಸಭೆಯ ಅಧಿಕಾರಿಗಳು ವಿದ್ಯಾರ್ಥಿ ನಿಲಯದ ಮುಂದೆ ಹರಿಯುತ್ತಿದ್ದ ಚರಂಡಿ ನೀರು ಸರಾಗವಾಗಿ ಹರಿದು ಹೋಗುವಂತೆ ಪೈಪ್‌ಲೈನ್ ಅಳವಡಿಸಿ ವಿದ್ಯಾರ್ಥಿನಿಯರ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ.

ವಿದ್ಯಾರ್ಥಿ ನಿಲಯದ ಮುಂಭಾಗ ರಸ್ತೆ ಬದಿಯಲ್ಲಿ ಡ್ರೈನೇಜ್ ನೀರು ಹರಿದು ಬರುತ್ತಿತ್ತು. ಈ ವಿಚಾರ ಕುರಿತು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ವರದಿಯಾಗಿದ್ದ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆ ನಡೆಸಿ, ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಆಗದ ರೀತಿಯಲ್ಲಿ, ಚರಂಡಿ ನೀರು ಸರಾಗವಾಗಿ ಹೋಗುವಂತೆ ಪೈಪ್‌ಲೈನ್ ಅಳವಡಿಸಲಾಗಿದೆ ಎಂದು ಪುರಸಭಾ ಮುಖ್ಯಾಧಿಕಾರಿ ಸುರೇಶ್ ತಿಳಿಸಿದರು.

ಕಾಲೇಜು ವಿದ್ಯಾರ್ಥಿನಿಯರಿಗೆ ಏರೋಬಿಕ್ಸ್ ತರಬೇತಿ



ಹುಣಸೂರು, ಜೂ.17– ಪಟ್ಟಣದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದಿಂದ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ಮತ್ತು ಏರೋಬಿಕ್ಸ್ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು

ಕಾರ್ಯಕ್ರಮವನ್ನು ಉದ್ಘಾಟಿಸಿದ ಅಂತರ ರಾಷ್ಟ್ರೀಯ ದೇಹದಾರ್ಢ್ಯ ಪಟು ಮತ್ತು ಏಕಲವ್ಯ ಪ್ರಶಸ್ತಿ ಪುರಸ್ಕೃತರಾದ ಆಂತೋನಿ ಮೋಸಸ್ ಮಾತನಾಡಿ, ನಿತ್ಯ ವ್ಯಾಯಾಮ ಮಾಡುವುದರಿಂದ ದೇಹ ಮತ್ತು ಮನಸ್ಸು ಉಲ್ಲಾಸದಿಂದ ಇರುವುದಲ್ಲದೆ ಆರೋಗ್ಯವು ದೇಹದ ತೂಕವನ್ನು ಕಡಿಮೆ ಮಾಡುತ್ತದೆ ಎಂದರು.

ಪ್ರತಿ ದಿನ ಒಂದು ಗಂಟೆ ನಿಯಮಿತವಾಗಿ ಏರೋಬಿಕ್ಸ್ ವ್ಯಾಯಾಮ ಮಾಡುವುದರಿಂದ ರೋಗ ನಿರೋಧಕ ಶಕ್ತಿ ಹೆಚ್ಚಿ ಹೃದಯ ಮತ್ತು ರಕ್ತನಾಳಗಳಲ್ಲಿ ಒತ್ತಡವನ್ನು ಕಡಿಮೆ ಮಾಡಿ ಆರೋಗ್ಯ ವೃದ್ಧಿಸುತ್ತದೆ. ಮೂಳೆ ಮತ್ತು ಮಾಂಸಖಂಡಗಳು ಸ್ನಾಯುಗಳು ಶಕ್ತಿಯುತವಾಗುತ್ತವೆ. ಮೆದುಳಿನ ಮತ್ತು ಹೃದಯದ ಕೆಲಸವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಲು ಸಹಕಾರಿಯಾಗುತ್ತದೆ ಎಂದು ಅವರು ವಿವರಿಸಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಭಾಸ್ಕರ್ .ಕೆ.ಎಸ್ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿ ಏಕಾಗ್ರತೆಯನ್ನು ಹೆಚ್ಚಿಸಿಕೊಳ್ಳಬಹುದು ಎಂದು ತಿಳಿಸಿದರು

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಪುಟ್ಟಶೆಟ್ಟಿ ಅವರು ತಮ್ಮ ದಿನ ನಿತ್ಯದ ಜೀವನದಲ್ಲಿ ವಿದ್ಯಾರ್ಥಿಗಳು ಕಲಿಕೆಗೆ ಪೂರಕವಾಗುವಂತೆ ಆರೋಗ್ಯವನ್ನು ವೃದ್ಧಿಸಿಕೊಳ್ಳಲು ಕ್ರೀಡಾ ಚಟುವಟಿಕೆಗಳು ಅತ್ಯಂತ ಅವಶ್ಯಕ ಎಂದು ತಿಳಿಸಿದರು.

ವೇದಿಕೆಯಲ್ಲಿ ಕಾಲೇಜಿನ ಕ್ರೀಡಾ ಸಮಿತಿಯ ಸದಸ್ಯರಾದ ಡಾ. ಬೋಪಯ್ಯ ಡಾ. ಕರುಣಾಕರ್ ಎನ್, ಡಾ. ಕಾವ್ಯ ಸಿಎನ್, ಡಾ. ಪ್ರಸನ್ನ ಕೆಪಿ, ರವಿ, ಕುಮಾರ್ ಇನ್ನಿತರರು ಹಾಜರಿದ್ದರು. ಇನ್ನೂರ ಐವತ್ತಕ್ಕೂ ಹೆಚ್ಚು ವಿದ್ಯಾರ್ಥಿನಿಯರಿಗೆ ಒಂದು ಗಂಟೆಗಳ ಕಾಲ ಏರೋಬಿಕ್ಸ್ ತರಬೇತಿ ನೀಡಲಾಯಿತು. ನಂತರ ಕಾಲೇಜಿನ ವತಿಯಿಂದ ಆಂಥೋನಿ ಮೋಸಸ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮವನ್ನು ಕುಮಾರಿ ರೀಜಾ ಸಾನಿಯಾ ಪ್ರಥಮ ಬಿಎಸ್ಸಿ ನಿರೂಪಿಸಿದರು. ಪೂಜಾ ಪ್ರಾರ್ಥಿಸಿದರು. ಕುಮಾರಿ ವರ್ಷಿತ ಸ್ವಾಗತಿಸಿದರು, ಡಾ. ಕೆ.ಪಿ.ಪ್ರಸನ್ನ ವಂದಿಸಿದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ದಿ ಕೇರಳ ಸ್ಟೋರಿ (ಹಿಂ): ಬೆ.10.25ಕ್ಕೆ, ಮ.1.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.

ಸ್ಕ್ರೀನ್ 2 ಡೇರ್‌ಡೆವಿಲ್ ಮುಸ್ತಫಾ (ಕ): ಬೆ.10.05ಕ್ಕೆ, ಸಂ.6.50ಕ್ಕೆ, **ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ):** ಮ.1.10ಕ್ಕೆ, **ಜೆರ್ಸಿ ನಂಬರ್ 10 (ಕ):** ಸಂ.4.05ಕ್ಕೆ, **ರಾಘವೇಂದ್ರ ಸ್ಟೋರ್ಸ್ (ಕ):** ರಾ.10ಕ್ಕೆ.

ಸ್ಕ್ರೀನ್ 3 ಇವಿಲ್ ಡೆಡ್ ರೈಸ್ (ಇಂ): ಬೆ.11ಕ್ಕೆ, **ಪಿಚ್ಚೈಕಾರನ್2 (ತ):** ಮ.1.20ಕ್ಕೆ, ಸಂ.4.25ಕ್ಕೆ, **ರಾಘವೇಂದ್ರ ಸ್ಟೋರ್ಸ್ (ಕ):** ರಾ.7.30ಕ್ಕೆ, **ಚಾರ್ಲ್ಸ್ ಎಂಟರ್‌ಪ್ರೈಸಸ್ (ಮ):** ಸಂ.9.55ಕ್ಕೆ.

ಸ್ಕ್ರೀನ್ 4 **ಫಾಸ್ಟ್ X (3ಡಿ)(ಇಂ):** ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಫಾಸ್ಟ್ X (3ಡಿ)(ಇಂ): ಬೆ.10.30, ಮ.1.30ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ, ರಾ.10.30ಕ್ಕೆ.

ಸ್ಕ್ರೀನ್ 2 ದಿ ಕೇರಳ ಸ್ಟೋರಿ (ಹಿಂ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.

ಸ್ಕ್ರೀನ್ 3 ದಿ ಕೇರಳ ಸ್ಟೋರಿ (ಹಿಂ): ಬೆ.11ಕ್ಕೆ, ಮ.1.55ಕ್ಕೆ, ಸಂ.4.50ಕ್ಕೆ, ರಾ.10.30ಕ್ಕೆ, ಅನುರಾಗಂ (ಮ): ರಾ.7.45ಕ್ಕೆ.

ಸ್ಕ್ರೀನ್ 4 **ಫಾಸ್ಟ್ X (3ಡಿ)(ಇಂ):** ಬೆ.9.30ಕ್ಕೆ, **ಪಿಚ್ಚೈಕಾರನ್ 2(ತ):** ಮ.12.20ಕ್ಕೆ, ರಾ.10.05ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ (ಕ):** ಸಂ.4.50ಕ್ಕೆ, **ಚೌಕಾಬಾರ (ಕ):** ರಾ.7.50ಕ್ಕೆ, **ಕ್ರಿಡ್ 3 (ಇಂ):** ಬೆ.11.35ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ):** ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ):** ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ (ಮ):** ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್ (ತ):** ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6 (ಇಂ):** ಮ.2.45ಕ್ಕೆ, ರಾ.7.45ಕ್ಕೆ, **65 (ಇಂ):** ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ದರ್ಬಾರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಟಕ್ಕರ್ (ತೆ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗಡಾರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಐರಾವನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೇರ್ ಡೆವಿಲ್ ಮುಸ್ತಾಫಾ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಪೋರ್ ತೋಳಿಲ್ (ತ)	4 ಪ್ರದರ್ಶನಗಳು
ಸಂಗಂ	
ಆದಿಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಬೇರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
2018 (ಕ)	4 ಪ್ರದರ್ಶನಗಳು
ಪ್ರಭಾ	
ಐರಾವನ್ (ಕ)	4 ಪ್ರದರ್ಶನಗಳು

ಪಡಿತರ ವಿತರಕರ ಸಂಘಕ್ಕೆ ನೇಮಕ



ಹುಣಸೂರು.ಜೂ.17– ಪಡಿತರ ವಿತರಕರ ಜಿಲ್ಲಾ ಸಂಘದ ಅಧ್ಯಕ್ಷರಾಗಿ ಹುಣಸೂರು ತಾಲೂಕಿನ ನಾಗನಹಳ್ಳಿ ಗ್ರಾಮದ ಎನ್.ಎನ್.ಪಾಂಡು ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ಸರಕಾರ ಪಡಿತರ ವಿತರಕರ ಸಂಘದ ಅಧ್ಯಕ್ಷ ಟಿ. ಕೃಷ್ಣಪ್ಪ ತಿಳಿಸಿದ್ದಾರೆ.

ಹುಣಸೂರು ರೋಟರಿ ಕ್ಲಬ್‌ಗೆ ಪ್ಲಾಟಿನಮ್ ಪ್ರಶಸ್ತಿ



ಹುಣಸೂರು, ಜೂ.17– ಇತ್ತೀಚೆಗೆ ಮಂಗಳೂರಿನಲ್ಲಿ ನಡೆದ ಸಂಪ್ರಾಪ್ತಿ– 2023 ರೋಟರಿ ಅವಾರ್ಡ್ ಸಮಾರಂಭದಲ್ಲಿ, ವಲಯ 6 ಹುಣಸೂರು ರೋಟರಿ ಕ್ಲಬ್‌ಗೆ ಈ ಬಾರಿ ಪ್ಲಾಟಿನಮ್ ಅವಾರ್ಡ್ ದೊರೆತಿದೆ. ಹುಣಸೂರು ರೋಟರಿ ಕ್ಲಬ್ ಸುಮಾರು 69 ಜನಸ್ನೇಹಿ ಕಾರ್ಯಕ್ರಮಗಳನ್ನು ಕಳೆದ ಒಂದು ವರ್ಷದಲ್ಲಿ ಮಾಡಿದ್ದು, ಆರೋಗ್ಯಸಿರಿ ಹಾಗೂ ವಿದ್ಯಾಸಿರಿ ಯೋಜನೆ ಅಡಿ ಹಲವು ಕಾರ್ಯಕ್ರಮಗಳನ್ನು ಕೈಗೊಂಡಿತ್ತು.

ಈ ಸಂಬಂಧ ನಮ್ಮ ಕ್ಲಬ್‌ಗೆ ಈ ಬಾರಿ ಪ್ಲಾಟಿನಮ್ ಅವಾರ್ಡ್ ದೊರೆತಿರುವುದು ಸಂತಸ ತಂದಿದೆ. ನಮ್ಮ ಕಾರ್ಯಕ್ರಮಗಳಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ನಮ್ಮ ಕ್ಲಬ್ ಸದಸ್ಯರು ಹಾಗೂ ದಾನಿಗಳು ಮತ್ತು ಮುಖಂಡರಿಗೆ ಈ ಮೂಲಕ ಧನ್ಯವಾದಗಳು ಅರ್ಪಿಸುತ್ತೇನೆ ಎಂದು ಹುಣಸೂರು ರೋಟರಿ ಕ್ಲಬ್‌ನ ಅಧ್ಯಕ್ಷ ಪಾಂಡುಕುಮಾರ್.ಪಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪುರಸಭೆ ಮಾಜಿ ಅಧ್ಯಕ್ಷ ಎಂ. ರವಿಶಂಕರ್ ನಿಧನ



ಹುಣಸೂರು.ಜೂ.17(ಕೆಕೆ)– ನಗರಸಭೆ ಮಾಜಿ ಅಧ್ಯಕ್ಷ, ಹುಣಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ, ಮರದ ವ್ಯಾಪಾರಿ. ಲೀಲಾ ಚಿತ್ರಮಂದಿರದ ಮಾಲಿಕ ಎಂ.ರವಿಶಂಕರ್(68) ಅವರು ಇಂದು ಬೆಳಗ್ಗೆ ನಿಧನರಾದರು. ಮೃತರು ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನಗರದ ಹೊರವಲಯದ ಬೆಳ್ತೂರು ಗ್ರಾಮದಲ್ಲಿರುವ ಮೃತರ ಜಮೀನಿನಲ್ಲಿ ಶನಿವಾರ ಸಂಜೆ ನೆರವೇರಿತು.

ಮೀನಾಕ್ಷಿ



ಸರಗೂರು, ಜೂ.17– ಪಟ್ಟಣದ ವರ್ತಕರಾದ ನಾಗಣ್ಣ ಅವರ ಪತ್ನಿ ಮೀನಾಕ್ಷಿ (50) ಶನಿವಾರ ನಿಧನರಾಗಿದ್ದಾರೆ, ಮೃತರು ಪತಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್, ಡಾ.ಸೋಮಣ್ಣ, ಡಾ.ಶರತ್ ಹಾಗೂ ವರ್ತಕರ ಸಂಘದ ಸರ್ವಸದಸ್ಯರು ಮೃತರ ಅಂತಿಮ ದರ್ಶನ ಪಡೆದರು. ಅಂತ್ಯಕ್ರಿಯೆ ಪಟ್ಟಣದ ಆರ್ಯ ಈಡಿಗ ಸಮಾಜದ ರುದ್ರಭೂಮಿಯಲ್ಲಿ ಶನಿವಾರ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅವ್ಯವಸ್ಥೆ ತಾಣವಾಗಿರುವ ತ್ರಿವೇಣಿ ಸಂಗಮದ ಉದ್ಯಾನವನ

ಬೆಳೆದು ನಿಂತ ಗಿಡಗಂಟಿಗಳು, ಕಸದ ರಾಶಿ, ಮುಚ್ಚಿಹೋದ ವಾಕಿಂಗ್ ಪಾತ್, ಒಣಗಿದ ಸಸ್ಯರಾಶಿ

● ಎಸ್. ಕುಮಾರ್



ತಿ. ನರಸೀಪುರ, ಜೂ.17–ದಕ್ಷಿಣ ಕಾಶಿ ಕುಂಭಮೇಳ ಕ್ಷೇತ್ರವೆನಿಸಿರುವ ತ್ರಿವೇಣಿ ಸಂಗಮದ ಬಳಿ ಇರುವ ಉದ್ಯಾನವನ ನಿರ್ವಹಣೆ ಇಲ್ಲದೇ ಹಾಳಾಗಿದೆ ಗಿಡಗಂಟಿಗಳು ಬೆಳೆದು ನಿಂತಿದ್ದು ಹಾಗೂ ತ್ಯಾಜ್ಯ ವಸ್ತುಗಳ ತಾಣವಾಗಿದೆ.

ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಪಟ್ಟಣದ ಕಪಿಲಾ ನದಿ ದಂಡೆಯಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಲೋಕೋಪಯೋಗಿ ಸಚಿವರಾಗಿದ್ದ ಸ್ಥಳೀಯ ಶಾಸಕ ಡಾ.ಎಚ್.ಸಿ.ಮಹದೇವಪ್ಪ ಹಾಗೂ ಸಂಸದರಾಗಿದ್ದ ಆರ್.ಧ್ರುವನಾರಾಯಣ್ ಅವರ ಶ್ರಮದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಸುಮಾರು 70 ಕೋಟಿ ವೆಚ್ಚದಲ್ಲಿ ತ್ರಿವೇಣಿ ಸಂಗಮದ ನದಿ ದಂಡೆಗಳಲ್ಲಿ ಸೋಪಾನ ಕಟ್ಟೆ ನಿರ್ಮಾಣ, ಪ್ರವಾಹ ನಿಯಂತ್ರಣಕ್ಕೆ ತಡೆ ಗೋಡೆ ಹಾಗೂ ನದಿ ದಂಡೆಯಲ್ಲಿನ ಬಳ್ಳೇಶ್ವರ ಸ್ವಾಮಿ ದೇವಾಲಯದ ಸುತ್ತ ಉದ್ಯಾನವನ ಹಾಗೂ ವಿಹಾರ ರಸ್ತೆ, ಪ್ರವಾಸಿಗರಿಗೆ ವಾಹನ ನಿಲ್ದಾಣ, ಶೌಚಾಲಯ ಸೇರಿದಂತೆ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿತ್ತು.

ಇದು ಪ್ರವಾಸಿಗರ ಆಕರ್ಷಣೀಯ ತಾಣವಾಗಿ ರೂಪಿಸಲು ವಿಶೇಷ ಗಮನ ನೀಡಿ ಕಾಮಗಾರಿ ಮಾಡಲಾಗಿತ್ತು.. ನದಿ ದಂಡೆಯಲ್ಲಿ ಸಂಜೆ ವೇಳೆ ಜನರು ಸಂಚರಿಸಲು ವಿದ್ಯುತ್ ದೀಪ ಸೌಲಭ್ಯದೊಂದಿಗೆ ವಾಕಿಂಗ್ ಪಾತ್ ಕೂಡ ನಿರ್ಮಾಣದ ಉದ್ದೇಶವಿತ್ತು. ಕಾಮಗಾರಿ ನಿರ್ಮಾಣದ ವೇಳೆ ಉದ್ಯಾನವನ ನಿರ್ಮಾಣ ಮಾಡಿ ಅದರಲ್ಲಿ ವಿವಿಧ ಬಗೆಯ ಗಿಡಗಳನ್ನು ಹಾಕಿ ನಿರ್ವಹಣೆ ಮಾಡಲಾಗಿತ್ತು.

ಉದ್ಯಾನವನ ನಿರ್ಮಾಣವಾದ ಮೇಲೆ ಒಂದು ವಾರ ಕೂಡ ನಿರ್ವಹಣೆ ಮಾಡಲಿಲ್ಲ. ಯಾವ ಉದ್ದೇಶಕ್ಕೆ ನಿರ್ಮಾಣವಾಯಿತು ಆ ಉದ್ದೇಶ ಈಡೇರಲಿಲ್ಲ. ನದಿ ದಂಡೆಯಲ್ಲಿ ನಿರ್ಮಿಸಿರುವ ವಾಕಿಂಗ್ ಪಾತ್ ಈಗ ಅನೈತಿಕ ಚಟುವಟಿಕೆಗಳ ತಾಣವಾಗುತ್ತಿವೆ ನಿರ್ಮಾಣ ಮಾಡಿದವರು ಯಾರಿಗೆ ಜವಬ್ದಾರಿ ಕೊಟ್ಟು ಹೋದರೂ ಗೊತ್ತಾಗಲಿಲ್ಲ. ಸ್ಥಳೀಯರು, ಅಧಿಕಾರಿಗಳು ಕೂಡ ಗಮನಿಸುತ್ತಿಲ್ಲ. ಇದರಿಂದಾಗಿ ಉದ್ಯಾನವನ ಸಂಪೂರ್ಣ ಹಾಳಾಗುತ್ತಿದೆ. ಸಂಬಂಧಿಸಿದವರು ಇತ್ತ ಗಮನಹರಿಸಬೇಕಿದೆ ಎನ್ನುತ್ತಾರೆ ಭಕ್ತಾದಿಗಳು.

ಕಾಮಗಾರಿ ಮುಗಿದ ನಂತರ ಉದ್ಯಾನವನ ನಿರ್ವಹಣೆ ಇಲ್ಲದೇ ಒಳಗಿನ ವಾಕಿಂಗ್ ಪಾತ್ ಗಿಡಗಂಟಿಗಳಿಂದ ಮುಚ್ಚಿ ಹೋಗಿದೆ. ಉದ್ಯಾನವನದಲ್ಲಿ ಕಸದ ರಾಶಿ ಬಿದ್ದಿದೆ. ಪ್ರವಾಸಿಗರು ತಿಂದು ಬಿಸಾಡಿದ ಪೇಪರ್ ಪ್ಲೇಟ್‌ಗಳು ಬಿದ್ದಿವೆ, ಉದ್ಯಾನವನದೊಳಗೆ ಮುಳ್ಳಿನ ಗಿಡಗಳು ಅಗಾಧವಾಗಿ ಬೆಳೆದಿದ್ದರೆ, ಮತ್ತೊಂದು ಕಡೆ ಹಾಕಿದ್ದ ಗಿಡಗಳು ಒಣಗಿ ಹೋಗಿವೆ. ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿ ನಿರ್ಮಿಸಿದ ಉದ್ಯಾನವನ ಹಾಗೂ ವಿಹಾರ ರಸ್ತೆ ಸಂಪೂರ್ಣ ಹಾಳಾಗಿವೆ.



ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು









ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ನಮೂದಿಸಿರುವ ಷೆಡ್ಯೂಲ್‌ನಲ್ಲಿ ವಿವರಿಸಿರುವ ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಚಾಮನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 45/4, 64,65,69,70ರ ಒಟ್ಟು ವಿಸ್ತೀರ್ಣ 16 ಎಕರೆಗಳ ಖುಷ್ಕಿ ಜಮೀನಿನ ಸ್ವತ್ತುಗಳನ್ನು ಮಾಲೀಕರಾದ ಶ್ರೀ ಎಸ್.ಸಚ್ಚಿದಾನಂದ, 48 ವರ್ಷ, ಬಿನ್ ಲೇಟ್ ಪಿ.ಶಿವಾನಂದ, ರವರು ನಮ್ಮ ಕಕ್ಷಿದಾರರಿಗೆ ಮಾರಾಟ ಮಾಡಲು ಹಾಗೂ ನಮ್ಮ ಕಕ್ಷಿದಾರರು ಸದರಿಯವರಿಂದ ಷೆಡ್ಯೂಲ್ ಸ್ವತ್ತುಗಳನ್ನು ಖರೀದಿಸಲು ಒಪ್ಪಿರುತ್ತಾರೆ. ಷೆಡ್ಯೂಲ್ ಸ್ವತ್ತುಗಳಲ್ಲಿ ಯಾರಿಗಾದರೂ ಯಾವುದೇ ವಿಧವಾದ ಮಾಲೀಕತ್ವ, ಹಕ್ಕು ಹಿತಾಸಕ್ತಿಗಳು ಮತ್ತು ಭಾಗಂಶ ಇದ್ದಲ್ಲಿ ಅಥವಾ ಸದರಿ ಸ್ವತ್ತು ಯಾವುದೇ ಸಾರ್ವಜನಿಕ ಹಣಕಾಸು ಸಂಸ್ಥೆ ಅಥವಾ ಬ್ಯಾಂಕಿಗೆ ಒಳಗಾಗಿದ್ದಲ್ಲಿ, ಸದರಿ ಮಾರಾಟಕ್ಕೆ ತಮ್ಮ ತಕರಾರು/ಆಕ್ಷೇಪಣೆ ಇದ್ದಲ್ಲಿ ಅಂತವರು ಈ ಪ್ರಕಟಣೆಯ ದಿನಾಂಕದಿಂದ 15 ದಿನದೊಳಗಾಗಿ ಲಿಖಿತ ರೂಪದಲ್ಲಿ ಸೂಕ್ತ ದಾಖಲಾತಿಯೊಂದಿಗೆ ಈ ಕೆಳಗೆ ನಮೂದಿಸಿರುವ ವಕೀಲರ ಕಚೇರಿಗೆ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ, ಸದರಿ ಖರೀದಿ ಪ್ರಕ್ರಿಯೆಯಲ್ಲಿ ಮುಂದುವರೆಯಲು ನಮ್ಮ ಕಕ್ಷಿದಾರರು ಕಾನೂನು ಬದ್ಧ ಹಕ್ಕು ಮತ್ತು ಅಧಿಕಾರವುಳ್ಳವರಾಗಿರುತ್ತಾರೆಂದು ತಿಳಿಯುವುದು.

ಷೆಡ್ಯೂಲ್ ಸ್ವತ್ತಿನ ವಿವರ

1. ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಚಾಮನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 45/4 ರಲ್ಲಿರುವ ವಿಸ್ತೀರ್ಣ 02 ಎಕರೆ 36 ಗುಂಟೆ ಜಮೀನಿನ ಆಕಾರ ರೂ.3.54ವುಳ್ಳ ಖುಷ್ಕಿ ಜಮೀನಿನ ಚಕ್ಕುಬಂಧಿ:
ಪೂರ್ವಕ್ಕೆ – ರಸ್ತೆ, ಪಶ್ಚಿಮಕ್ಕೆ – ಸರ್ವೆ ನಂ. 70ರ ಜಮೀನು, ಉತ್ತರಕ್ಕೆ– ಹನುಮಭೋವಿ ರವರ ಜಮೀನು, ದಕ್ಷಿಣಕ್ಕೆ – ಕರಿಯಾಚಾರ್ ರವರ ಜಮೀನು,
2. ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಚಾಮನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 64 ರಲ್ಲಿರುವ ವಿಸ್ತೀರ್ಣ 03 ಎಕರೆ ಜಮೀನಿನ ಆಕಾರ ರೂ. 5.07 ವುಳ್ಳ ಖುಷ್ಕಿ ಜಮೀನಿಗೆ ಚೆಕ್ಕುಬಂಧಿ:–
ಪೂರ್ವಕ್ಕೆ – ಸಾಬುಲಾಲ್ ರವರ ಜಮೀನು, ಪಶ್ಚಿಮಕ್ಕೆ – ನಂಜಯ್ಯ ರವರ ಜಮೀನು, ಉತ್ತರಕ್ಕೆ – ನಿಸಾರ್ ಅಹಮ್ಮದ್ ರವರ ಜಮೀನು, ದಕ್ಷಿಣಕ್ಕೆ – ನೀರ್ ಅಜ್ಮದ್ ರವರ ಜಮೀನು.
3. ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಚಾಮನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 65 ರಲ್ಲಿರುವ ವಿಸ್ತೀರ್ಣ 2 ಎಕರೆ 05 ಗುಂಟೆ ಜಮೀನಿನ ಆಕಾರ ರೂ.6.00 ವುಳ್ಳ ಖುಷ್ಕಿ ಜಮೀನಿಗೆ ಚಕ್ಕುಬಂಧಿ:–
ಪೂರ್ವಕ್ಕೆ – ಸಾಬುಲಾಲ್ ರವರ ಜಮೀನು, ಪಶ್ಚಿಮಕ್ಕೆ – ಅಣ್ಣಯ್ಯಶೆಟ್ಟಿರವರ ಜಮೀನು, ಉತ್ತರಕ್ಕೆ – ಎಸ್.ಸಚ್ಚಿದಾನಂದ ರವರ ಜಮೀನು, ದಕ್ಷಿಣಕ್ಕೆ – ಎಸ್.ಸಚ್ಚಿದಾನಂದ ರವರ ಜಮೀನು.
4. ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಚಾಮನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.69 ರಲ್ಲಿರುವ ವಿಸ್ತೀರ್ಣ 04 ಎಕರೆ ಜಮೀನಿನ ಆಕಾರ ರೂ. 6.76ವುಳ್ಳ ಖುಷ್ಕಿ ಜಮೀನಿಗೆ ಚೆಕ್ಕುಬಂಧಿ:
ಪೂರ್ವಕ್ಕೆ – ಎಸ್. ಸಚ್ಚಿದಾನಂದ ರವರ ಜಮೀನು, ಪಶ್ಚಿಮಕ್ಕೆ – ನಂಜಯ್ಯ ರವರ ಜಮೀನು, ಉತ್ತರಕ್ಕೆ –ಎಸ್.ಸಚ್ಚಿದಾನಂದ ರವರ ಜಮೀನು ಮತ್ತು ಮುಂದುವರೆದು ಸಾಬುಲಾಲ್ ರವರ ಜಮೀನು, ದಕ್ಷಿಣಕ್ಕೆ – ಎಸ್. ಸಚ್ಚಿದಾನಂದ ರವರ ಜಮೀನು.
5. ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಚಾಮನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.70 ರಲ್ಲಿರುವ ವಿಸ್ತೀರ್ಣ 04 ಎಕರೆ ಜಮೀನಿನ ಆಕಾರ ರೂ.6.76 ವುಳ್ಳ ಖುಷ್ಕಿ ಜಮೀನಿಗೆ ಚೆಕ್ಕುಬಂಧಿ–
ಪೂರ್ವಕ್ಕೆ – ಸರ್ವೆ ನಂ. 45/4ರ ಜಮೀನು, ಪಶ್ಚಿಮಕ್ಕೆ – ನಂಜಯ್ಯರವರ ಜಮೀನು, ಉತ್ತರಕ್ಕೆ–ನೀರ್‌ಅಜ್ಮದ್ ರವರ ಜಮೀನು, ದಕ್ಷಿಣಕ್ಕೆ– ಮುದ್ದುವೀರಾಚಾರಿ ರವರ ಜಮೀನು.

ಸ್ಥಳ: ಮೈಸೂರು
ದಿನಾಂಕ: 17–06–2023

Sd/- **Sandhya Srinivas**, B.Sc, L.L.B
Advocates & Legal Consultants
No.25, Block No.26, SBM Layout, Srirampura II Stage, Mysuru-570023. **Mob: 9945657288, 7019138913**
Emai-id: sandhyanexlaw@gmail.com

ತಿದ್ದುಪಡಿ

ದಿನಾಂಕ 16–6–2023 ರ 'ಮೈಸೂರು ಮಿತ್ರ' ಪತ್ರಿಕೆಯ ಪುಟ 12 ರಲ್ಲಿ ಪ್ರಕಟವಾಗಿದ್ದ ಸಾರ್ವಕನಿಕ ಪ್ರಕಟಣೆ ಜಾಹಿರಾತಿನಲ್ಲಿ ಸರ್ವೆ ನಂ. 78/8 ರ ಷೆಡ್ಯೂಲ್ ಪ್ರಕಟವಾಗಿದ್ದು, ಸರ್ವೆ ನಂ. 7214ರ ಷೆಡ್ಯೂಲ್‌ನ್ನು 2) ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಅಣಗಹಳ್ಳಿ ಗ್ರಾಮದ ಸರ್ವೆ ನಂ. 72/4 ರ ಎಂ.ಎಸ್. ಉಮೇಶ್ ಬಿನ್ ಲೇಟ್ ಸತ್ಯನಾರಾಯಣ ರವರ ಹೆಸರಿನಲ್ಲಿರುವ 0–33.08 ಗುಂಟೆ ಖುಷ್ಕೀ ಜಮೀನು ಮತ್ತು ಇದಕ್ಕೆ ಚೆಕ್ಕುಬಂದಿ: ಪೂರ್ವಕ್ಕೆ: ಎಂ.ಎಸ್. ಉಮೇಶ್ ರವರ ಜಮೀನು ; ಪಶ್ಚಿಮಕ್ಕೆ: ಬೀರಯ್ಯನ ಚಿಕ್ಕಣ್ಣರವರ ಜಮೀನು ; ಉತ್ತರಕ್ಕೆ: ಪಾಪೇಗೌಡ ರವರ ಜಮೀನು ; ದಕ್ಷಿಣಕ್ಕೆ: ಮಹದೇವೇಗೌಡರವರ ಜಮೀನು.

Sd/- M.G. Siddaraju, BBM, LL.B.
Advocate, En.No. KAR-2787/03
Off: #2773/1, CH-21/2, Roopa Nilaya, 2nd Cross, Railway Gate Road, K.G. Koppal, Mysore-570 009

KENDRIYA HINDI SANSTHAN, MYSORE
(Ministry of Education, Govt. of India)
Near Airforce Selection Board, Behind Mysore Milk Dairy, Sidharth Nagar, Mysore-570011 (Karnataka)
Mob. : 9342122581

ADMISSION NOTICE (Session 2023-24)

EVENING COURSES

1. **P.G. Diploma in Translation Theory and Practice**
   Qualification : Graduate with Hindi and English subjects,
   Duration : One Year

SHORT-TERM COURSES

1. **Hindi Language Skill Certificate Course**
   Qualification : Intermediate
   Duration : 03 Months
2. **Translation Certificate Course**
   Qualification : Graduation in any discipline (It is mandatory to have Hindi as one of the subjects at graduation level)
   Duration : 03 Months
3. **Hindi Copy Editing and Proof Reading Certificate Course**
   Qualification : Graduation in any discipline (It is mandatory to have Hindi as one of the subjects at graduation level)
   Duration : 03 Months

Application form can also be downloaded from our website **www.hindisansthan.in** and can be submitted along with Demand Draft of Rs. 200/- (Rs. Two Hundred only). Demand Draft should be made in favour of **Secretary, Kendriya Hindi Shikshan Mandal, Mysore**. Last date for the submission of the application form is **July 17, 2023.**

- Regional Director

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ ರಸ್ತೆ, ಮೈಸೂರು – 570005,
ದೂರವಾಣಿ/ಫ್ಯಾಕ್ಸ್: 0821–2420624

ಸಂಖ್ಯೆ: ಮೈನಪ್ರಾ/ಅಅ/ಪಿಬಿ/ಟಿಎನ್/02/2023–24 ದಿನಾಂಕ: 15.06.2023

ಇ–ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಮೈಸೂರು ನಗರದ ಹೊರಪರಿಧಿಯ ರಸ್ತೆ (Outer peripheral Road) ನಿರ್ಮಾಣ ಕಾಮಗಾರಿಯ ಕಾರ್ಯಾ ಸಾಧ್ಯತಾ ವರದಿಯನ್ನು ಸಿದ್ಧಪಡಿಸಲು ಆಸಕ್ತ ಆರ್ಹ ಸಮಾಲೋಚಕರುಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ದಿ: 03.07.2023 ರಂದು ಸಂಜೆ 4.00 ಗಂಟೆಯವರೆಗೆ ಸಮಯ ವನ್ನು ನಿಗಧಿಪಡಿಸಲಾಗಿರುತ್ತದೆ. ತಾಂತ್ರಿಕ ಬಿಡ್ ಅನ್ನು ದಿ: 04.07.2023 ರಂದು ಸಂಜೆ 4.30 ಗಂಟೆ ನಂತರ ತೆರೆಯಲಾಗುವುದು.

ಅರ್ಹ ನೋಂದಾಯಿತ ಸಮಾಲೋಚಕರುಗಳು ಕೆ.ಪಿ.ಪಿ.ಪಿ ಪೋರ್ಟಲ್ http://Kppp. karnataka.gov.in ಮುಖಾಂತರ ನಿಯಮಾವಳಿಯಂತೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ 0821–2420624 ರಿಂದ ಹಾಗೂ ಪ್ರಾಧಿಕಾರದ ವೆಬ್‌ಸೈಟ್ www.mudamysore.gov.in ನಲ್ಲಿ ಪ್ರಕಟಣೆಯ ಮಾಹಿತಿಯನ್ನು ಪಡೆಯಬಹುದು.

ಸಹಿ/–ಅಧೀಕ್ಷಕ ಅಭಿಯಂತರರು

